
ನಿರಂತರ..
ಹೊಸ ವರುಷಕ್ಕೆ ಹೊಸದೊಂದು ಯತ್ನ
ಜನೇವರಿ ೨೦೦೬ ಸಂಪುಟ : ೧ ಸಂಚಿಕೆ: ೨

## ನಮ್ಮ ನಮ್ಮ ಕಾಲೇಜುಗಳು... !

**ಬಿ.ವಿ.ಬಿ. ಇಂಜಿನಿಯರಿಂಗ್ ಹಾಗೂ ತಾಂತ್ರಿಕ ಮಹಾವಿದ್ಯಾಲಯ, ಹುಬ್ಬಳ್ಳಿ.**



**ಬಸವೇಶ್ವರ ಇಂಜಿನಿಯರಿಂಗ್ ಮಹಾವಿದ್ಯಾಲಯ, ಬಾಗಲಕೋಟ.**







**ಗೌರವ ಸಂಪಾದಕಿ**

ಮೃಣಾಲಿನಿ. ಎಸ್. ಗುಡಿ

**ಉಪ-ಸಂಪಾದಕ**

ಅರುಣ. ಆರ್.ಯಾದವಾಡ

**ಸಂಪಾದಕೀಯ ವಿಭಾಗ**

ಪ್ರಕಾಶ. ಸಿ. ರಾಜಗೋಳಿ.
ಶುಭಶ್ರೀ. ಜಿ. ಬೆಳಂದೂರ.

**ಸಲಹೆ-ಸೂಚನೆ**

ಶ್ರೀಕಾಂತ್. ಎಸ್. ಕೆ.
ಗಿರೀಶ. ಮೆಟಗುಡಮಠ
ಬಸವರಾಜ. ಆರ್. ಯಾದವಾಡ

**ಮುಖಪುಟ/ಸಂಚಿಕೆ ವಿನ್ಯಾಸ**

ಅರುಣ. ಆರ್.ಯಾದವಾಡ

**ಟಿಪಿಬಳಗ ಇಂಟರ್‌ನೆಟ್ ವಿಳಾಸ**

http://groups.yahoo.com/group/tpbalaga/

**ಟಿಪಿಬಳಗ ಈ-ಮೇಲ್ ವಿಳಾಸ**

tpbalaga@yahoo.com


## ಈ ಸಂಚಿಕೆಯಲ್ಲಿ . . .


**ಪ್ರಿಯಾರಿಟಿಗಳು ಮತ್ತು ಸಂಬಂಧಗಳ ನಡುವೆ ನಾವು ನೀವು**
– ಪ್ರಕಾಶ ಸಿ ರಾಜಗೋಳಿ

**ಆತ್ಮ-ಉಪದೇಶ ! ??** – ಶ್ರೀನಿವಾಸ. ಆರ್. ಗುಡಿ.

**ರುದ್ರರಮಣೀಯ ಯೆಲ್ಲೋಸ್ಟೋನ್ ನ್ಯಾಶನಲ್ ಪಾರ್ಕ್**
– ಶುಭಶ್ರೀ ಜಿ. ಬೆಳಂದೂರ.

**ಮರೆಯಾಗುತ್ತಿರುವ ವಡಪು ಹೇಳುವ ಕಲೆ** – ಶಾಂತಾ ಸಿ. ರಾಜಗೋಳಿ.

**ಹೀಂಗ ಒಂದು ಟ್ರೇನಿಂಗ್ .... !** – ಗಿರೀಶ. ಎಸ್. ಬೆಳಂದೂರ.

**ಫ್ಲಾಸ್ಟ್ ಫ಼ಾರವರ್ಡ್** – ಮೃಣಾಲಿನಿ ಎಸ್. ಗುಡಿ

**ಸಂಕ್ರಾಂತಿ ಹಬ್ಬದ ಖಾದ್ಯಗಳು.** – ಮೀನಾಕ್ಷಿ ಅನಿಲ್ ಅಂಗಡಿ.

**ಬಾರ್ ಬಾರ್ ಎಲ್ಲೋಡಿ ಬಾರ್** – ಗಿರೀಶ ಪಿ. ಮೆಟಗುಡ್ಡಮಠ.

**ನನ್ನ ಕನ್ಯಾನ್ವೇಷಣೆಯ ಪ್ರಸಂಗಗಳು** – ರಾಜು. ಹಿರೇಗೌಡರ .

**ಈಗಿನ ಜೀವನಾನ ಆರಾಮ್ ಐತಿ..** – ತಾಹೀರ್ ಎ. ಸನದಿ.

**ಪರಮಾತ್ಮನ ಪರಿಚಯ** – ಎಮ್.ಬಿ.ರಾಜಗೋಳಿ

**ಬಾಳೆ ಹಣ್ಣಿನ ಸಿಪ್ಪೆ** – ಅರುಣ. ಆರ್. ಯಾದವಾಡ.

**ಬೀಸೂಕಲ್ಲಿನ ಪದಗಳು** – ಶಾಂತಾ ಸಿ. ರಾಜಗೋಳಿ.

**ಅಮೇರಿಕನ್ ಲೈಫ಼ು** – ಶುಭಶ್ರೀ. ಜಿ. ಬೆಳಂದೂರ

**ಹೊಸ ವರುಷ ತರಲಿ ನಮಗೆಲ್ಲ ಹರುಷ** – ಪ್ರಕಾಶ ಸಿ. ರಾಜಗೋಳಿ, ಬೆಂಗಳೂರು

**ಆರೋಗ್ಯ ಭಾಗ್ಯದ ಪ್ರಾಧಾನ್ಯತೆ** – ಶ್ರೀನಿವಾಸ. ಆರ್. ಗುಡಿ.

**ಟಿಪಿಬಳಗ ಪದಬಂಧ** – ಗಿರೀಶ ಎಸ್. ಬೆಳಂದೂರ (ಸದ್ದಾಮ್).

**ಅಂಬಿಗನ ಹಾಡು** – ಶಾಂತಾ ಸಿ ರಾಜಗೋಳಿ.

**ಸರಸ್ವತಿ ಪ್ರಾರ್ಥನೆ** – ಪ್ರಶಾಂತ ಶಿವಶಂಕರ.

**ಅವರ್ಣನೀಯ** – ಪ್ರಶಾಂತ ಶಿವಶಂಕರ.

**ವರುಷದ ಕಂದ** – ಶುಭಶ್ರೀ. ಜಿ. ಬೆಳಂದೂರ.

**ಉಡಿ ತುಂಬುವ ಮತ್ತು ನಾಮಕರಣ ಸಂದರ್ಭದಲ್ಲಿನ ಜಾನಪದ ಗೀತೆಗಳು.**
– ಶಾಂತಾ ಸಿ. ರಾಜಗೋಳಿ.

**ರೋಮಾಂಚಕಾರಿ ಪಯಣ** – ಪ್ರಕಾಶ ಸಿ. ರಾಜಗೋಳಿ.

## ಸಂಪಾದಕೀಯ



ಸ್ನೇಹಿತರೆ,

ಇದೀಗ ನಿಮ್ಮ ಕೈಯಲ್ಲಿ ಅರುಣ ಅವರ ಕನಸಿನ ಕೈಗೂಸು 'ನಿರಂತರ' ದ ಹೊಸ-ವರುಷದ ವಿಶೇಷಾಂಕ. ಕಾರಣಾಂತರಗಳಿಂದ ಹೊಸ-ವರುಷದ ಹೊತ್ತಿಗೆ, ನಿಮ್ಮ ಹಸ್ತ ಸೇರಬೇಕಾಗಿದ್ದ ಈ 'ಹೊತ್ತಿಗೆ', ಸ್ವಲ್ಪ ಹೊತ್ತಾಗಿ, ತಡವಾಗಿ, ನಿಮ್ಮನ್ನ ತಲುಪುತ್ತಿದೆ, ಕ್ಷಮೆಯಿರಲಿ. ಈ ಕಿರು-ಪುಸ್ತಕವನ್ನು ಹೊರ-ತರಲು ಸಹಕರಿಸಿದ ಎಲ್ಲ ಮಿತ್ರ-ಮಂಡಲಿಗೂ ಬಳಗದ ವತಿಯಿಂದ ಧನ್ಯವಾದಗಳು.

ಮೊಟ್ಟ ಮೊದಲು, ಬಳಗದವರಿಗೆ, ಹೊಸ ವರುಷ 2006 ಮತ್ತು ಸಂಕ್ರಾಂತಿ ಹಬ್ಬದ ಶುಭಾಶಯಗಳು. ಈ ಹೊಸ ವರುಷ ತುಂಬಲಿ ನಿಮ್ಮಲಿ ಹೊಸ ಹರುಷ!

ಟಿ.ಪಿ.ಬಳಗ, ಒಂದು ಸೋಜಿಗದ ಹೆಸರು. ಈ ಟಿ.ಪಿ. ಬಳಗ ಅಂದರೆ ಸದ್ಯ ಎರಡು ಅರ್ಥ ಪ್ರಚಲಿತದಲ್ಲಿವೆ. ಒಂದು ಬಿ.ವಿ.ಬಿ.ಯ ಶೈಲಿಯ 'ಟೈಮ್-ಪಾಸ್' ಗುಂಪು ಅಂತ. ಇನ್ನೊಂದು, ಮಿತ್ರ ಗುರು ಅವರ ತಂದೆ, ದಿ॥ಆಶ್ವಥ್ ನಾರಾಯಣ ರಾವ್ ಅವರು ನಗೆ-ಚಾಟಿಕೆಗೆ ಅಂತ ಸೂಚಿಸಿದ 'ತಲೆಕೆಟ್ಟ ಪ್ರಾಣಿ' ಅಥವ 'ತಲೆ ಇಲ್ಲದ ಪ್ರಾಣಿ' ಎಂಬ ಅರ್ಥ! ಕಳೆದ ಹತ್ತು-ಹದಿನೈದು ವರುಷಗಳಿಂದ ಅದೇ ಆತ್ಮೀಯತೆಯನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬರುತ್ತ ಇರುವ ಈ ಬಳಗಕ್ಕೆ, ನಾನು ಕೊಡ-ಮಾಡುವ ಹೆಸರು 'ಟೈಮ್ ಪಾ(ಹಾ)ಳು' ಮಾಡದ ಬಳಗ! (ಇಷ್ಟು ಸಮಯ ಕಳೆದರೂ, ಬದಲಾಗುವ ಸಮಯವು ಈ ಬಳಗವನ್ನು ಹಾಳು ಮಾಡಿಲ್ಲ!)

ಬಿ.ವಿ.ಬಿ. ಗೆಳೆಯರ ಈ ಬಳಗ 90 ರ ದಶಕದಲ್ಲಿ ಆರಂಭವಾದರೂ ಅದಕ್ಕೊಂದು ಅಧಿಕೃತ ಸ್ವರೂಪ ಸಿಕ್ಕಿದ್ದು ಅರುಣ್ ಅವರು ಮೇ 2002 ರಲ್ಲಿ ಅಂತರ್-ಜಾಲ 'ಯಾಹೂ' ವಿನಲ್ಲಿ, 'ಟಿ.ಪಿ. ಬಳಗ' ಎಂಬ ಹೆಸರಿನಿಂದ, ವಿಚಾರ-ವಿನಿಮಯ ವೇದಿಕೆ ಸ್ಥಾಪನೆ ಮಾಡಿದಾಗಲೇ!

ನಾನು ಈ ಬಳಗದ ಸಾಮೀಪ್ಯಕ್ಕೆ ಬಂದಿದ್ದು ಸುಮಾರು ಏಳು ವರುಷಗಳ ಹಿಂದೆ, ಮದುವೆ ಆದಮೇಲೆ. ಹೊರಗಿನವಳಾದ ನನ್ನ, ಈ ಬಳಗದಲ್ಲಿ ಸಹೃದಯತೆಯಿಂದ ಬರಮಾಡಿಕೊಂಡ ಬಳಗದ ಮಿತ್ರರ ಸೌಜನ್ಯಕ್ಕೆ ನಾನು ಚಿರ-ಋಣಿ. ನಾನು ಗಮನಿಸಿದ ಪ್ರಕಾರ, ಇಂತಹ ಗೆಳೆಯರ ಬಳಗ/ಗುಂಪು ಇನ್ನೊಂದಿಲ್ಲ! ದೇಶ-ವಿದೇಶಗಳಲ್ಲಿ ದೂರ-ದೂರವಿದ್ದು, ವೃತ್ತಿಪರ ಜೀವನ, ವೈಯಕ್ತಿಕ/ಸಾಂಸಾರಿಕ ಜೀವನಗಳಲ್ಲಿ ಬಹಳ 'ಮಗ್ನ'ರಾಗಿದ್ದರು ಕೂಡ, ಮಿತ್ರರ ಮಧ್ಯ ಇರುವ ಅನ್ಯೋನ್ಯ ಮಮತೆ-ಅಭಿಮಾನಗಳು ಅನನ್ಯವಾದದ್ದು, ಅದ್ವಿತೀಯವಾದದ್ದು!

ಬಳಗದ ಮಿತ್ರರು ಔದಾರ್ಯತೆ ಮತ್ತು ಸಹಾಯ-ಹಸ್ತಗಳನ್ನ ಕೇವಲ ಟಿ.ಪಿ.ಬಳಗಕ್ಕೆ ಸೀಮಿತಗೊಳಿಸದೆ ಹೊರ-ಜಗತ್ತಿನ ಸಮಸ್ಯೆಗಳಿಗೂ ಸ್ಪಂದಿಸಿದ್ದಾರೆ. ಆಸಿಡ್ ದುರಂತಕ್ಕೆ ಗುರಿಯಾದ ಬಿಜಾಪುರದ ಶಿಕ್ಷಕಿ ತಾರಾ ದೊಡ್ಡಮನಿ ಸಹಾಯಕ್ಕೆ ರೂ.14000 ಕೊಡಮಾಡಿದ್ದು, ಮತ್ತು ಮೊನ್ನೆ ಮಿತ್ರ ಪ್ರಕಾಶ್ ರಾಜಗೋಳಿಯವರ ಕರೆಗೆ ಓಗೊಟ್ಟು, ಉತ್ತರ-ಕರ್ನಾಟಕ ಕವಿ ಶ್ರೀ. ಐರಸಂಗ ಅವರ ಕನ್ನಡ ಪುಸ್ತಕ ಸಹಾಯಾರ್ಥ ಕೊಡಮಾಡಿದ ರೂ. 20,001 ದೇಣಿಗೆ, ಎರಡು ಉದಾಹರಣೆಗಳು. ಗಿರೀಶ್ ಮೆಟಗುಡಮಠ್ ಮತ್ತು ಪ್ರಕಾಶ ರಾಜಗೋಳಿಯವರು ಬಾರಿಸುವ ಕನ್ನಡದ ಡಿಂಡಿಮವು ನಮ್ಮ ಮಿತ್ರ ಬಳಗವಷ್ಟೇ ಅಲ್ಲ, ಬೆಂದಕಾಳೂರಿನಲ್ಲಿ ಮತ್ತು ಕರ್ನಾಟಕದಲ್ಲಿ(?) ಕನ್ನಡದ ಜಾಗೃತಿ ಉಂಟುಮಾಡುವ ಆಳಿಲು-ಸೇವೆಗಳಾಗಿವೆ. ಆರುಣ ಯಾದವಾಡ ಮತ್ತು ಗಂಗಾಧರ ವಾಲಿಯವರ ಸಮಾಜ-ಸೇವೆ ನೆನೆಸದಿರಲಿಕ್ಕಾಗದು. ಪ್ರತ್ಯಕ್ಷವಾಗಿ, ಪರೋಕ್ಷವಾಗಿ, ಅದೆಷ್ಟು ಜನರಿಗೆ ಸಹಾಯ ಮಾಡಿದ್ದಾರೊ, ಕಲ್ಯಾಣದ ಕೆಲಸ ಮಾಡಿಸಿದ್ದಾರೊ, ಅವರಿಗೇ ಇಂದು ಮರೆತಿರಬಹುದು!
ಹೀಗೆ ಈ ಬಳಗದ ಜನರ ವೈವಿಧ್ಯಮಯ ವ್ಯಕ್ತಿತ್ವದಿಂದ ಕನ್ನಡ ನಾಡು, ವಿಶೇಷವಾಗಿ ಉತ್ತರ ಕರ್ನಾಟಕದ ಜನರಿಗೆ, ಸಮಾಜಕ್ಕೆ ಸೇವೆಯೊದಗುತ್ತ ಇದೆ. ಈ ಒಂದು ಸೇವಾ ಕಾರ್ಯಕ್ರಮವನ್ನು ಹೀಗೆಯೆ ವಿಶೇಷ ಕರ್ತವ್ಯಪ್ರಜ್ಞೆಯಿಂದ ಬಳಗದ ಜನರು ಮುಂದುವರಿಸಿಕೊಂಡು ಹೋಗಲು, ದೇವರು ಎಲ್ಲರಿಗೂ ಅನುಕೂಲ ಮಾಡಿಕೊಡಲಿ!

ಇನ್ನು ಕಳೆದ ವರುಷಗಳ ಆಗು-ಹೋಗುಗಳ ಅವಲೋಕಿಸೋಣ:

○ ಗುರು ಅವರ ತಂದೆ ಅಶ್ವಥ್-ನಾರಾಯಣ್ ರಾವ್ ಅವರು ತೀರಿಕೊಂಡಿದ್ದು, ಈ ವರ್ಷದ ದುರಂತಮಯ ಘಟನೆ. ದೇವರು ಅವರ ಆತ್ಮಕ್ಕೆ ಚಿರ-ಶಾಂತಿಯನ್ನೀಯಲಿ.

ಶುಭ-ಸಮಾಚಾರಗಳ ಪಟ್ಟಿ:

1. ಗಿರೀಶ್ ಮೆಟಗುಡಮಠ್ ತಮ್ಮ ವೃತ್ತಿ-ಜೀವನದಲ್ಲಿ ಮಹತ್ವದ ತಿರುವು ತೆಗೆದುಕೊಂಡು, ಹಾರ್ಡವೇರ್ ಕೆಲಸಕ್ಕೆ ತಿಲಾಂಜಲಿ ಇತ್ತು, 'ಕ್ವಾಲಿಟಿ ಅಶುರನ್ಸ್ ಟೆಸ್ಟಿಂಗ್' ನಲ್ಲಿ ತರಬೇತಿ ಪಡೆದು, 'ಬಿಗ್-ಬ್ಲ್ಯೂ' ಐ.ಬಿ.ಎಮ್. ನಲ್ಲಿ ಕೆಲಸ ಗಿಟ್ಟಿಸಿದ್ದು!
2. ಗಂಗಾಧರ ವಾಲಿಯವರ ಅಪಾರ್ಟಮೆಂಟ್ ಗೃಹ-ಪ್ರವೇಶ ಮತ್ತು ಗೃಹಸ್ಥಾಶ್ರಮಕ್ಕೆ ಪೂರ್ಣ ಅರ್ಹತೆ!
3. ಸರ್ವಮಂಗಲ ಮತ್ತು ಆನಂದ ಹಿರೇಮಠ ಅವರ ಎರಡನೆಯ ಪುತ್ರ ಅನೀಶ್ ಆಗಮನ
4. ಆಶಾ ಸೋದರ ಅಜಯ ಮತ್ತು ಕಾವ್ಯ ಪಾಟೀಲ ಅವರ ಪುತ್ರ ಆಗಮನ
5. ಗುರು ಅವರ ಚೊಚ್ಚಲು ವಿದೇಶ-ಪ್ರವಾಸ. ಐ.ಟಿ.ರಂಗಕ್ಕೆ ವಾಪಾಸು ಬಂದ ಒಂದು ವರುಷದ ಆಸು-ಪಾಸಿನಲಿ ಅವರ ಸಾಧನೆ ಗಮನಾರ್ಹ!
6. ರಾಜಗೋಳಿ ಮತ್ತು ಸನದಿ ದಂಪತಿಗಳ 'ಸಂಸಾರ ವಿಸ್ತರಣೆ' ಯ ಶುಭ-ಸಮಾಚಾರ!
7. ಮಿಶ್ರಾ ದಂಪತಿಗಳ ಮತ್ತು ಗುಡಿ ದಂಪತಿಗಳ ಹೊಸ ಕಾರು-ವಾಹನ ಖರೀದಿ.

ಎಲ್ಲರಿಗೂ ಅಭಿನಂದನೆಗಳು ಮತ್ತು ಶುಭಾಶಯಗಳು.

ಇದಷ್ಟೆ ಅಲ್ಲದೆ, ಈ ವರುಷದ ಆರಂಭದಲ್ಲಿ, ಕಲಾಕಾರ್ ಆನಂದ ಯಾದವಾಡ, ಇನ್ನೊಂದು ಮಹತ್ವದ ನಿರ್ಣಯದಲ್ಲಿ, ಐ.ಟಿ. ಉದ್ದಿಮೆಯಿಂದ ಕನ್ನಡ ದೂರದರ್ಶನ ಧಾರಾವಾಹಿ ನಿರ್ಮಾಣ ಮತ್ತು ಗ್ರಾಫಿಕ್ಸ್ ಕ್ಷೇತ್ರಕ್ಕೆ ಧುಮುಕುತ್ತಿರುವದಾಗಿ ಘೋಷಿಸಿದ್ದಾರೆ! ಅವರ ಈ ದಿಟ್ಟ ನಿರ್ಧಾರಕ್ಕೆ, ಕಠಿಣ-ಪರಿಶ್ರಮಕ್ಕೆ ಸಂಪೂರ್ಣ ಯಶಸ್ಸು ದೊರೆತು ಅವರ ಕನಸು ನನಸಾಗಲಿ, ಧಾರವಾಹಿ ಉದ್ಯಮದಲ್ಲಿ ಮತ್ತು ಕನ್ನಡ ನಾಡಿನಲ್ಲಿ ಅವರ ಕಲೆ ಹೆಸರುವಾಸಿಯಾಗಲಿ ಅಂತ ಬಳಗದ ಪರವಾಗಿ ಅವರಿಗೆ ಶುಭ-ಹಾರ್ೈಕೆಗಳು.

ಮತ್ತೆ ಈ ವಿಶೇಷಾಂಕದ ಬಗ್ಗೆ ಹೇಳಬೇಕೆಂದರೆ ಇದು ಅರುಣ ಸಾರಥ್ಯದ ದೀಪಾವಳಿ ವಿಶೇಷಾಂಕವಾದ ನಂತರ ಬರುತ್ತಿರುವ ಎರಡನೆಯ ಸಂಚಿಕೆ. ಬಳಗದ ಮಿತ್ರರಲ್ಲದೆ, ಮಿತ್ರರ ಪರಿವಾರದವರೂ ಬರೆಯಲು ಇಚ್ಛಿಸಿ, ಬರೆದ ಲೇಖನಗಳು ಇಲ್ಲಿವೆ. ಈ ತರದ ಚಟುವಟಿಕೆ ಒಂದು ಕುಟುಂಬಕ್ಕೆ ಸೀಮಿತವಾಗಿರುವ ಪರಿವಾರದವರ ವಿಚಾರ ಧಾರೆ/ ವ್ಯಕ್ತಿತ್ವವನ್ನು ಬಳಗದ ಉಳಿದ ಮಿತ್ರರಿಗೆ ಪರಿಚಯಿಸಬಹುದು, ಹತ್ತಿರ ತರಬಹುದು ಅನ್ನುವ ಉದ್ದೇಶ. ಈ ಒಂದು ಕ್ರಿಯೆ, ಮುಂದಿನ ಸಂಚಿಕೆಯಲ್ಲಿ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಮಿತ್ರರು ಮತ್ತು ಅವರ ಕುಟುಂಬದವರು ಲೇಖನ/ಕವನಗಳನ್ನ ಕಳಿಸುವಂಥ ಪ್ರತಿ-ಕ್ರಿಯೆ ನಿರ್ಮಾಣ ಮಾಡಲಿ ಅಂತ ನಮ್ಮ ಅಭಿಲಾಷೆ. ನೆನಪಿರಲಿ ಇಲ್ಲಿ ನಮ್ಮ ಭಾಷೆ, ವ್ಯಕ್ತ-ಪಡಿಸುವ ಶೈಲಿಗಿಂತ ಹಿಂದಡಗಿದ ಭಾವ ಮತ್ತು ಎಲ್ಲರನ್ನು ತಲುಪುವ ಗುರಿ ಮುಖ್ಯ. ಯಾವುದಕ್ಕೂ ನಿಮ್ಮ ಪ್ರೋತ್ಸಾಹ, ಟೀಕೆ-ಟಿಪ್ಪಣೆ ಅವಶ್ಯಕ. ಬನ್ನಿ ಎಲ್ಲರೂ, ಈ ಗೆಳೆತನದ ಬಳ್ಳಿಯ ಇನ್ನಷ್ಟು ಬೆಳೆಸೋಣ.

ಆಯ್ತು ಇನ್ನೂ ಜಾಸ್ತಿ ಸಮಯ ತೆಗೆದುಕೊಂಡು ನಿಮ್ಮ ರಸ-ಭಂಗ ಮಾಡಲಾರೆ.
ಇಕೋ ಇಲ್ಲಿದೆ ನಿಮ್ಮ ನೆಚ್ಚಿನ '**ನಿರಂತರ**'!

ಮತ್ತೊಮ್ಮೆ ಶುಭಾಶಯಗಳೊಂದಿಗೆ,
- ಮೃಣಾಲಿನಿ ಗುಡಿ.

## ಪ್ರಿಯಾರಿಟಿಗಳು ಮತ್ತು ಸಂಬಂಧಗಳ ನಡುವೆ ನಾವು ನೀವು – ಪ್ರಕಾಶ ಸಿ ರಾಜಗೋಳಿ. ಬೆಂಗಳೂರು



ಸಧ್ಯ ಬೆಂಗಳೂರಿನ ಬ್ರಿಸಲಕಾನ್ ಇಂಡಿಯಾ ಸಂಸ್ಥೆಯಲ್ಲಿ ಎಸ್.ಎ.ಪಿ ಕನ್ಸಲ್ಟಂಟ್ ಆಗಿ ಕಾರ್ಯ ನಿರ್ವಹಿಸುತ್ತಿರುವ ನಮ್ಮ **ಸ್ಯಾಪ್ ರಾಜ** ಕನ್ನಡದಲ್ಲಿ ಲೇಖನ ಬರೆಯುವ ಪ್ರಮುಖ ಹವ್ಯಾಸ ಹೊಂದಿದ್ದಾರೆ. ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಇವರ ಲೇಖನಗಳು ಪ್ರಕಟಗೊಂಡಿವೆಯಲ್ಲದೇ ಕೆಲ ಕಾರ್ಯಕ್ರಮಗಳು ಆಕಾಶವಾಣಿ ಧಾರವಾಡ ಮತ್ತು ಬೆಂಗಳೂರು ಕೇಂದ್ರಗಳಿಂದ ಪ್ರಸಾರಗೊಂಡಿವೆ. 2003 ಮೇ 25 ರಂದು ದೀಪಾ ಅವರ ಕೈಹಿಡಿದಿರುವ ಇವರು ಇದೀಗ ತಂದೆಯಾಗುವ ಸಂಭ್ರಮದಲ್ಲಿದ್ದಾರೆ.

ತಾಯಿಗೆ ತನ್ನ ಮಗುವೇ ಸರ್ವಸ್ವ. ಒಂದು ಕ್ಷಣವೂ ಬಿಟ್ಟಿರಲಾರದ ಅನಿವಾರ್ಯತೆ, ಅಕ್ಕರತೆ, ಮಮತೆ, ಪ್ರೀತಿ. ಅದು ನಕ್ಕರೆ ಸಂತೋಷ ಅತ್ತರೆ ಕರುಳು ಕಿತ್ತು ಬಂದಂಥ ಅನುಭವ. ಮಗು ತಪ್ಪು ಮಾಡಿದರೆ ಹುಸಿಮುನಿಸು ತೋರಿಕೆ, ಇಲ್ಲಾ ಸ್ವಲ್ಪ ಮಾತಿನ ಗದರಿಕೆ, ಕೈಮೀರಿದರೆ ಪೆಟ್ಟು ನೀಡುವದು ಅನಿವಾರ್ಯ. ಮಗು ಬೆಳೆದಂತೆಲ್ಲಾ ಈ ಅಕ್ಕರತೆ, ಮಮತೆ ಸ್ವಲ್ಪ ಮಾಯವಾಗುವದು ಸಹಜ. ಚಿಕ್ಕ ಮಗು ದೇವರ ಸಮಾನ. ಏನು ಮಾಡಿದರೂ ಸರಿಯೇ. ಸಹಿಸಿಕೊಳ್ಳುತ್ತಾಳೆ ತಾಯಿ. ಆದರೆ ಬರುಬರುತ್ತಾ ಮಗುವಿನ ಅವೇ ತಪ್ಪುಗಳು ದೊಡ್ಡದಾಗಿ ಕಾಣಿಸುತ್ತವೆ. ಶಿಕ್ಷೆಗೆ ಮೂಲವಾಗುತ್ತವೆ. ಮಗುವಿಗೂ ಸಹ ಹಾಗೆಯೇ ತನ್ನ ತಾಯಿ ತಂದೆ ಇಲ್ಲವೇ ಅಜ್ಜ, ಅಜ್ಜಿ, ಅಣ್ಣ, ಅಕ್ಕ ಆದರಾಯಿತು ಬೇರೆ ಜಗತ್ತೇ ಬೇಕಾಗಿಲ್ಲ. ಬರುಬರುತ್ತಾ ಮಗು ದೊಡ್ಡದಾದಂತೆ ಇವರಿಂದ ಕ್ರಮೇಣ ದೂರವಾಗುವದು ಸಹಜ ಮತ್ತು ಪ್ರಕೃತಿ ನಿಯಮ.

ಹೈಸ್ಕೂಲು ಇಲ್ಲವೆ ಕಾಲೇಜು ಓದುತ್ತಿರುವ ಹುಡುಗ ಹುಡುಗಿಯರಿಗೆ ಓದು, ಕ್ರೀಡೆ ಅಥವಾ ತತ್ಸಂಬಂಧಿ ಹವ್ಯಾಸ ಮುಂತಾದವುಗಳೇ ಜೀವನದಲ್ಲಿ ಮಹತ್ವದವು. ಅವುಗಳನ್ನು ಪಡೆಯಲು, ಸಾಧಿಸಲು ಬೇರೆಲ್ಲ ವಿಷಯ, ವಿಚಾರ, ಸಂಬಂಧಗಳನ್ನು ದೂರವಾಗಿಸಿ ಜಂಗಿ ನಿಕಾಲಿ ಕುಸ್ತಿಯ ಪೈಲ್ವಾನರಂತೆ ಹೆಣಗುತ್ತಾರೆ. ಹೆಚ್ಚಿನ ಪಾಲು ಸಾಧಿಸುತ್ತಾರೆ. ಗೆದ್ದಾಗ ಕುಣಿದು ಕುಪ್ಪಳಿಸುತ್ತಾರೆ. ಸ್ವರ್ಗ ಮೂರೇ ಗೇಣು ಎನ್ನುವಂತೆ ಸಂತಸ ಪಡುತ್ತಾರೆ. ಇಲ್ಲವೇ ಕೆಲವೊಮ್ಮೆ ಸೋಲೊಪ್ಪಿಕೊಳ್ಳುತ್ತಾರೆ ಜಗತ್ತೇ ತಲೆ ಮೇಲೆ ಬಿದ್ದಂತೆ ನಿರಾಶರಾಗುತ್ತಾರೆ. ಇದೇ ತರಹದ ಕೆಚ್ಚು ಛಾತಿ ಎಲ್ಲಾ ಕಾಲದಲ್ಲಿಯೂ ಒಚಿದೇ ತರಹ ಇರುತ್ತದೆಯೇ?

ಪ್ರೀತಿಸುವ ಹುಡುಗ ಅಥವಾ ಹುಡುಗಿಗೆ ಸಂಗಾತಿಯೇ ಸರ್ವಸ್ವ. ಒಂದು ಕ್ಷಣವೂ ಅಗಲಿರಲಾರದ ಭಾವುಕತೆ. ವಿಷಯಗಳನ್ನು ಹುಡುಕಿ ಹುಡುಕಿ ಗಂಟೆಗಟ್ಟಲೇ ಮಾತನಾಡುತ್ತಾರೆ. ಪತ್ರ, ಫೋನು, ಈ–ಮೇಲು ಬಾರದೆ ಇದ್ದರೆ ಜಗತ್ತೇ ಮುಳುಗಿ ಹೋದ ಅನುಭವ. ಒಂದು ನಲುಮೆಯ ಮಾತಿಗೆ, ದೂರದ ಫೋನಿಗೆ, ಪ್ರೀತಿಯ ಮುತ್ತಿಗೆ, ಬರ್ತ್‌ಡೇ ಗ್ರೀಟಿಂಗ್ ಕಾರ್ಡಿಗೆ, ಭಾವನೆಗಳನ್ನು ಹೊತ್ತು ತರುವ ಪತ್ರಕ್ಕೆ, ಸಮಕ್ಷಮ ಭೇಟಿಗೆ ಅದೇನು ತಹತಹಿಕೆ, ಯಾತನೆ, ಕಾಯುವಿಕೆ ಅನುಭವಿಸಿದವರೇ ಬಲ್ಲರು. ಹೆತ್ತು ಹೊತ್ತು ಸಾಕಿದ ತಂದೆ ತಾಯಿಗಳು, ಹಲವಾರು ರೀತಿಯಲ್ಲಿ ಸಹಕರಿಸಿದ ಸಂಬಂಧಿಗಳು, ಹೊಗಳಿ–ಬೈದು ಬುದ್ಧಿ ಹೇಳಿದ ಹಿತೈಷಿಗಳು, ಸುಖ ದುಃಖಗಳಲ್ಲಿ ಸಹಭಾಗಿಯಾದ ಮಿತ್ರರು ಎಲ್ಲರೂ ಗೌಣ. ಪ್ರೀತಿಯ ಬಿಸಿ ತಣ್ಣಗಾಗುವವರೆಗೆ ಎಲ್ಲವೂ ಇದೆ ತರಹ. "ಪ್ಯಾರ್ ಕಿಯಾ ತೊ ಡರನಾ ಕ್ಯೊಂ" ಅನ್ನೋ ರೀತಿ. ಮನೆ ನಡೆಸುವ ಜವಾಬ್ದಾರಿ, ಮಕ್ಕಳನ್ನು ಸಾಕುವ ಜವಾಬ್ದಾರಿ ಶುರುವಾಗುವವರೆಗೆ ಇದರ ಮುಂದುವರಿಕೆ.

ಮದುವೆಯಾದ ಹೊಸದರಲ್ಲಿ ಗಂಡನಿಗೆ ಹೆಂಡತಿ ಅಥವಾ ಹೆಂಡತಿಗೆ ಗಂಡ ಜೀವ, ಜೀವನ, ಜಗತ್ತು ಎಲ್ಲಾ. ಒಬ್ಬರನ್ನೊಬ್ಬರು ಬಿಟ್ಟಿರಲಾರರು ಎನ್ನುವ ಅನಿವಾರ್ಯತೆ, ಅನ್ಯೋನ್ಯತೆ, ಅನುರಾಗ, ಆತ್ಮೀಯತೆ. ಕಾಲ ಕ್ರಮೇಣ ಇದೇ ಅನ್ಯೋನ್ಯತೆ ಇರುತ್ತದೆ ಎಂದು ಹೇಳಲು ಬಾರದು. ಮದುವೆಯ ಹೊಸದರಲ್ಲಿ ಗಂಡನಿಗೆ ಹೆಂಡತಿ ಮಾಡಿದ ಉಪ್ಪಿಲ್ಲದ ಉಪ್ಪಿಟ್ಟು ಅಪ್ಯಾಯಮಾನ. ಅರೆಬೆಂದ ಪಲ್ಲೆಯೂ ಅಮೃತಕ್ಕೆ ಸಮಾನ. ಹೊತ್ತಿದ ಚಪಾತಿಯೂ "ಇಟ್ಸ್ ಓಕೆ". ಮುಂದೆ ಹೆಂಡತಿ ಪಾಕಪ್ರವೀಣೆಯಾದರೂ "ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲು" ಎಂಬಂತೆ ಏನಾದರೂ ಒಂದು ತಪ್ಪು ಕಾಣಸಿಗುತ್ತದೆ. ಬಯ್ಯಲು ಒಂದು ದಾರಿ ಸಿಗುವದೇ ತಡ ಬಾಯಿಗೆ ಬ್ರೇಕೇ ಇಲ್ಲ.

ಮದುವೆಯ ಆರಂಭದಲ್ಲಿ ಗಂಡ ತಂದ ಯಾವುದೇ ಉಡುಗೊರೆಯೂ ಅದೆಷ್ಟು ಇಷ್ಟ ಹೆಂಡತಿಗೆ. ಅದೆಷ್ಟು ಹೊಗಳುವದು, ಬೇರೆಯವರಲ್ಲಿ ಹೇಳಿಕೊಳ್ಳುವದು. ನನ್ನ ಗಂಡನಂಥವರು ಬೇರಾರಿಲ್ಲ ಎಂದು ಬೀಗುತ್ತಾಳೆ. ಕಾಲಕ್ರಮೇಣ ಗಂಡ, ಹೆಂಡತಿಯ ಎದುರು ರೇಷ್ಮೆ ಸೀರೆಗಳ ರಾಶಿ ಹಾಕಿದರೂ, ಬಂಗಾರದ ಅಂಗಡಿಯನ್ನೇ ತಂದು ಅಡುಗೆ ಮನೆಯಲ್ಲಿಟ್ಟರೂ "ನೀವೂ ಇದೀರ ದಂಡಕ್ಕೆ, ಏನೂ ಕೊಡಿಸುವದೇ ಇಲ್ಲ" ಎನ್ನುವ ತಗಾದೆಗಳಿಗೆ ಕೊರತೆಯೇನಿಲ್ಲ. ಈ ಮೂದಲಿಕೆಗಳಿಗೆ ಕೊನೆ ಮೊದಲಿಲ್ಲ.

ಇನ್ನು ವಾನಪ್ರಸ್ಥದ ಕಡೆ ಮುಖ ಮಾಡಿರುವ ವೃದ್ಧರಿಗೆ ಜಗತ್ತೇ ನೀರಸ, ಶೂನ್ಯ. ಕಾಲ ಕೆಟ್ಟು ಹೋಗುತ್ತಿದೆ ತಾವು ಚಿಕ್ಕವರಿದ್ದಾಗ ಕಾಲ ಎಷ್ಟು ಛಲೋ ಇತ್ತು ಎನ್ನುವ ಹಳಹಳಿ. ತಮ್ಮವರೇ ತಮ್ಮನ್ನು ನೋಡಿಕೊಳ್ಳದಾದಾಗ "ಊರು ಹೋಗು ಅನ್ನುತ್ತೆ ಕಾಡು ಬಾ ಅನ್ನುತ್ತೆ" "ನಮ್ಮದೇನು ಬಿಡ್ರಿ ಇಂದು ಮನ್ಯಾಗ ನಾಳೆ ಕುಣ್ಯಾಗ" ಎನ್ನುತ್ತಾ ತಾವು ಇದುವರೆಗೆ ಬದುಕಿ ಬಾಳಿದ್ದೇ ಅಟ್ಟರ್ ವೇಸ್ಟು ಎನ್ನುವಂತೆ ಮಾತನಾಡುತ್ತಾರೆ. ತಮ್ಮೊಡನೆ ಬಾಳು ಸವೆಸಿದ, ಕಷ್ಟ ಸುಖಗಳಲ್ಲಿ ಸಹಭಾಗಿಗಳಾದ ಜೀವನ ಸಂಗಾತಿಗಳೇ ಹಳೆ ರದ್ದಿ ಪೇಪರುಗಳು!!!!!!!! ಕೆಲಸಕ್ಕೆ ಬಾರದ, ಊಟಕ್ಕೆ ದಂಡವಾದ, ಭೂಮಿಗೆ ಭಾರವಾದ ಜೀವಗಳು!!!!!!!!!

ಇದು ಹೀಗೇಕಾಗುತ್ತದೆ? ಎಲ್ಲರೂ ಇವನ್ನೆಲ್ಲಾ ಅನುಭವಿಸಲೇಬೇಕಾ? ಇದು ಅನಿವಾರ್ಯವೆ? ಅಂತ ನಾವೆಲ್ಲ ವಿಚಾರಿಸಿ ನೋಡಿದರೆ ಉತ್ತರ ನಮಗೇ ಹೊಳೆಯುತ್ತದೆ. ಜೀವನದ ಬೇರೆ ಬೇರೆ ಘಟ್ಟಗಳಲ್ಲಿ ನಮಗೆ ಪ್ರಿಯಾರಿಟಿಗಳು ಬದಲಾದಂತೆ ಸಂಬಂಧಗಳು ಸಹ ಬದಲಾಗುತ್ತವೆ. ಈ ಪ್ರಿಯಾರಿಟಿಗಳೆಂಬ ಜೇಡರ ಬಲೆಯಲ್ಲಿ ಸಿಲುಕಿದ ನಾವು-ನೀವು ಬದಲಾಗಲೇ ಬೇಕಾಗುವ ಅನಿವಾರ್ಯತೆಗೆ ಒಳಗಾಗುತ್ತೇವೆ. "ಸಣ್ಣಾಂವಿದ್ದಾಗ ಎಷ್ಟು ಶ್ಯಾಣ್ಯಾ ಇದ್ದ ಈಗ ನೋಡು ಹೆಂಗ ಆಗ್ಯಾನ" "ಯಾ ಹುಡುಗಿ ಹಿಂದ ಬಿದ್ದಾನೋ ಗೊತ್ತಿಲ್ಲಾ ಅಪ್ಪ ಬ್ಯಾಡಾ ಅವ್ವ ಬ್ಯಾಡಾ" "ತಾನು ತನ್ನ ಗಂಡ ಮಕ್ಕಳು ಆದರ ಆತು ಆಕಿಗೆ ಅತ್ತಿ ಮಾಂವ ಯಾಕ ಬೇಕು" "ಮೊದಲ ತಂದಿ ತಾಯಿ ಅಣ್ಣ ತಮ್ಮ ಅಕ್ಕ ತಂಗಿ ಅಂತಿದ್ದ ಈಗ ನೋಡ್ರಿ ಮದುವಿ ಆದಮ್ಯಾಲ ಹೆಂತಿ ಒಬ್ಬಾಕಿ ಆದ್ರ ಆತು ಜಗತ್ತ ಬ್ಯಾಡ" ಇತ್ಯಾದಿ ಇತ್ಯಾದಿ ಮಾತುಗಳನ್ನು ನಾವೆಲ್ಲ ಒಂದಲ್ಲ ಒಂದು ಸಂದರ್ಭದಲ್ಲಿ ಕೇಳಿಯೇ ಇರುತ್ತೇವೆ ಇಲ್ಲವೆ ಕೇಳಲಿದ್ದೇವೆ!!!!!

ಜೀವನ ಅನ್ನೊದು ಹಗ್ಗದ ಮೇಲಿನ ನಡುಗೆಯ ಹಾಗೆ ಸ್ವಲ್ಪ ಎಚ್ಚರ ತಪ್ಪಿದರೂ ಅಪಾಯ ತಪ್ಪಿದ್ದಲ್ಲ. ಅಡಕೊತ್ತಿನಲ್ಲಿ ಸಿಕ್ಕ ಅಡಕೆಯ ಹಾಗೆ. ಜೀವನವೆಂಬ ರಥದ ಎರಡು ಗಾಲಿಗಳಾದ ಗಂಡ ಹೆಂಡರಿಗೆ ಎದುರಾಗುವ ಸಂದರ್ಭಗಳು, ಸಮಸ್ಯೆಗಳು "ಅತ್ತ ದರಿ ಇತ್ತ ಪುಲಿ" ಎನ್ನುವಂತಿರುತ್ತವೆ. ಎಲ್ಲವನ್ನು, ಎಲ್ಲರನ್ನು ಸಂಭಾಳಿಸಿಕೊಂಡು ಹೋಗಬೇಕು. ಇದು ಎಷ್ಟೊಂದು ಕಷ್ಟ ಅನ್ನೋದು ಅನುಭವಿಸಿದವರಿಗೇ ಗೊತ್ತು. ಹಾಗಾದರೆ ಈ ಹಾಳು ಸಂಸಾರವೇ ಸಾಕು ಎಂದು ಸಂಬಂಧಗಳಿಗೆಲ್ಲಾ ರಿಸೈನ್ ಮಾಡಿ ಸನ್ಯಾಸ ದೀಕ್ಷೆ ತೊಟ್ಟು ಹಿಮಾಲಯಕ್ಕೆ ಹೋಗಿ ಬಿಡುವದೇ ಸೂಕ್ತ ಎಂದು ಹಲವಾರು ಬಾರಿ ಅನ್ನಿಸುತ್ತಲ್ಲವೆ? ಆದರೆ ಉತ್ತರ ಅದಲ್ಲಾ. ಶರಣರು ಹೇಳಿದಂತೆ "ಸಂಗದೊಳಿದ್ದು ಸಾಧಿಸಬೇಕು" ದಾಸರು ಹೇಳಿದಂತೆ "ಈಸಬೇಕು ಇದ್ದು ಜಯಿಸಬೇಕು".

ಈ ಬದಲಾಗುವ ಪ್ರಿಯಾರಿಟಿಗಳ ಮತ್ತು ಸಂಬಂಧಗಳ ನಡುವೆ ಸತತವಾಗಿ ಹತ್ತಕ್ಕೂ ಹೆಚ್ಚು ವರ್ಷಗಳಷ್ಟು ನಾವು ಟಿಪಿ ಬಳಗದ ಸದಸ್ಯರು ನಡೆದುಕೊಂಡು ಬಂದಿರುವ ರೀತಿ ಒಂದು ಮಾದರಿಯೇ ಸರಿ. ಹಾಗೆಂದ ಮಾತ್ರಕ್ಕೆ ನಮ್ಮಲ್ಲಿ ಮನಸ್ತಾಪಗಳು, ಕಿತ್ತಾಟಗಳು, ಜಗಳಗಳು, ಝಟಾಪಟಿಗಳು ಆಗಿಯೇ ಇಲ್ಲ ಎಂದರೆ ತಪ್ಪಾದೀತು. ಆದರೆ ಅಂತಹ ಯಾವುದೇ ಸಂದರ್ಭದಲ್ಲಿ ನಾವೇ ಫಿರ್ಯಾದಿದಾರರು! ನಾವೇ ವಕೀಲರು!! ಮತ್ತು ನಾವೇ ನ್ಯಾಯಾಧೀಶರು!!! ನಾವು ಬಳಗ ಸ್ಥಾಪಿಸಿದಾಗ ಹೆಚ್ಚಿನವರು ಬ್ರಹ್ಮಚಾರಿಗಳೇ! ಈಗ ಬಳಗದಲ್ಲಿ ಇಬ್ಬರನ್ನುಳಿದು ಎಲ್ಲರೂ ಚತುರ್ಭುಜರೇ (ಮದುವೆಯಾದವರು)!! ಅಷ್ಟೇ ಏಕೆ ಬಹುಪಾಲು ಸದಸ್ಯರು ಡ್ಯಾಡಿ ಮಮ್ಮಿಗಳೇ!!! ನಾವೆಲ್ಲ ನಮ್ಮ ನಮ್ಮ ಸಂಸಾರ ಸಾಗರದಲ್ಲಿ ಸಿಗಿಬಿದ್ದಿದ್ದರೂ, ಬದಲಾದ ಪ್ರಿಯಾರಿಟಿಗಳ ಮತ್ತು ಸಂಬಂಧಗಳ ಮಧ್ಯೆ ಬದಲಾಗಿದ್ದರೂ ನಾವೆಲ್ಲ ಬದಲಾಗಿಲ್ಲ. ನಮ್ಮಲ್ಲಿನ ಒಗ್ಗಟ್ಟು, ಅಂತಃಸತ್ವ ಅಡಗಿಲ್ಲ. ಅದು ಶುಕ್ಲಪಕ್ಷದ ಚಂದಿರನಂತೆ ಬೆಳಗುತ್ತಲೇ ಇರಲಿ. ಇದನ್ನು ಹೀಗೆಯೆ ಮುಂದುವರೆಸಿಕೊಂಡು ಹೋಗೋಣ.

## ಆತ್ಮ–ಉಪದೇಶ ! ?? – ಶ್ರೀನಿವಾಸ. ಆರ್. ಗುಡಿ. ಹರ್ನ್‍ಡಾನ್, ವಾಷಿಂಗ್ಟನ್ ಡಿ.ಸಿ. ಯು.ಎಸ್.ಎ



ನಮ್ಮ ಟಿಪಿತಾರೆಗಳಲ್ಲಿ ಮಹಾತಾರೆ..ವಿಶೇಷ ತಾರೆಗಳಲ್ಲಿ ಇವರೂ ಒಬ್ಬರು. ಗಾಯಕ, ಕವಿ, ಲೇಖಕ, ವಿಮರ್ಶಕ, ವಿಚಾರವಾದಿ ಹಾಗೂ ಇದಕ್ಕೆಲ್ಲಾ ಅಪವಾದವೆಂಬಂತೆ ಕಟ್ಟಾ ಸಾಫ್ಟ್‌ವೇರ್ ಇಂಜಿನಿಯರ್. ನಮ್ಮ ಬಿ.ಇ. ಸಹಪಾಠಿ, ಟಿಪಿಬಳಗದ ಮೂಲ ಪಿತಾಮಹರಲ್ಲಿ ಒಬ್ಬರಾದ **ಶ್ರೀನಿವಾಸ** ಅಲಿಯಾಸ್ ಗುಂಡು ಅಲಿಯಾಸ್ ಪ್ರೀತಿಯಿಂದ ಪಿವಿಎನ್ (ಈ ಪದವಿಯನ್ನು ಅವರು ಇದುವರೆಗೆ ಬಿಟ್ಟು ಕೊಟ್ಟಿಲ್ಲ. ಆ ಮಾತು ಬೇರೆ.), ಓದಿದ್ದೆಲ್ಲಾ ಹುಬ್ಬಳ್ಳಿಯಲ್ಲಿ. ಮೆಚ್ಚಿನ ಸಂಗಾತಿ ಮೃಣಾಲಿನಿ ಹಾಗೂ ಮಗಳು ಮಹೀ ಇದು ಅವರ ಕುಟುಂಬ. ಸಧ್ಯಕ್ಕೆ ಅಮೇರಿಕೆಯಲ್ಲಿ ನೆಲೆಸಿರುವ ಗುಂಡು ಅವರ ಕನ್ನಡ ಸಾಹಿತ್ಯ ಅಧ್ಯಯನದ ಬಗ್ಗೆ ಹೆಚ್ಚಿಗೆ ಹೇಳುವದೇನಿದೆ ..? ನೀವೇ ಓದಿ ನೋಡಿ . . . . !



**ಅಂದು**




**ಇಂದು**

### ಹಿನ್ನೆಲೆ :

ಈ ಕೆಳಗಿನ ಡಾ|| ಕಣವಿಯವರ ಕವನ ನಾನು ಕಾಲೇಜಿನಲ್ಲಿದ್ದಾಗ 'ಸಮಯದ ಐಶ್ವರ್ಯ' ಇರುವಾಗ ಓದಿ ಡೈರಿಯಲ್ಲಿ ಗೀಚಿಕೊಂಡಿದ್ದೆ. ಬೆಂಗಳೂರಿನ ಯಶವಂತಪುರ, ಮತ್ತಿಕೆರೆಯಲ್ಲಿದ್ದಾಗ ಮಿತ್ರ–ಮಂಡಳಿ ನಡುವೆ ಆಗಾಗ ಈ ಕವನ ಓದುತ್ತಿದ್ದೆ. ಆಗ ತಾನೆ ಕಾಲೇಜು ಓದು ಮುಗಿಸಿ ಹೊಟ್ಟೆಪಾಡಿಗೆ ಬೆಂಗಳೂರಿಗೆ ಬಂದು, ಆ ಕೆಲಸ ಈ ಕೆಲಸ ಅಂತ ಪಟ್ಟು ಹಿಡಿಯದೇ ಸಿಕ್ಕ ಸಣ್ಣ–ಪುಟ್ಟ ನೌಕರಿಯನ್ನು ಹಿಡಿದು, ನಮ್ಮ ವೃತ್ತಿ–ಜೀವನದ ಶ್ರೀಗಣೇಶಾಯನಮಃ ಮಾಡಿದ್ದೆವು. ಅದರ ಉದ್ದೇಶ, ಒಂದು ಚಿಕ್ಕ ಕೆಲಸದಲ್ಲಿ ಇದ್ದುಕೊಂಡೇ, ನಿಧಾನವಾಗಿ ಪ್ರಯತ್ನ ಪಡುತ್ತ, ಒಂದು ಒಳ್ಳೆಯ ವೃತ್ತಿಗಳಿಸಲು ಬೇಕಾದ ತರಬೇತಿ ಪಡೆಯುವದು ಮತ್ತು ತಯಾರಿ ಮಾಡಿಕೊಳ್ಳುವದು. ಮಧ್ಯಮ–ವರ್ಗದ ಉತ್ತರ–ಕರ್ನಾಟಕದ ಹುಡುಗರಿಗೆ ಇದಕ್ಕಿಂತ ಹೆಚ್ಚಿನ ಆಯ್ಕೆಗಳಿರಲಿಲ್ಲ ಆಗ. ಡೆಕ್ಕನ್–ಹೆರಾಲ್ಡ್‌ನ ಉದ್ಯೋಗ–ಜಾಹೀರಾತು ಪುಟಗಳನ್ನು ತಿರುವುತ್ತ, ಕಂಡ–ಕಂಡಲ್ಲಿ ಅರ್ಜಿ–ಗುಜರಾಯಿಸುತ್ತ, ದೊಡ್ಡ ವ್ಯಕ್ತಿಗಳೆನಿಸಿಕೊಂಡವರ ಶಿಫಾರಸ್ಸಿಗೆ ಸುತ್ತುತ್ತ, ಕಂಪನಿಗಳು ಒಡ್ಡುವ ಲಿಖಿತ ಪರೀಕ್ಷೆಗಳು, ಇಂಟರವ್ಯುಗಳನ್ನು ಎದುರಿಸುತ್ತ, ಒಂದು ಒಳ್ಳೆಯ ನೌಕರಿಗೆ ಹಂಬಲಿಸುತ್ತಿದ್ದ ದಿನಗಳು ಅವು..!

ಈ ಐ.ಟಿ. ಬೂಮ್ ಆಗ ತಾನೇ ಉದಯವಾಗುತ್ತಿದ್ದ ಕಾಲ. Software job ಅಥವಾ hardware job, Govt ಅಥವಾ Private job, ಹುಬ್ಬಳ್ಳಿ/ಧಾರವಾಡ ಅಥವಾ ಬೆಂಗಳೂರು/ಬಾಂಬೆ ಅಂತೆಲ್ಲ ಗೊಂದಲಮಯವಾಗಿದ್ದ ದಿನಗಳು. ಆ confusing ದಿನಗಳಲ್ಲಿ, ನಮ್ಮ ಪ್ರಯತ್ನಗಳು ಆಗಾಗ ವಿಫಲವಾದಾಗ, ಈ ಸೋಲುಗಳಿಗೆ ಶರಣಾಗದಿರಲು ಏನೇನೊ ಸಾಂತ್ವನ ಹೇಳಿಕೊಳ್ಳುತ್ತಿದ್ದೆವು. ಈ ಕವನ ಓದುತ್ತಿದುದು ಅಂಥದೇ ಒಂದು ಪ್ರಯತ್ನ. ನಮಗೆ ಸಿಕ್ಕ ಸಣ್ಣ–ಪುಟ್ಟ ನೌಕರಿಗಳಲ್ಲಿ ನಾವು ನಿಲ್ಲುವದಿಲ್ಲ/ನಿಲ್ಲುವದು ಬೇಡ ಎಂಬುದನ್ನು ನಮಗೆ ನಾವೇ ಹೇಳಿಕೊಳ್ಳುವ, ಮರಳಿ ಯತ್ನವ ಮಾಡಲು ಉತ್ತೇಜನ ನೀಡಿಕೊಳ್ಳುವ ಪ್ರಯತ್ನ ಆಗಿತ್ತು.

ಇಂದು ನಮ್ಮ ಪ್ರಯತ್ನಗಳಿಗೆ ದೈವೇಚ್ಛೆಯ ಬೆಂಬಲ ದೊರೆತು ಎಲ್ಲ ಇಂದು ಒಂದು ನೆಲೆ ಕಂಡು ಕೊಂಡಿದ್ದೇವೆ. ಎಲ್ಲರೂ ತಮ್ಮ ತಮ್ಮ ಜೀವನದ ಹೆದ್ದಾರಿಗಳಲ್ಲಿ ಬಹು ಮುಂದೆ ಮುಂದೆ ಹೋಗಿ, ಹಿಂದೆ ತಿರುಗಿ ನೋಡಲು ಸಾಧ್ಯವಿಲ್ಲದ, ಸಮಯವಿಲ್ಲದ ಸಂದರ್ಭದಲ್ಲಿ ಎಲ್ಲರನು ಒಟ್ಟುಗೂಡಿಸಿ ಒಂದು 'ಸಂತೋಷ–ಕೂಟ' ಅಥವಾ 'ಮಾನಸಿಕ್–ಮೆಹಫಿಲ್'

ಮಾಡುವದಾಗಲಿ, ಹರಟೆ/ವಾದ–ವಿವಾದದ ಗೋಷ್ಠಿ/ಕವನ ವಾಚನ, ಗಾಯನ ಕಾರ್ಯಕ್ರಮ ಹಮ್ಮಿಕೊಳ್ಳುವದು ಕಲ್ಪನೆಯಲ್ಲಿಯೂ ಸಾಧ್ಯವಾಗಲಿಕ್ಕಿಲ್ಲ.

ಬದುಕಿನ ಈ ಹಂತದಲ್ಲಿ, ಸಿಕ್ಕ "ನಿರಂತರ"ದಂತ ವಿಚಾರವೇದಿಕೆಯನ್ನ, ಇಂತಹ ಒಂದು ಪ್ರಯತ್ನಕ್ಕೆ ಬಳಸಿಕೊಳ್ಳಬಹುದಲ್ಲ ಅಂತ ಅನಿಸಿ, ಈ ಕವನವನ್ನ ಓದಲು/ಬರೆಯಲು(?) ಇಚ್ಛಿಸುತ್ತೇನೆ!

## ಆತ್ಮ–ಉಪದೇಶ
## ಕವಿ ಚೆನ್ನವೀರ ಕಣವಿ ಅವರ 'ಜೀವಧ್ವನಿ'ಯಿಂದ.

ಯಾವುದೊ ಅಂಕಿಯ ಮೇಲೆ ನಿಂತುಬಿಟ್ಟ,
ತುಕ್ಕು ಹಿಡಿದ ಗಡಿಯಾರದಂತಾಗಿದೆ
ನಮ್ಮ ಚೇತನ

ಎಂದೋ ಒಂದು ಘಟನೆ ನಮ್ಮನಲುಗಿಸಿದಾಗ
ಕೂಡಲೆ ತುಸು ಸರಿದಾಡತೊಡಗುತ್ತೇವೆ
ಕೆಲಹೊತ್ತು 'ಟಿಕ್ ಟಿಕ್' ಎಂದು
ಮತ್ತೆ, ಮತ್ತಾವುದೋ ಅಂಕಿಯ ಮೇಲೆ
ಹಾಗೆಯೆ ನಿಂತು ಬಿಡುತ್ತೇವೆ

ಈ ಅವಧಿಯಲ್ಲಿ
ಜೇಡರಬಲೆ ಕಟ್ಟಿದಂತೆ, ಜಂಗು ಹಿಡಿದಂತೆ
ಅವುಗಳ ಇರುವಿಕೆಯ ಅರಿವೇ ಇಲ್ಲದೆ
ವಿಚಿತ್ರ ಬಯಕೆಗಳನ್ನು, ಭಾವನೆ ಕಲ್ಪನೆಗಳನ್ನು
ನಮ್ಮ ಮನದೊಳಗೆ ಬೆಳೆಸುತ್ತೇವೆ.

ತನ್ನ ಮನಸ್ಸಿನ ಆಳದಲ್ಲಿ ಮನುಷ್ಯ
ಇಣುಕಿ ನೋಡಲೇ ಬೇಕು,
ತನ್ನ ಆತ್ಮದ ಹೊಸ್ತಿಲ ಬಳಿ
ಪಹರೆ ಮಾಡಲೇ ಬೇಕು,
ಇಲ್ಲವಾದರೆ ಆತ್ಮಕ್ಕೆ ಒಂದೊಂದಾಗಿ ಕಲೆ ಬೀಳತೊಡಗುತ್ತವೆ
ಮೊದಮೊದಲು ಚಿಕ್ಕದಾಗಿ, ಸೌಮ್ಯವಾಗಿ,
ಬರಬರುತ್ತ ದೊಡ್ಡವಾಗಿ, ಕಪ್ಪಾಗಿ
ಆತ್ಮದ ತಂತಿಗಳು ಆ ಕ್ಷಣ ಕಂಪಿಸಿ
ಆಮೇಲೆ ಅವುಗಳನ್ನು ಸಹಿಸಿಕೊಂಡು ಬಿಡುತ್ತವೆ.

ಹೀಗೆ, ಮೆಲ್ಲ ಮೆಲ್ಲನೆ
ನಿಮ್ಮ ಆತ್ಮವನ್ನು ಬೇರಾವುದೋ ಒಂದು ಪ್ರವೇಶಿಸಿ
ವಶಪಡಿಸಿಕೊಳ್ಳುತ್ತದೆ,
ನಿಮ್ಮ ದೃಷ್ಟಿ ಮಾಲಿನ್ಯವೊ ಅಥವಾ
ಕಣ್ಣಿನಲ್ಲಿಯ ದೋಷವೋ

ನಿಮಗೇ ಹೊಳೆಯದೆ ಹೋಗುತ್ತದೆ.

ಈಗಲ್ಲದಿದ್ದರೂ
ಕೆಲದಿನಗಳ ಮೇಲೆ, ಮನದ ಅನೇಕ
ಕಾಳರಾತ್ರಿಗಳಲ್ಲಿ ತೊಳಲಾಡಿ,
ತಪ್ಪು-ಒಪ್ಪುಗಳ ಇಕ್ಕಟ್ಟಿನ ಶಿಲುಬೆಯಲ್ಲಿ
ನಿರಂತರ ನುರಿಗೊಂಡ ಮೇಲಾದರೂ
ದೃಷ್ಟಿಯಲಿ ದೋಷವಿದ್ದುದರೆಡೆಗೆ
ಯಾರಾದರೂ ಬೆರೆಳೆತ್ತಿ ತೋರಿಸಲೇಬೇಕು
ಇಲ್ಲವಾದರೆ

ಆತ್ಮದಲಿ ಏನೇನೋ ಗದ್ದಲ, ಗಲಿಬಿಲಿ, ಗೌಜು
ಯವುದನ್ನು ಸರಿಯಾಗಿ ಹೇಳಲೂ ಕೇಳಲೂ ಆಗುವದೇ ಇಲ್ಲ.
'ಎಲ್ಲ ಸರಿಯಾಗಿದೆ' 'ಎಲ್ಲ ನಡೆಯುತ್ತಿದೆ' ಎಂಬ ಸಿದ್ಧಾಂತ
ಮನಸ್ಸಿನ ಆಳದಲ್ಲಿ ಬೇರೂರಿ ಬಿಡುತ್ತದೆ.

ನಿಮ್ಮ ಮಗುವಿನ ಆಟಿಕೆ, ಸಿಹಿತಿಂಡಿ, ಶಾಲೆಯ ಸಮವಸ್ತ್ರ
ಕೊಡಬೇಡಿರೆಂದು ನಾನು ಹೇಳುವದಿಲ್ಲ;
ಶುಭ್ರವಾದ ಅಂಗಿ, ನೀಲಿ ಕಂಠವಸ್ತ್ರ
ಬ್ಯಾಂಕಿನಲಿ ಹಣ, ಅವನಿಗೆ ಬೇಡವೆಂದಿಲ್ಲ,
ಆದರೆ ಅವನ ಆತ್ಮ ಸಹಜವಾಗಿ ಉಸಿರಾಡುವಂತೆ
ಶುದ್ಧ ವಾತವರಣವನ್ನು ಅವನಿಗೆ ಆಸ್ತಿಯಾಗಿ ಬಿಡಿ

ಬಾಳಿನ ಒಳಿತಿನಲ್ಲಿ ತೀವ್ರಶ್ರದ್ಧೆ ಅವನಿಗೆ ಬೇಕಲ್ಲದೆ
ದೊಡ್ಡ ದೊಡ್ಡ ಮಹಲು-ಮಂದಿರಗಳಲ್ಲ,
ನಿಮ್ಮ ಮಗುವಿಗೆ ಬೇಕಾದದ್ದು
ನಿಸ್ತೇಜವಾದ ನಿಮ್ಮ ದೀರ್ಘಾಯುಷ್ಯವಲ್ಲ
ನಿಮ್ಮ ಉಜ್ವಲವಾದ ಚರಿತ್ರೆ

ಸದ್ಯದ ನಮ್ಮ ಚರಿತ್ರೆಯೋ
ಯಾವುದೊ ಅಂಕಿಯ ಮೇಲೆ ನಿಂತುಬಿಟ್ಟ
ತುಕ್ಕು ಹಿಡಿದ ಗಡಿಯಾರದಂತಾಗಿದೆ
ನಮ್ಮ ಚೇತನ,
ಎಂದೋ ಒಂದು ಘಟನೆ ನಮ್ಮನ್ನು ಅಲುಗಾಡಿಸಿದಾಗ
ಕೂಡಲೆ ಸರಿದಾಡಲು ತೊಡಗುತ್ತೇವೆ
ಕೆಲಹೊತ್ತು 'ಟಿಕ್ ಟಿಕ್' ಎಂದು
ಮತ್ತಾವುದೋ ಅಂಕಿಯ ಮೇಲೆ ಹಾಗೆಯೇ
ನಿಂತುಬಿಡುತ್ತೇವೆ.

## ಇಂದು :

ಇಂದು ಎಲ್ಲರೂ ತಮ್ಮ ತಮ್ಮ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿದ್ದಾರೆ. ಕೆಲವರು ಉದ್ಯೋಗದಲ್ಲಿ ಬಡತಿ ಹೊಂದಿದರೆ, ಇನ್ನು ಕೆಲವರಿಗೆ ಪದಕ/ಪುರಸ್ಕಾರಗಳು, ಕೆಲವರು ದೇಶ–ವಿದೇಶಗಳನ್ನು ಸುತ್ತಿದರೆ, ಉಳಿದವರು ಇದ್ದಲ್ಲಿಯೆ ಸಂತೃಪ್ತರು, ಕೆಲವರು ಹಿಡಿದ ಉದ್ಯೋಗದಲ್ಲಿಯೆ ಸಂತೋಷ ಕಂಡರೆ, ಇನ್ನು (ನನ್ನ ತರಹ) ಕೆಲವರದ್ದು ಕಂಪನಿಯಿಂದ ಕಂಪನಿಗೆ ಮಂಗನ ಜಿಗಿತ!

ಹಾಗೆ ನೋಡಿದರೆ, ನಮ್ಮಲ್ಲಿ ಯಾರೂ ಈ ಐ.ಟಿ. ರಂಗಕ್ಕೆ ಅಷ್ಟು ಸಲೀಸಾಗಿ ಧುಮುಕಲಿಲ್ಲ. ಐ.ಟಿ. ಬೂಮ್ ಇನ್ನು ಆಗ–ತಾನೆ ಶುರುವಾಗಿದ್ದರಿಂದ ಅದರ ಬಗ್ಗೆ ನಮಗೆ ಮೊದ–ಮೊದಲು ಯಾರಿಗೂ ಅಷ್ಟು ನಂಬಿಕೆ ಇರಲಿಲ್ಲ. ಯಾರಿಗೂ ಐ.ಟಿ ಗೆ ಧುಮುಕಿದರೆ ಒಳ್ಳೆಯದಾಗಬಹುದು ಅಂತ ಒಂದು ಖಾತ್ರಿಯಾದ ನಂಬಿಕೆ ಇರದಿದ್ದಕ್ಕೆ, ಐ.ಟಿ. ಗೆ ಧುಮುಕುವ ನಿರ್ಧಾರ ಸ್ವಲ್ಪ ತಡವಾಗಿಯೇ ಆಯಿತು ಅನ್ನಬಹುದು. ಆದರೂ ಒಮ್ಮೆ ನಿರ್ಧಾರ ಮಾಡಿದ ಬಳಿಕ ಕೆಲವರು ಉದ್ಯೋಗ ಮಾಡುತ್ತ, ಕೆಲವರು ಇದ್ದ ಉದ್ಯೋಗ ತೊರೆದು ರಿಸ್ಕ್ ತೆಗೆದುಕೊಂಡು, ಸಾಫ್ಟ್‌ವೇರ್ ತರಬೇತಿ ಪಡೆದು, ಕಷ್ಟ–ಪಟ್ಟು, ಸಾಧನೆಯ ಪಥ ತುಳಿದರು. ಮತ್ತು ಈ ರಂಗಕ್ಕೆ ಧುಮುಕಿದ್ದು ಕೇವಲ ಆಕಸ್ಮಿಕವಲ್ಲ ಎಂದು ತಾವು ಹಿಡಿದ ಉದ್ಯೋಗಗಳಲ್ಲಿ ಸಾಬೀತು ಮಾಡಿ ತೋರಿದರು.

ನಮ್ಮಲ್ಲಿ ಹಲವರು ಈ ಐ.ಟಿ. ಕ್ಷೇತ್ರದ ಏರು–ಪೇರುಗಳನ್ನು ಕಂಡಿದ್ದೇವೆ, ಅಡ್ಡಿ–ಆತಂಕಗಳನ್ನು ಕಂಡಿದ್ದೇವೆ, ನಮ್ಮ ಸ್ಕಿಲ್–ಸೆಟ್ ಮಾರುಕಟ್ಟೆಯಲ್ಲಿ ಬೇಡಿಕೆ ಕಳಕೊಂಡಾಗ ತೀವ್ರವಾದ ಅನಿಶ್ಚಿತತೆ ಮತ್ತು ಅಭದ್ರತೆಯ ಪರಿಸ್ಥಿತಿಯನ್ನು ಎದುರಿಸಿದ್ದೇವೆ. ಆದರೂ ಧೃತಿಗೆಡದೆ ಅವಿರತವಾದ ಪರಿಶ್ರಮ ಮತ್ತು ಛಲದಿಂದ ದುಡಿದು, ಹೊಸ ತಂತ್ರ–ಜ್ಞಾನದ ಬೃಹತ್–ಹೊತ್ತಿಗೆಗಳನ್ನು ಕಷ್ಟಪಟ್ಟು ಓದಿ, ಅಲ್ಲಲ್ಲಿ ಸಿಕ್ಕ ತರಬೇತಿ ಪಡೆದು, ಹೊಸತನ್ನು ಹುಮ್ಮಸ್ಸಿನಿಂದ ಕಲಿತು, ಎಲ್ಲ ಬದಲಾವಣೆಗೆ ಹೊಂದಿಕೊಂಡಿದ್ದೇವೆ!

ಈ ತರ ನಮ್ಮ ಮಿತ್ರ–ಮಂಡಲಿಯ ಮಿತ್ರರು ಸ್ಪರ್ಧಾತ್ಮಕ ಮತ್ತು ಅಡಚಣೆಗಳುಳ್ಳ ವಾತಾವರಣದಲ್ಲಿ, ಅತಂತ್ರ/ಅನಿಶ್ಚಿತತೆಯ ಪರಿಸ್ಥಿತಿಯಲ್ಲಿ, ಹೋರಾಡಿ ವಿಜಯಶಾಲಿಗಳಾಗಿದ್ದಾರೆ, ಯಶಸ್ವಿಗಳಾಗಿದ್ದಾರೆ. ಎಲ್ಲರಿಗೂ ಅವರ ಅಪಾರ ಪರಿಶ್ರಮಕ್ಕೆ ಮತ್ತು ಅಭೂತಪೂರ್ವ ಯಶಸ್ಸಿಗೆ ಹಾರ್ದಿಕ ಅಭಿನಂದನೆಗಳು. ನಿಮ್ಮ ಯಶೋ–ಗಾಥೆ ಹೀಗೆಯೆ ಮುಂದುವರಿಯಲಿ ಅಂತ ತುಂಬು–ಹೃದಯದ ಹಾರೈಕೆಗಳು!

## ಗಡಿಯಾರದ ಮಾತೇಕೆ?

ಅದೆಲ್ಲ ಓಕೆ, ಗುಡಿ ಮೇಲಿನ 'ತುಕ್ಕು ಹಿಡಿದ ಗಡಿಯಾರ' ದ ಕವನ ಉಲ್ಲೇಖ ಮಾಡಿದ್ದು ಯಾಕೆ? ಅಂತ ನೀವು ವಿಚಾರ ಮಾಡಿದರೆ, ನೀವು ಸರಿ ಟ್ರ್ಯಾಕ್ ನಲ್ಲಿ ಇದ್ದೀರ, ನಿಮ್ಮ ವಿಚಾರ ಮುಂದುವರಿಸಿ.. ಈ ಸಲ ಬೋರ್ ಹೊಡೆದರೆ 'ನಿರಂತರ' ದ ಮುಂದಿನ ಸಂಚಿಕೆಯಲ್ಲಿ ನೊಡೋಣ..

ಓಹ್, ಅದೇನು ಗದ್ದಲ.. ಹಿಂದಿನ ಬೆಂಚು/ಸಾಲಿನಿಂದ ಮುಗಿಸು ಅಂತ ಚಪ್ಪಾಳೆ ಬೀಳುತ್ತಿವೆ ಅಲ್ಲ ಆಗಲೇ.. ಬಿದ್ದರೂ ಮೀಸೆ ಮಣ್ಣಾಗಿಲ್ಲ ಅನ್ನುವ ನಾನು, ನನಗೆ ಚಪ್ಪಾಳೆ(ಲಿ?) ತಟ್ಟುತ್ತೀರ?? ನನಗೋ ತಡೆದುಕೊಳ್ಳಲಾಗುತ್ತಿಲ್ಲ, ಗಂಟಲು ತುಂಬಿಕೊಂಡಿದೆ.. "ವಾಂತಿ"ಯಾಗದೆ ಸಮಾಧಾನವಿಲ್ಲ.. ನಿಮಗೆ ಹೇಸಿಗೆಯನಿಸಿ, ಥೂ ಅನ್ನುವ ಹಾಗಿದ್ದರೆ ಉಗುಳಿಬಿಡಿ ನೀವು ಪರವಾಗಿಲ್ಲ!

ಏನಿಲ್ಲ ನಮ್ಮಲ್ಲಿ ಭಾಳ ಜನ ಈ ಐ.ಟಿ. ಗೆ ಧುಮುಕಿ ಬಹಳ ವರುಷಗಳೇ ಉರುಳಿದರೂ, ಸ್ವಲ್ಪ ತುಲನಾತ್ಮಕವಾಗಿ ನೋಡಿದರೆ, ನಮ್ಮ ಸಾಧನೆ ಭಾಳ ಕಡಿಮೆ ಮತ್ತು ಅದು ಕೇವಲ ವೈಯಕ್ತಿಕ ಮಟ್ಟದ್ದು! ನಿನ್ನೆ, ಮೊನ್ನೆ ಬಂದ ಹುಡುಗರೆಲ್ಲ, ಇಂದು ಉತ್ಕೃಷ್ಟ ಸಾಧನೆ ಮಾಡಿದ್ದಾರೆ. ಬೇರೆ ಏಕೆ ಇನ್ನು ಕಾಲೇಜನಲ್ಲಿ ಇರುವ, ಕಾಲೇಜನಲ್ಲಿಯೆ ಇದ್ದು ತನ್ನ ಪ್ರಾಜೆಕ್ಟಿನಿಂದ ಐ.ಟಿ. ಉದ್ದಿಮೆಯ ಗಮನಸೆಳೆದ ನಮ್ಮ ಬಿ.ವಿ.ಬಿ. ಯ ವಿದ್ಯಾರ್ಥಿ **ಶಂತನು ರಾವ್** ಅವರ ಸಾಧನೆಯನ್ನೆ ತೆಗೆದುಕೊಳ್ಳಿ. ನಾನು ಅತಿ–ಬುದ್ಧಿವಂತರನ್ನು ಮತ್ತು ನಮ್ಮ ಗುಂಪಿನ ಜನರನ್ನು ತುಲನೆ ಮಾಡುತ್ತಿದ್ದೇನೆ ಅಂತ

ತಿಳಿಯಬೇಡಿ. ಒಬ್ಬ ವಿದ್ಯಾರ್ಥಿ, ಮಾಹಿತಿ ತಂತ್ರಜ್ಞಾನ ಉದ್ದಿಮೆಯ ಒಳಗಲ್ಲ, ಹೊರಗೇ ಇದ್ದುಕೊಂಡು, ಉದ್ದಿಮೆಗೆ ಬೇಕಾಗುವ 'ಪ್ರೊಡಕ್ಟ್' ತಯಾರಿಸುವ, ಕಂಪನಿ ಫ್ಲಾರ್ಮ್ ಮಾಡುವ ಧ್ಯೇಯ ಹೊಂದಿರುತ್ತಾನೆ ಅಂದರೆ ನಾವು ಮಾಹಿತಿ ತಂತ್ರಜ್ಞಾನದ ಉದ್ದಿಮೆಯೊಳಗೆ ಇಷ್ಟು ವರುಷ ಇದ್ದು ಒಂದು ಅಂತಹ ಧ್ಯೇಯೋದ್ದೇಶಗಳನ್ನು ಹೊಂದದೆ ಇದ್ದೇವಲ್ಲ, ಎಲ್ಲಿ ನಿಂತಿದೆ ನಮ್ಮ ಗಡಿಯಾರ ಅಂತ?

ಶಂತನು ತಂತ್ರ–ಜ್ಞಾನದ ವಿದ್ಯಾರ್ಥಿ ಮತ್ತು ಅಸಾಧಾರಣ ಬುದ್ಧಿವಂತನು ಇರಬಹುದು ಅಂದುಕೊಂಡು, ಅವನನ್ನು ಬಿಡಿ, ತಂತ್ರ–ಜ್ಞಾನದ ಗಂಧ–ಗಾಳಿ ಇರದ, ಸಾಧಾರಣ ಶಿಕ್ಷಣ, ಬುದ್ಧಿಮತ್ತೆ ಇರುವ ಜನರು ಕೂಡ ಇಂದು ಮಾಹಿತಿ–ತಂತ್ರಜ್ಞಾನದಲ್ಲಿ ಮಹೋನ್ನತ ಸಾಧನೆಗಳನ್ನು ಮಾಡಿದ್ದಾರೆ. ನೂರಾರು ಜನರಿಗೆ ಉದ್ಯೋಗವೊದಗಿಸಿದ್ದಾರೆ.
ನಮಗೆ ಏನು ಕೊರತೆ, ಯಾಕೆ ನಮಗೆ ಈ ಅಲ್ಪ–ತೃಪ್ತಿ? ನಮ್ಮ ಟಿ.ಪಿ. ಬಳಗದ ತಂತ್ರಜ್ಞಾನದ Profileನ್ನೇ ಸ್ವಲ್ಪ ಕಣ್ಣು ತೆರೆದು ನೋಡಿದರೆ, ಇವತ್ತು ನಮ್ಮಲ್ಲಿ Software Developers/Engineers, Quality Assurance Testers, Business/Functional Experts, Architects, Managers etc. etc. ಎಲ್ಲ ಪೈಕಿ ಜನ ಇದ್ದಾರೆ. Banking and Financial industry, Healthcare, Telecom, Billing, Datawarehousing, ERP, Software consulting etc. etc. ಹೀಗೆ ಹತ್ತಾರು ಕ್ಷೇತ್ರದಲ್ಲಿ ಇಂದು ಕೃಷಿ ಮಾಡಿಕೊಂಡಿದ್ದೇವೆ. Mainframes, Client Server, internet, intranet, E-commerce etc. etc. ವೈವಿಧ್ಯಮಯ ತಂತ್ರಜ್ಞಾನಗಳ ಅನುಭವ ಪಡೆದಿದ್ದೇವೆ. ಒಟ್ಟಿನಲ್ಲಿ ಹೇಳಬೇಕೆಂದರೆ 'ಆಡು ಮೇಯದ ಸೊಪ್ಪಿಲ್ಲ, ಟಿ.ಪಿ. ಬಳಗದ ಮಿತ್ರರು ಕೈ–ಹಚ್ಚದ ಮಾಹಿತಿ ತಂತ್ರಜ್ಞಾನದ ಕೆಲಸವಿಲ್ಲ' ಅಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ!
ನಾವು 'ಇಂಜನೀಯರಿಂಗ್' ಓದಿದ್ದಲ್ಲದೆ, 'ಇಂಜನೀಯರಿಂಗ್' ಅಥವ ಉನ್ನತ ಶಿಕ್ಷಣ ಪಡೆದ ಸುಶಿಕ್ಷಿತರಾದವರನ್ನೆ ಬಾಳ–ಸಂಗಾತಿಗಳಾಗಿ ಪಡೆದಿದ್ದೇವೆ. ಇಷ್ಟು ಈ ಮಾಹಿತಿ–ತಂತ್ರಜ್ಞಾನದಲ್ಲಿರುವ ಅನುಭವವು, ಜ್ಞಾನವು ತಂತ್ರಜ್ಞಾನದ ಬಗ್ಗೆ ಏನು ಅನುಭವವಿಲ್ಲದ, ಅಥವ ಇನ್ನು ಕಾಲೇಜಿನಲ್ಲಿರುವ ವಿದ್ಯಾರ್ಥಿಗಳಿಗಿಂತ ಕಡಿಮೆ ಹೇಗೆ ಆಗಲು ಸಾಧ್ಯ?!
ನಮ್ಮ 'ಸಾಮಾನ್ಯ–ಜ್ಞಾನ'ದ ಕಣ್ಣು ಮುಚ್ಚಿ, ನಮಗಿರುವ ಅನುಭವವನ್ನು/ ಜ್ಞಾನವನ್ನು ಯಾವುದೇ ಉಪಯೋಗಕ್ಕೆ ಬಾರದಂತೆ ಮಾಡಿದ್ದೇವೆ! ಕವಿ ಹೇಳಿದಂತೆ ನಮಗೇನಾದರೂ ದೃಷ್ಟಿ–ಮಾಲಿನ್ಯವೋ ಅಥವ ಕಣ್ಣಿನಲ್ಲಿಯೆ ದೋಷವೊ ಪರೀಕ್ಷೆ ಮಾಡಲೇಬೇಕು.

ಆಫ್‌–ಕೋರ್ಸ್, ನಮ್ಮಲ್ಲೂ ಕುಂದು/ಕೊರತೆಗಳು ಇವೆ. ಉದಾಹರಣೆಗೆ, ನಮ್ಮಲ್ಲಿ ಮಾರ್ಕೆಟಿಂಗ, ಸೇಲ್ಸ್ ಅನುಭವ ಇರುವವರು ಕಡಿಮೆ, ಇದ್ದುದನ್ನು ಚೆನ್ನಾಗಿ ಹೇಳಿಕೊಳ್ಳುವ, ಪ್ರೆಸೆಂಟ್ ಮಾಡುವ ಕಲೆ ಇರುವ ಜನ ಕಡಿಮೆ, ಇವು ಇಂದಿನ ಸ್ಪರ್ಧಾತ್ಮಕ ಜಗತ್ತಿನ ಮೂಲಭೂತ ಅವಶ್ಯಕತೆಗಳು! ಇನ್ನು ಕೆಲವರಿಗೆ ಆತ್ಮ–ವಿಶ್ವಾಸದ ಕೊರತೆ, ತನಗೆ ಅದು ಬರುವದಿಲ್ಲ, ಇದು ಬರುವದಿಲ್ಲ ಎಂಬ ಕೀಳರಿಮೆ, ಸ್ವಂತ–ಶಕ್ತಿಯ ಬಗ್ಗೆ ಅವಿಶ್ವಾಸ!
ಖಂಡಿತ, ನಾನು ಮೇಲೆ ತಿಳಿಸಿದ ಅನುಭವದ ಸಾರ/ಜ್ಞಾನ ಒಬ್ಬರ ಹತ್ತಿರವೇ ಇಲ್ಲ, ಏಕಾಂಗಿಯಾಗಿಯಾದರೆ ನಮ್ಮ ಹತ್ತಿರ ಏನೂ ಇಲ್ಲ. ಆದರೆ ನಾವು ಕೂಡಿದರೆ, ಒಗ್ಗಟ್ಟಾದರೆ, ನಮ್ಮ ಶಕ್ತಿಗೆ/ಸಾಧನೆಗೆ ಒಂದು ಇತಿಮಿತಿ ಉಂಟೆ? ಒಗ್ಗಟ್ಟಿನಲ್ಲಿ ಇರುವ ಬಲವನ್ನು ಶತ–ಶತಮಾನಗಳಿಂದ ನಮ್ಮ ಇತಿಹಾಸ ನಮಗೆ ಕಲಿಸಿದರೂ, ಇಂದು ನಾವು ವೈಯಕ್ತಿಕ ಹೋರಾಟಕ್ಕೆ ಶರಣಾಗಿರುವದು ಏಕೆ?

ಯಾಕೆ ನಾವು ಕಷ್ಟ–ಪಟ್ಟು ನೌಕರಿ ಮಾಡಿಯೇ ಜೀವನ ಮಾಡಬೇಕಂತ ನಮ್ಮ ಬದುಕನ್ನು/ಸಾಧನೆಯನ್ನು ಸೀಮಿತಗೊಳಿಸಿಕೊಂಡಿದ್ದೇವೆಯೆ? Hardwork ಮತ್ತು Smartwork ಗಳ ನಡುವೆ Hardwork ನ್ನೇ ಆಯ್ಕೆ ಮಾಡಿಕೊಳ್ಳುತಿರುವದು ಯಾಕೆ? ನಮ್ಮ ತರ 'ನೌಕರಿಯೇ ಬಾಳಿಗೆ ಭೂಷಣ' ಅಂತ, ನಾರಾಯಣ ಮೂರ್ತಿ, ಅಜೀಮ್ ಪ್ರೇಮ್‌ಜಿ, ಬಿಲ್ ಗೇಟ್ಸ್ ಇನ್ನೂ ಮೊದಲಾದವರೆಲ್ಲ ಅಂದುಕೊಂಡಿದ್ದರೆ ಇವತ್ತು ಐ.ಟಿ. ಜಗತ್ತಿನ ಇತಿಹಾಸ ಏನಾಗಿರುತ್ತಿತ್ತು?

ಕ್ಷಮಿಸಿ ನನ್ನ ಉದ್ದೇಶ ಎಲ್ಲರನ್ನು ಹಿಗ್ಗ–ಮುಗ್ಗ ಅವಮಾನ ಮಾಡುವದಲ್ಲ. ಇಲ್ಲಿ ಹೇಳಿದ ಮಾತುಗಳು ನನಗೂ ಪ್ರತಿಶತ ಅನ್ವಯವಾಗುತ್ತವೆ. ನಾವು ನೋಡು–ನೋಡುತ್ತ ಭಾರತದ ಮಾಹಿತಿ–ತಂತ್ರಜ್ಞಾನ ಇವತ್ತು 20 ಬಿಲಿಯನ್ ಡಾಲರ್

ಉದ್ದಿಮೆಯಾಗಿ ಬೆಳೆದಿದೆ. ಭಾರತ ಈಗಿರುವ ಮುಂಚೂಣಿಯನ್ನು ಮುಂದುವರಿಸಿ ಇನ್ನೂ ಬೆಳೆದು ವಿಶ್ವದ ಮಾಹಿತಿ ತಂತ್ರ-ಜ್ಞಾನದ ಸುಪರ್-ಪವರ್ ಆಗುವದರಲ್ಲಿ ಸಂಶಯವೇ ಇಲ್ಲ. ಇಂಥಾ ಪ್ರಗತಿಯಲ್ಲಿ ನಮ್ಮ ಪಾತ್ರ/ಕೊಡುಗೆ ಏನು? ನಮ್ಮ ಕೆಲಸದ 'ಇನ್-ಸೆಕ್ಯುರಿಟಿ' ಅಥವ 'ಓವರ್-ಸೆಕ್ಯುರಿಟಿ' ಗಳ ಮೇರೆ ಮೀರಿ, 9 ರಿಂದ 6 ರ ವರೆಗಿನ ಕೆಲಸ, ಮತ್ತೇ ಅದೇ ಕೆಲಸದಿಂದ ನಿವೃತ್ತಿ ಹೊಂದುವ(?) ವಿಚಾರದ ಮೇಲೆ ಎದ್ದು, ಹೊರಗಡೆ ಏನು ನಡೀತಾ ಇದೆ ನಾವು ನೊಡಲೇಬೇಕು. ನಮ್ಮ ಚೇತನವ ತುಕ್ಕು ಹಿಡಿಸಿ ಒಂದು ನೌಕರಿಗೆ ಕಟ್ಟಿ ಹಾಕಿದ್ದರೆ, ಅದು ಹೇಗೆ ತಾನೆ ಉಜ್ವಲವಾದ ಚರಿತ್ರೆ ನಿರ್ಮಿಸೀತು?

## ಉಪಸಂಹಾರ :

ಯಾರೂ ತಮ್ಮ ಕೆಲಸಗಳಿಗೆ ರಾಜೀನಾಮೆ ಕೊಡಬೇಕಾಗಿಲ್ಲ. ಹೇಗೆ ತಮ್ಮ ತಮ್ಮ ಕ್ಷೇತ್ರದಲ್ಲಿ, ತಮ್ಮ ತಮ್ಮ ಅನುಭವಗಳಿಂದ, ಅದೆ ಕ್ಷೇತ್ರದಲ್ಲಿ ಅವಶ್ಯವಿರುವ 'ಪ್ರಾಡಕ್ಟ್' ಗಳು, ಮತ್ತು ಯಾವದನ್ನ ಅಟೋಮೇಟ್ ಮಾಡಿದರೆ ಕ್ಲೈಂಟ್‌ಗಳ ಬೇಡಿಕೆ ಇರಬಹುದು ಅಂತೆಲ್ಲ ಒಂದು ಪಟ್ಟಿ ಮಾಡಬಹುದು. ofcourse, ಇದೇನು ಒಂದೆರಡು ದಿನಗಳಲ್ಲಿ ಆಗುವ ಮಾತಲ್ಲ. ಮತ್ತು ಬಹಳಷ್ಟು ಕಂಪನಿಗಳು/ಜನರು ಇರುವದಕ್ಕೆ, market saturate ಆಗಿದೆ, ನಾವೇನು ಮಾಡಬಹುದು, ನಮಗೆ ಸ್ಪರ್ಧಿಸಲು ಅಗುವದಿಲ್ಲ ಎಂಬ ನಿಷೇಧಾತ್ಮಕ ಅನಿಸಿಕೆಗಳನ್ನ ತೆಗೆದು ಹಾಕಿ. ಈ ಜಗತ್ತಿನಲ್ಲಿ ಆಟೋಮೇಶನ್‌ಗೆ, ಒಳ್ಳೆಯ ಪ್ರಾಡಕ್ಟ್‌ಗಳಿಗೆ ಎಂದು/ಯಾವತ್ತು ಬೇಡಿಕೆ ಇದ್ದೇ ಇದೆ. ಒಳ್ಳೆಯ ಐಡಿಯಗಳು ಬರಲು ವರುಷಗಳೇ ತೆಗೆದುಕೊಳ್ಳಬಹುದು, ಅಥವ ಏನು ಹೊಳೆಯದೇನೂ ಹೋಗಬಹುದು. ನೆನಪಿರಲಿ ನಮ್ಮ ಮಿತ್ರರು ದೇಶ-ವಿದೇಶಗಳ ತಿರುಗಿದ್ದಾರೆ, ಅಲ್ಲದೆ ಬಿ.ವಿ.ಬಿ. ವಿದ್ಯಾರ್ಥಿಗಳು, ಹುಬ್ಬಳ್ಳಿ-ಧಾರವಾಡ ಹುಡುಗರು ಜಗತ್ತಿನ ಮೂಲೆ ಮೂಲೆಗಳಲ್ಲಿ ತುಂಬಿಕೊಂಡಿದ್ದಾರೆ. 'ಪ್ರಾಡಕ್ಟ್' ಮಾರ್ಕೆಟ್ ಮಾಡುವದಕ್ಕೊ ಅಥವ ಕ್ಲೈಂಟ್ ಹುಡುಕುವದಕ್ಕೊ ಎಲ್ಲಿಂದಲೊ ಸಹಾಯ ಸಿಗುತ್ತದೆ. ಒಂದು ಒಳ್ಳೆಯ ಐಡಿಯ, ಆ ಐಡಿಯದಿಂದ ಏನಾದರೂ ಸಾಧಿಸಬೇಕೆಂಬ ಛಲ ನಮ್ಮಲ್ಲಿ ಗಟ್ಟಿಯಾಗಿದ್ದರೆ, ಈ ವಿಶ್ವದೆಲ್ಲೆಡೆಯಿಂದ ಸಹಾಯ ಸಿಕ್ಕುತ್ತೆ, ನಮ್ಮ ಕನಸು ನನಸಾಗಲು ಸಹಕಾರ ಸಿಗುತ್ತೆ. ಆದರೆ ಕನಸುಗಳೇ ಇಲ್ಲದಿದ್ದರೆ, ಹೃದಯದೊಳಗೆ ಮಹದಾಸೆಯೇ ಇಲ್ಲದಿದ್ದರೆ ಯಾರು ತಾನೆ ಏನು ಮಾಡಿಯಾರು?

ಆದ್ದರಿಂದ ಒಂದು ಮಹತ್ವಾಕಾಂಕ್ಷೆ , ಒಂದು ಕನಸು ಇಂದು ನಮ್ಮಲ್ಲಿ ಇಲ್ಲದಿದ್ದರೆ, ಅದನ್ನು ಹುಟ್ಟು ಹಾಕಿಕೊಳ್ಳೋಣ ಮತ್ತು ಅಂತ ಧ್ಯೇಯ-ಅಭಿಲಾಷೆಗಳು ಅದೃಷ್ಟಾವಶಾವತ್ ಉದ್ಭವಿಸಿದರೆ, ನಮ್ಮ ಗಡಿಯಾರ ಮತ್ತೆ ಟಿಕ್-ಟಿಕ್ ಅಂತ ಚಮತ್ಕಾರದಿಂದ ಹೊಡೆಯಲಾರಂಭಿಸಿದರೆ, ಅದನ್ನು ಉಳಿಸಿಕೊಳ್ಳುವ, ಬೆಳೆಸಿಕೊಳ್ಳುವ ಪ್ರಯತ್ನ ಮಾಡೋಣ.

-೦-

**ಟಿಪಿಬಳಗ ಚಿಣ್ಣರಕೂಟ**

ಚೇತನ್ ಹಿರೇಮಠ, ಸೌದಾಮಿನಿ ಬೆಳಂದೂರ, ಸೃಜನಾ ಮೆಟಗುಡಮಠ ಹಾಗೂ ಸಿದ್ಧಾಂತ ಸತ್ಯನಾಯಕ.



ಅನುಶ್ರೀ ಯಾದವಾಡ ಹಾಗೂ ಅಪೇಕ್ಷಾ ಯಾದವಾಡ.



# ರುದ್ರರಮಣೀಯ ಯೆಲ್ಲೋಸ್ಟೋನ್ ನ್ಯಾಶನಲ್ ಪಾರ್ಕ್

– ಶ್ರೀಮತಿ ಶುಭಶ್ರೀ ಜಿ. ಬೆಳಂದೂರ. ಡೆನ್‌ವೇರ್, ಕೊಲೆರಾಡೊ, ಯು.ಎಸ್.ಎ.



ಬಿ.ಇ. ಪದವಿಧರೆಯಾದರೂ, ಸಾಹಿತ್ಯದಲ್ಲಿ, ಕನ್ನಡ ಬರವಣಿಗೆಯಲ್ಲಿ ಒಳ್ಳೆಯ ಹಿಡಿತವನ್ನು ಸಾಧಿಸಿದವರು **ಶುಭಶ್ರೀ.** ಇದುವರೆಗೆ ಸಾಕಷ್ಟು ಕವಿತೆ, ಲೇಖನಗಳನ್ನು ಬರೆದಿರುವ ಶುಭಾ ನಮ್ಮ ಮತ್ತೊಬ್ಬ ತಾರೆ ಗಿರೀಶ. ಬೆಳಂದೂರ (ಸದ್ದಾಮ್) ಅವರ ಪತ್ನಿ. ಮುದ್ದಿನ ಮಗು ಸೌದಾಮಿನಿಯ ಜೊತೆ ಬಿಡುವಿಲ್ಲದ ಚಟುವಟಿಕೆಗಳ ನಡುವೆಯೂ, ಬರವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇದನ್ನೇ ಫುಲ್ ಟೈಮ್ ವೃತ್ತಿಯಾಗಿ ತೆಗೆದುಕೊಂಡರೆ ಅವರಿಗೆ ಉಜ್ವಲ ಭವಿಷ್ಯವಿದೆ ಎನಿಸುತ್ತದೆ.

ಭೂರಮೆಯ ಒಡಲ ಕಡಲೊಳಗೆ ಉಂಟಾಗುವ ಉಷ್ಣತೆಯ ವೈಪರೀತ್ಯದಿಂದ ಯಾವ ರೀತಿಯ ಅತಿಯಾದ ಅದ್ಭುತಗಳು ನಡೆಯಬಹುದು ಎಂಬುದನ್ನು ಪ್ರತ್ಯಕ್ಷವಾಗಿ ನೋಡಬೇಕೆಂದರೆ "ಯೆಲ್ಲೋಸ್ಟೋನ್ ನ್ಯಾಶನಲ್ ಪಾರ್ಕ್"ಗೊಮ್ಮೆ ಭೇಟಿ ಕೊಡಲೇಬೇಕು. ಈ ಸ್ಥಳ ಇರುವುದು ಉತ್ತರ ಅಮೇರಿಕಾದ "ವಯೋಮಿಂಗ್" ರಾಜ್ಯದ ವಾಯುವ್ಯದ ಮೂಲೆಯಲ್ಲಿ. ಸರಿಸುಮಾರು 3,470 ಚದರ ಮೈಲಿಗಳಷ್ಟು ವಿಸ್ತೀರ್ಣವನ್ನು ಹೊಂದಿರುವ ಈ ಜಾಗ ಸುಮಾರು 640,000 ವರ್ಷಗಳ ಹಿಂದೆ ಘಟಿಸಿದ ಜ್ವಾಲಾಮುಖಿಯ ವಿಸ್ಫೋಟದಿಂದ ರೂಪುಗೊಂಡಿರುವಂತದು. ಈ ಜ್ವಾಲಾಮುಖಿಯ ಸ್ಫೋಟದ ನಂತರ ಅಸ್ತಿತ್ವಕ್ಕೆ ಬಂದ ಜ್ವಾಲಾಮುಖಿಯ ಬಾಯಿ 43 ಮೈಲಿಗಳಷ್ಟು ಉದ್ದ ಮತ್ತು 18 ಮೈಲಿಗಳಷ್ಟು ಅಗಲವಾಗಿತ್ತಂತೆ!!

ಈ ನ್ಯಾಶನಲ್ ಪಾರ್ಕ್‌ನ ವಿಶೇಷತೆ ಏನೆಂದರೆ, ನೈಸರ್ಗಿಕವಾದಂತಹ ಹಲವಾರು ತರಹದ ಆಕರ್ಷಣೆಗಳು, ಅದ್ಭುತಗಳನ್ನು ತನ್ನಲ್ಲಿ ತುಂಬಿಕೊಂಡು ಪ್ರಾಕೃತಿಕ ವಿಸ್ಮಯಗಳ ಭಂಡಾರವಾಗಿ ನೋಡುಗರನ್ನು ಬೆರಗುಗೊಳಿಸುತ್ತದೆ. ಸಹಸ್ರಾರು ವರ್ಷಗಳಿಂದ ಇಲ್ಲಿ ನಿರಂತರವಾಗಿ ಘಟಿಸುತ್ತಿರುವ ಜ್ವಾಲಾಮುಖಿಗಳು, ಸಣ್ಣ ಪ್ರಮಾಣದ ಭೂಕಂಪನಗಳು, ಭೂಗರ್ಭದ ಉಷ್ಣತೆಯ ಏರುಪೇರುಗಳು , ಇವೆಲ್ಲವೂ ಈ ಪ್ರದೇಶದಲ್ಲಿನ ಭೂಭಾಗದ ರೂಪುರೇಷೆಗಳನ್ನು ಪದೇ ಪದೇ ಬದಲಿಸುತ್ತಲೇ ಬಂದಿವೆ. 1872ರಲ್ಲಿ ಸಂಸ್ಥಾಪಿತಗೊಂಡ ಈ ಪಾರ್ಕ್ ಪ್ರಪಂಚದ ಮೊಟ್ಟ ಮೊದಲ ನ್ಯಾಶನಲ್ ಪಾರ್ಕ್ ಎಂಬ ಹೆಗ್ಗಳಿಕೆಗೂ ಪಾತ್ರವಾಗಿದೆ.

ನೋಡುಗರನ್ನು ಇಲ್ಲಿಗೆ ಸೆಳೆಯುವಲ್ಲಿ ಪ್ರಮುಖವಾದವುಗಳೆಂದರೆ ಇಲ್ಲಿರುವ ಬಿಸಿನೀರಿನ ಕಾರಂಜಿಗಳು (ಗೀಜ಼ರ್ಸ್), ಬಿಸಿನೀರಿನ ಬಣ್ಣ ಬಣ್ಣದ ಕೊಳಗಳು(ಹಾಟ್ ಪಾಂಡ್ಸ್), ಕೊತಕೊತನೆ ಕುದಿಯುವ ಮಣ್ಣಿನ ಕುಂಡಗಳು(ಮಡ್ ಪಾಟ್ಸ್), ಮ್ಯಾಮೊತ್ ಹಾಟ್ ಸ್ಪ್ರಿಂಗ್ಸ್ ಎಂದು ಕರೆಯಲ್ಪಡುವ ಬೃಹತ್ ಗಾತ್ರದ ಬಿಸಿನೀರ ಬುಗ್ಗೆಗಳು, ಯೆಲ್ಲೋಸ್ಟೋನ್ ಹೆಸರಿನ ನದಿಯು ನಡೆಸಿದ ಭೂಕೊರೆತದಿಂದ ರೂಪುಗೊಂಡ ಆಳವಾದ, ಅಷ್ಟೇ ಭವ್ಯವಾದ ಕಮ್ಮರಿ, ಅದರೊಳಗೆ ನಿರ್ಮಿತಗೊಂಡ ಆ ನದಿಯ ಸುಂದರ ಜಲಪಾತಗಳು, ಅತ್ಯಂತ ವಿಸ್ತಾರವಾದ ಯೆಲ್ಲೋಸ್ಟೋನ್ ಸರೋವರ ಹಾಗು ಪಾರ್ಕಿನಲ್ಲಿ ಓಡಾಡುವಾಗೆಲ್ಲಾ ಅಲ್ಲಲ್ಲಿ ಗೋಚರಿಸುವ ಇಲ್ಲಿಯ ವನ್ಯ ಮೃಗಗಳು.

ಯೆಲ್ಲೋಸ್ಟೋನ್ ಸರೋವರವು ಅತಿ ಎತ್ತರದ ಪ್ರದೇಶದಲ್ಲಿರುವ(7733 ಅಡಿಗಳಷ್ಟು) ಪ್ರಪಂಚದ ಅತ್ಯಂತ ದೊಡ್ಡ ಸರೋವರ. 136 ಚದರ ಮೈಲಿಗಳಷ್ಟು ವಿಸ್ತರಿಸಿರುವ ಈ ಸರೋವರ 300 ಅಡಿಗಳಷ್ಟು ಆಳವನ್ನು ಹೊಂದಿದೆ. ಸುಮಾರು 20 ಮೈಲಿಗಳಷ್ಟು ಉದ್ದ ಹಾಗು 16 ಮೈಲಿಗಳಷ್ಟು ಅಗಲವಿರುವ ಇದರ ತಳದಲ್ಲೂ ಸಹ ಗೀಜ಼ರ್‌ಗಳು, ಹಾಟ್ ಸ್ಪ್ರಿಂಗ್‌ಗಳು, ಆಳವಾದ ಕಂದಕಗಳೂ ಇವೆಯಂತೆ. ಇದರ ದಡದ ಬಳಿ ನೀರಿನೊಳಗಿರುವ ಗೀಜ಼ರ್‌ಗಳನ್ನು ಕಾಣಬಹುದು.



ಯೆಲ್ಲೋಸ್ಟೋನ್ ಸರೋವರ



ಸರೋವರದೊಳಗಿರುವ ಗೀಜ಼ರ್



ಯೆಲ್ಲೋಸ್ಟೋನ್ ನ್ಯಾಶನಲ್ ಪಾರ್ಕ್‌ನಲ್ಲಿರುವ ಗೀಜ಼ರ್‌ಗಳಲ್ಲಿ "ಓಲ್ಡ್ ಫ಼ೇತ್‌ಫ಼ುಲ್" ಎಂದು ಕರೆಯಲ್ಪಡುವ ಗೀಜ಼ರ್ ಬಹಳ ಸುಪ್ರಸಿದ್ಧವಾದುದು. ಇದು ಪ್ರತಿ 40 ರಿಂದ 120 ನಿಮಿಷಗಳಿಗೊಮ್ಮೆ 90 ರಿಂದ 180 ಅಡಿಗಳಷ್ಟು ಎತ್ತರಕ್ಕೆ ಬಿಸಿನೀರಿನ ಕಾರಂಜಿಯನ್ನು ಚಿಮ್ಮಿಸಿ 2 ರಿಂದ 5 ನಿಮಿಷ ತನ್ನ ಜಾದೂವನ್ನು ತೋರಿಸಿ ನೋಡುಗರನ್ನು ಮಂತ್ರಮುಗ್ಧರನ್ನಾಗಿಸುತ್ತದೆ. ಇದು ಯಲ್ಲೋಸ್ಟೋನ್‌ನಲ್ಲಿರುವ ಅತಿ ದೊಡ್ಡ ಗೀಜ಼ರ್ ಅಲ್ಲದಿದ್ದರೂ ತನ್ನ ನಿಯಮಿತವಾದ, ಕ್ರಮಬದ್ಧವಾದ ಚಿಮ್ಮುವಿಕೆಯಿಂದ ಜನರನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿದೆ. ತನ್ನ ಚಮತ್ಕಾರವನ್ನು ನೋಡಲೆಂದು ಸಮಯ ನಿಗದಿ ಮಾಡಿಕೊಂಡು ಬರುವ ವೀಕ್ಷಕರಿಗೆ ನಿರಾಶೆ ಮಾಡದಂತೆ ತನ್ನ ಸಮಯದ ಅವಧಿಯೊಳಗೆ( 40ರಿಂದ 120 ನಿಮಿಷಗಳು) ತನ್ನಾಟವನ್ನು ತೋರಿಸಿ ಜನರ ನಂಬಿಕೆಯನ್ನು ಉಳಿಸಿಕೊಂಡಿರುವುದರಿಂದ ಇದು "ಓಲ್ಡ್ ಫ಼ೇತ್‌ಫ಼ುಲ್" !!

ಇದೇ ರೀತಿ ಕಣ್ಮನಗಳನ್ನು ಸೆಳೆಯುವ ಹಾಟ್ ಸ್ಪ್ರಿಂಗ್ "ಗ್ರಾಂಡ್ ಪ್ರಿಸ್ಮ್ಯಾಟಿಕ್ ಸ್ಪ್ರಿಂಗ್".
ಇದು ಯೆಲ್ಲೋಸ್ಟೋನಿನಲ್ಲಿರುವ ಅತಿ ದೊಡ್ಡ ಹಾಗು ಬಹಳ ಕಲರ್‌ಫ಼ುಲ್ ಆಗಿರುವ ಹಾಟ್ ಸ್ಪ್ರಿಂಗ್. ಅಷ್ಟೊಂದು ದೊಡ್ಡದಾದ , ಬಿಸಿನೀರಿನಿಂದ ಹಬೆಯಾಡುತ್ತಿರುವ , ಎಲ್ಲೆಲ್ಲಿ ಕಣ್ಣು ಹಾಯಿಸಿದರೂ ಬಣ್ಣದೋಕುಳಿಯಿಂದ ಆವೃತವಾಗಿರುವಂತೆ ಕಾಣುವ ಇದನ್ನು ನೋಡುವುದೇ ಕಣ್ಣಿಗೊಂದು ಹಬ್ಬ. ಇದರಲ್ಲಿರುವ ಬಿಸಿನೀರು ಹರಿದು ಕೆಳಗಿರುವ "ಫ಼ೈರ್‌ಹೋಲ್" ನದಿಯನ್ನು ಸೇರುತ್ತದೆ.



ಗ್ರಾಂಡ್ ಪ್ರಿಸ್ಮ್ಯಾಟಿಕ್ ಸ್ಪ್ರಿಂಗ್

ಮೇಲಿನವುಗಳಿಗಿಂತ ಸ್ವಲ್ಪ ವಿಭಿನ್ನವಾಗಿರುವ, ತನ್ನ ಬೃಹದಾಕಾರದಿಂದಾಗಿ "ಮ್ಯಾಮೊತ್ ಹಾಟ್ ಸ್ಪ್ರಿಂಗ್ಸ್" ಎಂದು ಕರೆಸಿಕೊಳ್ಳುವ ಇನ್ನೊಂದು ಹಾಟ್ ಸ್ಪ್ರಿಂಗ್ ಈ ಪಾರ್ಕಿನ ಉತ್ತರದ ತುದಿಯಲ್ಲಿದೆ. ಇವುಗಳನ್ನು ದೂರದಿಂದ ನೋಡುವಾಗ ದೊಡ್ಡ

ದೊಡ್ಡ ಬಂಡೆಗಳಂತೆ ಕಾಣುತ್ತವೆ. ಇಲ್ಲಿ, ತಿಳಿಯಾದ ಬಣ್ಣದ ಸುಣ್ಣದ ಕಲ್ಲಿನಿಂದ ಪದರ ಪದರವಾಗಿ ಕೆರೆಗೆ ಗೋಡೆ ಕಟ್ಟಿದಂತೆ ನಿರ್ಮಿತವಾದ ರಚನೆಯಿಂದ ಬಿಸಿಬಿಸಿಯಾದ ನೀರು ಸಣ್ಣ ಸಣ್ಣ ಜಲಪಾತದಂತೆ ಕೆಳಗಿಳಿಯುತ್ತದೆ.



ಮ್ಯಾಮೊತ್ ಹಾಟ್ ಸ್ಪ್ರಿಂಗ್ಸ್

ಈ ನೀರಿನಲ್ಲಿ ಅಡಕವಾಗಿರುವ ಕರಗಿರುವ ಸುಣ್ಣದ ಅಂಶದಿಂದ ಮತ್ತೆ ಸುಣ್ಣದ ಗೋಡೆಗಳು ಬೆಳೆಯಲಾರಂಭಿಸುತ್ತವೆ. ಇದರಿಂದಾಗಿ ಇಲ್ಲಿ ಆಗಿಂದಾಗ ಹೊಸ ಹೊಸ ರಚನೆಗಳನ್ನು ಕಾಣಬಹುದಂತೆ. ಹಾಗೆಯೇ ಇಲ್ಲಿ ಅನೇಕ ಬಿಸಿನೀರು ಬತ್ತಿ ಹೋಗಿ, ಕಟ್ಟಿರುವ ಸುಣ್ಣದ ಗೋಡೆಗಳೆಲ್ಲ ಒಣಗಿ, ಬೃಹತ್ ಕಲ್ಲಿನ ಬಂಡೆಯಂತೆ ನಿಂತಿರುವ, ಹಾಗೂ ಸುಪ್ತಾವಸ್ಥೆಯಲ್ಲಿರುವ ಕೆಲವು ಹಾಟ್ ಸ್ಪ್ರಿಂಗ್ಸ್ ಸಹ ಇವೆ.

**ತಗಾದೆ**

"ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು"
ಎಂಬುದೊಂದು ಗಾದೆ
ಒಲಿದ ಗಂಡನಿಗೆ ಹುಳಿ ಮೊಸರು ಹಾಕಿದರೂ
ಎತ್ತೋಲ್ಲ ತನ್ನ ಸೊಲ್ಲು, ಮಾಡೊಲ್ಲ ಯಾವ
ತಗಾದೆ !!

– ಶುಭಶ್ರೀ. ಜಿ. ಬೆಳಂದೂರ



ಮಡ್ ಪಾಟ್

ಮಡ್ ಪಾಟ್ಸ್ ಅಥವಾ ಮಡ್ ವೋಲ್ಕ್ಯಾನೋ ಇರುವ ಜಾಗಗಳ ಕಡೆ ಹೊರಟರೆ ದೀಪಾವಳಿಯ ಸಮಯದಲ್ಲಿ ನಮ್ಮ ಊರಿನ ಬೀದಿಗಳಲ್ಲಿ ನಡೆದಾಡಿದಂತ ಅನುಭವವಾಗುವುದು. ಏಕೆಂದರೆ ಇವುಗಳಿಂದ ಹೊರಹೊಮ್ಮುವ ಗಂಧಕದ ವಾಸನೆ ಸುಡುಮದ್ದು ಅಥವಾ ಪಟಾಕಿಗಳಿಂದ ಬರುವ ವಾಸನೆಯನ್ನು ನೆನಪಿಗೆ ತರುವುದು. ಕೆಲವೊಂದು ಕಡೆ ಈ ಗಂಧಕದ ಘಾಟು ಎಷ್ಟು ತೀಕ್ಷ್ಣವಾಗಿದೆಯೆಂದರೆ, ಮೂಗು ಮುಚ್ಚಿಕೊಂಡೇ ಇವುಗಳನ್ನೆಲ್ಲ ನೋಡಬೇಕಾದಂತಹ ಪರಿಸ್ಥಿತಿ. ಆದರೂ, ನೆಲದೊಳಗೆ ಯಾರೋ ಮಿಕ್ಸರ್ ಇಟ್ಟು ಆ ಕೆಸರು ಮಣ್ಣನ್ನು ರುಬ್ಬುವಂತೆ ಭಾಸವಾಗುವ "ಚರ್ನಿಂಗ್ ಮಡ್ ಪಾಟ್", ಬಿಸಿಯಾಗಿ ಕೊತ ಕೊತ ಕುದಿಯುವ ಕೆಸರು ಮಣ್ಣಿನ ಹೊಂಡಗಳು, ಗಂಧಕದ ಘಾಟನ್ನು ಹೊರ ಚೆಲ್ಲುವ ಬಗ್ಗಡವಾದ ಬಿಸಿನೀರಿನ ಕೆರೆಗಳು ಇವುಗಳನ್ನು ನೋಡುವುದೇ ಒಂದು ವಿಶೇಷ ಅನುಭವ.

ಗೀಝರ್‌ಗಳು, ಹಾಟ್ ಸ್ಪ್ರಿಂಗ್‌ಗಳು, ಮಡ್ ಪಾಟ್‌ಗಳ ಲೋಕದಿಂದ ಈಚೆ ಬಂದು "ಗ್ರಾಂಡ್ ಕೆನ್ಯೋನ್ ಆಫ್ ದ ಯೆಲ್ಲೋಸ್ಟೋನ್" ಎಂದು ಕರೆಯಲ್ಪಡುವ, ಯೆಲ್ಲೋಸ್ಟೋನ್ ನದಿಯು ತನ್ನ ಹಾದಿಯಲ್ಲಿನ ಭೂಕೊರೆತದಿಂದ ನಿರ್ಮಿಸಿದ 20 ಮೈಲಿಗಳಷ್ಟು ಉದ್ದದ, 1200 ಅಡಿಗಳಷ್ಟು ಆಳದ, 1500–4000 ಅಡಿಗಳಷ್ಟು ಅಗಲವಿರುವ ಕಮ್ಮರಿಯ ಕಡೆ ಹೊರಟರೆ ತೆರೆದುಕೊಳ್ಳುವುದು ಅತ್ಯಂತ ಸುಂದರವಾದ, ನಯನಮನೋಹರವಾದ, ಮನಸ್ಸನ್ನು ಮುದಗೊಳಿಸುವ ಇನ್ನೊಂದು ಲೋಕ.



ಚರ್ನಿಂಗ್ ಮಡ್ ಪಾಟ್



ಮಡ್ ವೋಲ್ಕೆನೋ


ಈ ಕೆನ್ಯೋನ್‌ನ ಒಳಗಿರುವ "ಲೋಯರ್ ಫ಼ಾಲ್ಸ್" ಮತ್ತು "ಅಪ್ಪರ್ ಫ಼ಾಲ್ಸ್" ಎನ್ನುವ ಎರಡು ಜಲಪಾತಗಳು ಕೆನ್ಯೋನ್‌ನ ಸೌಂದರ್ಯವನ್ನು ದ್ವಿಗುಣಗೊಳಿಸಿವೆ. ಈ "ಲೊಯರ್ ಫ಼ಾಲ್ಸ್" ಯೆಲ್ಲೋಸ್ಟೋನಿನಲ್ಲಿರುವ ಅತಿ ಎತ್ತರದ ಜಲಪಾತ(308 ಅಡಿ).



ಅಪ್ಪರ್ ಫ್ಲಾಲ್ಸ್

ಜಲಪಾತಗಳ ಸುಂದರತೆಯ ಬಗ್ಗೆ, ಅದು ನೋಡುಗರಲ್ಲಿ ಉಂಟು ಮಾಡುವ ರೋಮಾಂಚನಕಾರಿ ಅನುಭವದ ಬಗ್ಗೆ ನಾನೇನು ಹೇಳುವುದು ಬೇಡ. ಇದು ಜಲಪಾತಗಳನ್ನು ನೋಡಿದವರೆಲ್ಲ ಅನುಭವಿಸಿರುವ ವಿಷಯ. ಈ ಕೆನ್ಯೋನ್‌ನ ಅಗಾಧತೆ, ಅದರೊಳಗೆ ಹರಿಯುತ್ತಿರುವ ಯಲ್ಲೋಸ್ಟೋನ್ ನದಿ, ಆ ನದಿಯ ಹರಿಯುವುಕೆಯ ದಾರಿಯಲ್ಲಿ
ನಿರ್ಮಿತಗೊಂಡ ಸಹಜ ಸುಂದರ ಜಲಪಾತಗಳು, ಕನ್ಯೋನ್‌ನ ಗೋಡೆಗಳಲ್ಲಿ ಇಲ್ಲಿಯ ವೋಲ್ಕ್ಯಾನಿಕ್ ನೇಚರ್‌ನಿಂದಾಗಿ ಉಂಟಾಗಿರುವ ಹಲವು ಬಣ್ಣಗಳು, ಅಲ್ಲಿ ನೋಡುತ್ತ ನಿಂತ ಜನರನ್ನು ಮೂಕವಿಸ್ಮಿತರನ್ನಾಗಿಸುವಲ್ಲಿ ಸಫಲವಾಗುತ್ತವೆ.

ಇನ್ನುಳಿದಂತೆ ಇಲ್ಲಿ ನೋಡಲು ಸಿಗುವ ವನ್ಯ ಮೃಗಗಳ ಬಗ್ಗೆ ಒಂದೆರಡು ಮಾತು. ಸಾಮಾನ್ಯವಾಗಿ ಎಲ್ಲಾ ಜಾಗಗಳಲ್ಲೂ ,ಯಾರ ಭಯವೂ ಇಲ್ಲದಂತೆ



ಕೆನ್ಯೋನ್ ಮತ್ತು ಲೋಯರ್ ಫ್ಲಾಲ್ಸ್



ಲೋಯರ್ ಫ್ಲಾಲ್ಸ್



ಕೆನ್ಯೋನ್

ತಿರುಗಾಡುವ ಇಲ್ಲಿಯ ಬೈಸನ್ ಜನರಿಗೆ ಫ್ಲೋಟೊ ತೆಗೆಯಲು, ವೀಡಿಯೋ ಮಾಡಲು ಬಹಳವಾಗಿ ಸಹಕರಿಸುವ ಪ್ರಾಣಿಗಳು. ದಾರಿಯಲ್ಲಿ ಡ್ರೈವ್ ಮಾಡುವಾಗ ಎಲ್ಲಾದರೊಮ್ಮೆ ಕಂಡು ಟ್ರಾಫ್ಫಿಕ್ ಜ್ಯಾಮ್ ಮಾಡಿಸಿ ಜನರು ಫ್ಲೋಟೊ ಕ್ಲಿಕ್ಕಿಸಲು ತಮ್ಮ ಹಿಂದೆ ಬರುವಂತೆ ಮಾಡುವವು ಇಲ್ಲಿಯ ಜಿಂಕೆಗಳು, ಮೂಸ್‌ಗಳು. ನಾವೂ ಸಹ ಇಲ್ಲಿದ್ದೇವೆ ಎಂದು ಹೇಳಿಸಿಕೊಳ್ಳುವ, ಜನರ ಕಣ್ಣಿಗೆ ಕಾಣದಂತೆ ತಿರುಗಾಡುವ ಕರಡಿ, ತೋಳ. ನರಿಗಳು, ಹಾಗು ಹಲವಾರು ಜಾತಿಯ ಪಕ್ಷಿಗಳು, ಸರೀಸೃಪಗಳು, ಸಸ್ತನಿಗಳು ಇಲ್ಲಿ ನೆಲೆಸಿವೆ.

ಮೇಲೆ ಉಲ್ಲೇಖಿಸಿರುವ ಯೆಲ್ಲೋಸ್ಟೋನ್ ಬಗೆಗಿನ ಸಂಗತಿಗಳು "ಟಿಪ್ ಆಫ್ಫ್ ದ ಐಸ್‌ಬರ್ಗ್" ಅಷ್ಟೇ. ಈ ಜಾಗದಲ್ಲಿ ಸುಮಾರು 200–250ರಷ್ಟು ಇನ್ನೂ ಸಕ್ರಿಯವಾಗಿರುವ ಗೀಜ್ಜರ್‌ಗಳು, ಹಾಟ್‌ಸ್ಪ್ರಿಂಗ್‌ಗಳು ಇವೆಯಂತೆ. ಒಂದು ನೂರಕ್ಕೂ ಮೇಲ್ಪಟ್ಟು ಜಲಪಾತಗಳಿವೆಯಂತೆ. ಸುಮಾರು 10,000ದಷ್ಟು ಭೂಉಷ್ಣತೆಗೆ ಸಂಬಂಧಿಸಿದ ವೈಶಿಷ್ಟ್ಯಗಳನ್ನು ಇಲ್ಲಿ ಗುರುತಿಸಬಹುದಂತೆ. ಅದರ ರಮಣೀಯತೆಯನ್ನು, ಆ ಸೌಂದರ್ಯದೊಳಗೇ ಹಾಸುಹೊಕ್ಕಿರುವ ರೌದ್ರತೆಯನ್ನೂ ಅದರ ನಿಜಸ್ವರೂಪದಲ್ಲಿಯೇ ಅನುಭವಿಸಿ ತಿಳಿಯಬೇಕು. ಪ್ರಕೃತಿ ಉಣಬಡಿಸುವ ರಸದೌತಣವನ್ನು ಅಲ್ಲಿ ಕುಳಿತೇ ಆಸ್ವಾದಿಸಬೇಕು.




ಬೈಸನ್




ಜಿಂಕೆ

ಮ್ಯೂಲ್ ಡಿಯರ್

ಕಳೆದ ಜುಲೈನಲ್ಲಿ ನಾವು ಯೆಲ್ಲೋಸ್ಟೋನ್ ನ್ಯಾಶನಲ್ ಪಾರ್ಕಿಗೆ ಭೇಟಿ ನೀಡಿದ ಮೇಲೆ ನನಗಾದ ಅನುಭವವನ್ನು ಕವನದ ರೂಪದಲ್ಲಿ ಬರೆದಿಟ್ಟಿದ್ದೆ. ಅದನ್ನೂ ಸಹ ಇಲ್ಲಿ ಸೇರಿಸಿದ್ದೇನೆ.

ರುದ್ರ ರಮಣೀಯ ಯೆಲ್ಲೋಸ್ಟೋನ್
ನೋಡಲು ಸಾಲದು ಇರೋ ಎರಡು ಕಣ್
ಹೋದಲ್ಲೆಲ್ಲಾ ಕಾಣುವ ಅಲ್ಲಿಯ ಬೈಸನ್
ಧರೆಗಿಳಿದಂತೆ ತೋರುವುದು ಯಮನ ವಾಹನ

ಬಣ್ಣ ಬಣ್ಣದ ಬಿಸಿ ನೀರಿನ ಕೆರೆಗಳು
ಸುತ್ತಲೂ ಇರುವ ಪೈನ್‌ಮರದ ಗುಡ್ಡಗಳು
ಅಲ್ಲಲ್ಲಿ ಹರಿವ ಸಣ್ಣ ಪುಟ್ಟ ತೊರೆಗಳು
ನಿಸರ್ಗದ ಕುಂಚದ ಸುಂದರ ಕೃತಿಗಳು

ಅಡಿಗಳೆತ್ತರಕ್ಕೆ ಚಿಮ್ಮುವ ಬಿಸಿನೀರಿನ ಬುಗ್ಗೆ
ನೋಡುಗರ ಮನಸ್ಸಿಗೆ ಹಾಕುವುದು ಲಗ್ಗೆ
ಗಗನ ಮುಟ್ಟುವ ತವಕದಲಿ ಗಾಳಿಯಲಿ ಏರಿ
ನಾಚುತ್ತ, ಬಳುಕುತ್ತ ಕೆಳಗಿಳಿವ ವೈಯ್ಯಾರಿ

ದರಿಯೊಳಗೆ ಹರಿಯುವ ಘನ ಗಂಭೀರೆ (ಯೆಲ್ಲೋಸ್ಟೋನ್ ನದಿ)
ವೀಕ್ಷಿಸುವ ಕಣ್ಗಳಿಗೆ ಮೋಡಿ ಮಾಡುವ ಧೀರೆ
ಭೋರ್ಗರೆದು ಧುಮುಕುವ ಅವಳ ಜಲಧಾರೆ
ಹರಿಸುವುದು ಮನದೊಳಗೆ ಭಾವಗಳ ಧಾರೆ

ಅಲ್ಲಲ್ಲಿ ಓಡುವ ಹರಿಣಗಳ ಗುಂಪು
ಕಾಣದೆ ಕಾಡಿಸುವ ತೋಳ,ಕರಡಿ,ನರಿಗಳು
ಮಿಂಚಿ ಮರೆಯಾಗುವ ಸುಂದರ ಪಕ್ಷಿಗಳು
ನೋಡಲೆಂದೆ ಇವುಗಳನು ನಿಲ್ಲುವ ಜನಗಳು

ಭೂದೇವಿಯ ಒಡಲಿನ ರುದ್ರ ತಾಂಡವ ನರ್ತನ
ರಮ್ಯ ರಮಣೀಯ ಸೌಮ್ಯಮಯ ಕೀರ್ತನ
ದಣಿವಿರದೆ ಸವಿಯುತ್ತ ನಲಿಯುವುದು ನಯನ
ಧನ್ಯತೆಯ ಭಾವದಲಿ ಮೂಕವಾಗುವುದು ಮನ

–೦–

**ಕಂದ**

ಮುಗಿಯಿತು ನವಮಾಸಗಳ ಸ್ಪಂದನ
ಆಯಿತು ಹೊಸ ಪ್ರಪಂಚದ ದರ್ಶನ
ಶುರುವಾಯಿತು ಭವದ ಬಂಧನ
ಆದೆನು ಮನೆಯ ಮುದ್ದಿನ ಕಂದ ನಾ

– ಶುಭಶ್ರೀ. ಜಿ. ಬೆಳಂದೂರ

**ಜೀವನ**

ಕಾಲಿ ಹಾಳೆಯಂತೆ ಇತ್ತು ನನ್ನ ಜೀವನ
ಎಂದು ನೀನು ಹಾಕಿದೆಯೋ ನಿನ್ನ ಸಹೀನ
ಆಯಿತಂದು ಈ ಜೀವನ ಪರಮ ಪಾವನ
ಇಂದು ನಮ್ಮೀರ್ವರದು ಗಂಧರ್ವ ಗಾಯನ

– ಶುಭಶ್ರೀ. ಜಿ. ಬೆಳಂದೂರ

## ಮರೆಯಾಗುತ್ತಿರುವ ವಡಪು ಹೇಳುವ ಕಲೆ – ಶ್ರೀಮತಿ ಶಾಂತಾ ಚಂದ್ರಶೇಖರ ರಾಜಗೋಳಿ, ಧಾರವಾಡ



ನಮ್ಮ ಬಳಗದ ರಾಜ್‌ಪ್ರಕಾಶ್ ಅಲಿಯಾಸ್ ಪ್ರಕಾಶ್ ಅವರ ತಾಯಿಯಾದ **ಶಾಂತಾ** ಅವರು ನಿರಂತರಕ್ಕಾಗಿ ಉತ್ತರಕರ್ನಾಟಕದ ಗ್ರಾಮೀಣ ಸೊಗಡಿನ ಪರಿಚಯವನ್ನು ಜಾನಪದ ಗೀತೆಗಳ ಮೂಲಕ ಮಾಡಿ ಕೊಟ್ಟಿದ್ದಾರೆ. ಮೊಮ್ಮಕ್ಕಳ ಆಗಮನದ ಸಡಗರದಲ್ಲಿರುವ ಇವರು ಇನ್ನೂ ಅನೇಕ ಜಾನಪದ ಗೀತೆಗಳನ್ನು ಕೊಡಲಿಚ್ಛಿಸಿದ್ದರು. ಆದರೆ ನಾವೇ ಯುಗಾದಿ ಸಂಚಿಕೆಗೊಂದಿಷ್ಟು ಮೀಸಲಿಟ್ಟಿದ್ದೇವೆ. ಸ್ವಾತಂತ್ರ್ಯ ಸೇನಾನಿ ಸಂಗೊಳ್ಳಿ ರಾಯಣ್ಣನ ದಾಳಿಗೆ ತತ್ತರಿಸಿ ತಾಲೂಕು ಸ್ಥಾನವನ್ನು ಬೈಲಹೊಂಗಲಕ್ಕೆ ಬಿಟ್ಟುಕೊಟ್ಟ ಸಂಪಗಾವಿ ಊರಿನವರಾದ ಇವರು ಯರಡಾಲದ ಸೋದರಮಾವ ಶ್ರೀಯುತ ಚಂದ್ರಶೇಖರ ರಾಜಗೋಳಿಯವರನ್ನು ವರಿಸಿ 40+ ವರ್ಷಗಳ ತುಂಬು ಸಂಸಾರ ಜೀವನ ನಡೆಸುತ್ತಿದ್ದಾರೆ.

ಉತ್ತರ ಕರ್ನಾಟಕದ ಕಡೆ ಶುಭ ಸಮಾರಂಭಗಳಲ್ಲಿ ಆರತಿ ಮಾಡುವ ಸಂದರ್ಭಗಳಲ್ಲಿ ಮುತ್ತೈದೆಯರು ತಮ್ಮ ಗಂಡನ ಹೆಸರು ಹೇಳುವಾಗ ಬಳಸುವ ಚುಟುಕುಗಳಿಗೆ ವಡಪುಗಳು ಎಂದು ಕರೆಯುತ್ತಾರೆ. ಈಗಿನವರಿಗೆ ಈ ರೀತಿ ವಡಪುಗಳನ್ನು ಹೇಳಲೂ ಬರುವದಿಲ್ಲ ಮತ್ತು ಅಷ್ಟೊಂದು ಸಮಯವೂ ಇರುವುದಿಲ್ಲ. ಆದರೆ ನಮ್ಮ ಕಾಲದಲ್ಲಿ ತುಂಬಾ ಬಳಕೆಯಲ್ಲಿದ್ದ ಮತ್ತು ಸಧ್ಯಕ್ಕೆ ನಶಿಸುತ್ತಿದೆ ಎನ್ನಬಹುದಾದ ವಡಪುಗಳ ಬಗ್ಗೆ ಒಂದು ಅವಲೋಕನ ಮಾಡುವ ಪ್ರಯತ್ನ ಮಾಡಿದ್ದೇನೆ.

ಗಂಡನ ಯೊಗಕ್ಷೇಮವೇ ಹೆಂಡತಿಯ ಆದ್ಯ ಕರ್ತವ್ಯ ಆಗಿರುವದರಿಂದ ವಡಪುಗಳಲ್ಲಿ ಈ ರೀತಿ ಹೇಳಬಹುದು.

**"ಅರಗಿಳಿಗೆ ಸೇರುವದು ಆಲದ ಹಣ್ಣು**
**...........ಅವರ ಕೈಯಲ್ಲಿ ಕೊಡುವೆನು ಬಾಳೆಹಣ್ಣು"**

**( ಸೂಚನೆ : ............ ಇದ್ದಲ್ಲಿ ಗಂಡನ ಹೆಸರನ್ನು ಸೇರಿಸಿಕೊಳ್ಳುವದು)**

**"ಆಕಾಶದಲ್ಲಿ ಇರುವದು ಹಾಲಕ್ಕಿ**
**ಅಂಗಡಿಯಲ್ಲಿ ಇರುವದು ಏಲಕ್ಕಿ**
**...........ಅವರ ಕೈಯಲ್ಲಿ ಕೊಡುವೆನು ಚಹಾ ಅವಲಕ್ಕಿ"**

**"ಶಕುಂತಲೆ ಅತ್ತೆಯ ಮನೆಗೆ ಹೋಗುವಾಗ**
**ಸಖಿಯರಿಗೆ ಆಗುವದು ಚಡಪಡಿಕೆ**
**........ಅವರ ಕೈಯಲ್ಲಿ ಕೊಡುವೆನು ಎಲೆಅಡಿಕೆ"**

ಆಂಗ್ಲರು ನಮ್ಮನ್ನು ಆಳುತ್ತಿದ್ದಾಗ ಮತ್ತು ಇಂಗ್ಲೀಷ್ ಪ್ರಾಮುಖ್ಯತೆ ಪಡೆದಿದ್ದಾಗ ಅದನ್ನೆ ಮುತ್ತೈದೆ ತನ್ನ ವಡಪಿನಲ್ಲಿ ಅಳವಡಿಸಿಕೊಂಡಿರುವ ಬಗೆ ಹೇಗಿದೆ ನೋಡಿ . . . !

**"ಅತ್ತಿಯವರಿಗೆ ಬೇಕು ಅತ್ತಿ ಹೂವಿನ ಮಡಿ**
**ಮಾವನವರಿಗೆ ಬೇಕು ಮಲ್ಲಿಗೆ ಹೂವಿನ ಮಡಿ**
**ನನಗೆ ಬೇಕು ಕ್ಯಾದಿಗೆ ಮಡಿ**
**..........ಅವರಿಗೆ ಬೇಕು ಇಂಗ್ಲೀಷ್ ನುಡಿ"**

ತನ್ನ ಗಂಡನ ಕೆಲಸದ ಬಗ್ಗೆ ಮುತ್ತೈದೆ ಮೆಚ್ಚುಕೆ ವ್ಯಕ್ತಪಡಿಸಿದ್ದು ಹೀಗೆ.

**"ಮಲ್ಲಿಗೆ ಹೂವಿನ ಮಂದಾರ**
**ಶ್ರೀಗಂಧದ ಬಾಜ಼ಾರ**
**ಕಂಪನಿ ಕಾರಬಾರದಾಗ ಇಂಗ್ಲೀಷ್ ದರಬಾರ್ ನಡಸ್ತಾರ್......"**

**"ಗೋಟು ಪಾಟ್ಲಿ ಹಿಂದ**
**ರಾಜ ವರ್ಕಿ ಮುಂದ**
**.......ರು ಬರುವ ತನಕ ಕಛೇರಿಯಲ್ಲ ಬಂದ್"**

ತನ್ನ ಗಂಡ ತನ್ನ ಸುತ್ತ ಸುತ್ತುತ್ತಾನೆ ಮತ್ತು ತನ್ನ ಹೂವಿನ ಮೇಲಿನ ಪ್ರೀತಿಗೆ ಹೇಗೆ ಪ್ರತಿಕ್ರಿಯಿಸುತ್ತಾನೆ ಅಂತ ಕಾವ್ಯಮಯವಾಗಿ ಒಡಪುಗಳಲ್ಲಿ ಗರತಿ ಹೇಳುವದು ಹೀಗೆ.

**"ಅತ್ತಿ ಹೆಸರು ಅತ್ತಿಗೆ ಹೂವು**
**ಮಾವನ ಹೆಸರು ಮಲ್ಲಿಗೆ ಹೂವ**
**ನನ್ನ ಹೆಸರು ಸುಗಂಧಿ ಹೂವ**
**ಸುಗಂಧಿ ಹೂವಿನ ಮುಂದ ಸುಳಿದಾಡತಾರ......."**

**"ತಾಜ ಮಲ್ಲಿಗಿ ಜೂಜ ಮಲ್ಲಿಗಿ ಮಧ್ಯಾಹ್ನ ಮಲ್ಲಿಗಿ**
**ತುಗೊಂಡ ಇದ್ದಲ್ಲಿಗೆ ಬರತಾರ ............"**

ಸ್ವಲ್ಪ ಆಧುನಿಕತೆಯನ್ನು ಒಳಗೊಂಡು ತಯಾರಾದ ಒಂದು ಒಡಪು.

**"ಆಗ್ರಾದಲ್ಲಿರುವದು ತಾಜಮಹಲ್**
**........ರ ತೇಜವಿರುವದು ನನ್ನ ಕುಂಕುಮದ ಮೇಲ್"**

ದೇಶದ ಆಗುಹೋಗುಗಳನ್ನು ಗರತಿ ಗಂಡನ ಹೆಸರು ಹೇಳುವಾಗ ಬಳಸಿಕೊಳ್ಳುವದು ಹೇಗಿದೆ ನೋಡಿ....

**"ಆಂಗ್ಲರಿರುವದು ಇಂಗ್ಲೇಂಡಿನಲ್ಲಿ**
**ಕಾಂಗ್ರೆಸ್ಸಿನವರಿರುವದು ಭಾರತದಲ್ಲಿ**
**..........ರು ಕಟ್ಟಿದ ಮಂಗಳಸೂತ್ರವಿರುವದು ನನ್ನ ಕೊರಳಲ್ಲಿ"**

(ಕಾಂಗ್ರೆಸ್ಸಿನವರಿರುವದು ಎನ್ನುವ ಜಾಗದಲ್ಲಿ ಬೇರೆ ಪಕ್ಷಗಳ ಹೆಸರು ಸಹ ಬಳಸಿಕೊಳ್ಳಬಹುದು)

ಪತಿಯೇ ಪರದೈವ ಪತಿಯ ಪಾದಸೇವೆಯೆ ಪರಮ ಭಾಗ್ಯ ಎಂದು ನಂಬಿದ ಗೃಹಿಣಿ ಗಂಡನ ಹೆಸರನ್ನು ಹೀಗೆ ಹೇಳುತ್ತಾಳೆ.

**"ನೀರಲ್ಲಿ ಕಾಣುವದು ನೆರಳು**
**ನಾರಿ ಹಾಕುವಳು ಹೆರಳು**
**........ರ ಪಾದವೆ ನನಗೆ ವಜ್ರದ ಹರಳು"**

ವಡಪು ಹೇಳುವಾಗ ನೆರೆದ ಎಲ್ಲರಿಗೂ ತನ್ನ ಹೆಸರೂ ಗೊತ್ತಾಗಲಿ ಎಂಬ ಉದ್ದೇಶದಿಂದ ಪೌರಾಣಿಕ ಸನ್ನಿವೇಶವೊಂದನ್ನು ಬಳಸಿಕೊಂಡು ವಡಪು ನಿರ್ಮಾಣ ಮಾಡಿದ ರೀತಿ ಹೇಗಿದೆ ನೋಡಿ.

**"ವಿಶ್ವಾಮಿತ್ರನ ತಪಸ್ಸನ್ನು ಭಂಗ ಮಾಡಿದವಳು ಮೇನಕೆ ಎಂಬ ವಾರಾಂಗಿನಿ**
**.........ರ ಹೆಸರು ಹೇಳುವೆನು.......ಎಂಬ ಅರ್ಧಾಂಗಿನಿ"**

ತನ್ನ ಗಂಡ ತನ್ನನ್ನು ಬಹಳ ಪ್ರೀತಿಸುತ್ತಾನೆ ಎಂದು ವಡಪಿನಲ್ಲಿ ಹೇಳುವಾಗ ಸತಿಗೆ ಮಹದಾನಂದ.

**"ಹಾವಿಗೆ ಹುತ್ತ ಚೆಂದ**
**ಕೊರಳಿಗೆ ಮುತ್ತ ಚೆಂದ**
**..........ರಿಗೆ ನಾನೇ ಚೆಂದ"**

ತನ್ನ ಮೆಚ್ಚಿನ ಗಂಡನ ಹಡೆದವಳ(ತಾಯಿ) ಬಗ್ಗೆ ಪ್ರೀತಿ ವ್ಯಕ್ತ ಮಾಡುವಾಗ ಹುಟ್ಟಿದ ಒಂದು ವಡಪು.

**"ರತ್ನದ ವೃಂದಾವನ ಮುತ್ತಿನ ತುಳಸಿಕಟ್ಟೆ**
**ಅತ್ತಿಯವರ ಹೊಟ್ಟೆಲಿ ಮುತ್ತಿನಂತವ್ರು ಹುಟ್ಟ್ಯಾರ....."**

ನಮ್ಮಲ್ಲಿ ಸೋಬಾನೆ, ಬಳೆ ಇಡಿಸುವದು, ಉಡಿ ತುಂಬುವದು, ಸೀರೆ ಮಾಡುವದು, ನಾಮಕರಣ ಮುಂತಾದ ಕೆಲಸಗಳು ನಡೆಯುವದು ಹೆಚ್ಚಾಗಿ ಸಾಯಂಕಾಲದಲ್ಲಿ ಅದನ್ನೇ ತನ್ನ ವಡಪಿನಲ್ಲಿ ಗರತಿ ಬಳಸಿಕೊಂಡಿದ್ದು ಹೀಗೆ.

**"ಕಿತ್ತೂರು ಚೆನ್ನಮ್ಮನ ಮೂಗಿನಲ್ಲಿ ಇರುವದು ವಜ್ರದ ಹರಳಿನ ನತ್ತು**
**.........ರ ಹೆಸರು ಹೇಳುವೆನು ಮೂರುಸಂಜಿ ಹೊತ್ತು"**
(ಮೂರುಸಂಜಿ- ಇದು ಮುಸ್ಸಂಜೆಯ ಗ್ರಾಮೀಣ ರೂಪ)

ಹೆಣ್ಣು ಮಕ್ಕಳಿಗೆ ತವರೆಂದರೆ ಪಂಚ ಪ್ರಾಣ ಹೀಗಾಗಿ ತನ್ನ ತವರಿನ ಬಗ್ಗೆ ಮತ್ತು ತನ್ನ ತವರಿನವರ ಬಗ್ಗೆ ಆಕೆ ವಡಪು ಹೇಗೆ ತಯಾರಿಸುತ್ತಾಳೆ ನೋಡಿ.

**"ಗಾಂಧೀಯವರು ಉಡುವದು ಮೂರು ಮಳದ ಪಂಜಿ**
**............ರ ಹೆಸರು ಹೇಳುವೆನು.........ಅವರ ತಂಗಿ"**

**"ಈಶ್ವರನಿಗೆ ಏರಿಸುವರು ಮೂರುದಳದ ಪತ್ರಿ**
**...........ರ ಹೆಸರು ಹೇಳುವೆನು.......... ಅವರ ಪುತ್ರಿ"**

12ನೆಯ ಶತಮಾನದಲ್ಲಿ ಬಸವಾದಿ ಶರಣರು ಮಾಡಿದ ವಚನ ಕ್ರಾಂತಿ ಅನೇಕ ಗೃಹಿಣಿಯರಿಗೆ ವಚನ ಬರೆಯಲು ಪ್ರೇರೆಪಿಸಿತಲ್ಲದೆ ಅವರ ಜೀವನದ ಅನುಭವಾಮೃತಗಳು ನಮ್ಮ ನಾಡಿಗೆ ಅಪೂರ್ವ ಕೊಡುಗೆ ನೀಡಿವೆ. ಹೀಗಿರುವ ಶಿವಶರಣರ ಬಗ್ಗೆ ಅವರ ಬೋಧನೆಗಳ ಬಗ್ಗೆ ತನಗಿರುವ ಅರಿವನ್ನು ಗರತಿ ವಡಪಿನಲ್ಲಿ ಹೇಗೆ ಬಳಸಿಕೊಂಡಿದ್ದಾಳೆ ನೋಡಿ..

**"ಅಂಗಕ್ಕೆ ಲಿಂಗವು ಶ್ರೇಷ್ಠ**
**ಲಿಂಗಕ್ಕೆ ಜಂಗಮ ಶ್ರೇಷ್ಠ**
**ಜಂಗಮಕ್ಕೆ ವಿಭೂತಿ ಶ್ರೇಷ್ಠ**
**ವಿಭೂತಿಗೆ ರುದ್ರಾಕ್ಷಿ ಶ್ರೇಷ್ಠ**

**ನನಗೆ ನಮ್ಮ.......ರೆ ಶ್ರೇಷ್ಠ"**

ನಮ್ಮ ಸಂಸ್ಕೃತಿಯ ಪ್ರತೀಕವಾಗಿರುವ ವಿನಯ ವಿಧೇಯತೆಗಳನ್ನು ಮುತ್ತೈದೆ ತನ್ನ ವಡಪಿನಲ್ಲಿ ಅಳವಡಿಸಿಕೊಳ್ಳುವಾಗ ನಳದಮಯಂತಿಯರ ಪೌರಾಣಿಕ ಕಥೆಯ ಸಹಾಯ ಪಡೆಯುತ್ತಾಳೆ.

**"ನಂದನವನದಲ್ಲಿ ಹಂಸ ಪಕ್ಷಿಯ ಕೂಡ ಮಾತಾಡಿದವಳು ದಮಯಂತಿ**
**.......ರ ಹೆಸರು ಹೇಳುವೆನು ನಿಮಗೆ ಮಾಡಿಕೊಳ್ಳುತ್ತ ವಿನಂತಿ"**

ಗಂಡನ ಮನೆ ಬೆಳಗಲು ಬಂದ ಸೊಸೆ ತನ್ನ ಗಂಡನ ಮನೆಯ ಹೆಸರನ್ನು ಶಾಶ್ವತವಾಗಿಡಲು ವಡಪಿನ ಮೊರೆ ಹೋಗಿದ್ದಾಳೆ.

**"ರುಕ್ಮಿಣಿಯು ಶೀಕೃಷ್ಣನಿಗೆ ಓಲೆ ಬರೆಯಲು ಮುತ್ತು ಸುಟ್ಟು ಮಾಡಿದಳು ಮಸಿ**
**................ರ ಹೆಸರು ಹೇಳುವೆನು ............... ಅವರ ಸೊಸಿ"**

ಹೆಂಗಳೆಯರೇ ತುಂಬಿರುವ ಸಮಾರಂಭಗಳಲ್ಲಿ ತಿಳಿ ಹಾಸ್ಯಗಳಿಗೆ ಏನು ಕೊರತೆಯಿಲ್ಲ. ಗಂಡನ ಮನೆಯವರನ್ನು ಚುಡಾಯಿಸಲು ವಡಪಿನ ಸಹಾಯ ಹೇಗೆ ಪಡೆಯಬಹುದು ನೋಡಿ.

**"ಆರ ಹೇರ ಎಳ್ಳ**
**ಮೂರ ಹೇರ ಜೊಳ್ಳ**
**.............ಅವರ ಮಾತೆಲ್ಲ ಬರೀ ಸುಳ್ಳ"**
(ಹೇರ ಎಂದರೆ ಹಳ್ಳಿಗಳಲ್ಲಿ ಧಾನ್ಯಗಳನ್ನು ಅಳೆಯಲು ಬಳಸುವ ಮಾಪಕ)

**"ಹಳ್ಳದ ಅಚೀಕ ಅವರು**
**ಹಳ್ಳದ ಇಚೀಕ ನಾವು**
**ಹಳ್ಳದಾಗ ಇಳೀಲಿಲ್ಲ ಮಾರಿ ತೊಳೀಲಿಲ್ಲ**
**...............ಅವರ ನೆಲಿ ನನಗ ತಿಳೀಲಿಲ್ಲ"**
(ನೆಲಿ ಎನ್ನುವದು ನೆಲೆ ಎಂಬುದರ ಗ್ರಾಮ್ಯ ರೂಪ)

ಕೆಲವೊಬ್ಬರ ಮನೆಗಳಲ್ಲಿ ಕೆಲವೊಂದು ಶುಭಕಾರ್ಯಗಳನ್ನು ಮಾಡುವ ಪದ್ಧತಿ ಇರುವದಿಲ್ಲ ಹೀಗಾಗಿ ಅವರು ತಮ್ಮ ಸಂಬಂಧಿಕರ ನೆರವು ಪಡೆಯಬೇಕಾಗುತ್ತದೆ ಆಗ ಅವರ ಸಹಾಯವನ್ನು ಸ್ಮರಿಸಲೋಸುಗ ಜಾಣ ಗರತಿ ವಡಪಿನಲ್ಲೆ ಅವರ ಉಪಕಾರ ಸ್ಮರಣೆ ಮಾಡುತ್ತಾಳೆ.

**"ಅಕ್ಕಮಹಾದೇವಿ ಐಕ್ಯ ಆದದ್ದು ಕದಳಿ ಬನದಲ್ಲಿ**
**......ರ ಹೆಸರು ಹೇಳುವೆನು.............ಅವರ ಮನೆಯಲ್ಲಿ"**

ತನ್ನ ಗಂಡನ ಮನೆಯವರ ಬಗ್ಗೆ ತನ್ನ ಅಭಿಪ್ರಾಯಗಳನ್ನು ಬಹಿರಂಗವಾಗಿ ವ್ಯಕ್ತಮಾಡಲು ವಡಪಿಗಿಂತ ಬೇರೆ ಸಾಧನ ಇನ್ನೊಂದಿಲ್ಲ ಎಂದರಿತಾಗ ಹುಟ್ಟಿದ ವಡಪು ಇದು.

**"ಶಿವಶರಣೆ ನಮ್ಮತ್ತಿ**
**ಶಿವಶರಣ ನಮ್ಮಾವ**
**ಲಸಗುನ್ನಿ ಕಾಯಿಯಂತ ನಮ್ಮ ನಾದಿನಿ**
**ಲಸ್ಕರದಂತ ನಮ್ಮ ಮೈದುನ**

**ಚಂದ್ರಹಾರದಂತ ನಮ್ಮ ರಾಯರು........."**
**(ಲಸಗುನ್ನಿ ಕಾಯಿ=ವಿಪರೀತ ಕೆರೆತ ಉಂಟುಮಾಡುವ ಗುಣ ಹೊಂದಿರುವ ಒಂದು ಬಗೆಯ ಗಿಡದ ಕಾಯಿ)**
**(ಲಸ್ಕರ=ಒಳ್ಳೆಯವ)**

ತನ್ನ ಗಂಡನ ಸದ್ಗುಣಗಳ ಬಗ್ಗೆ ವಡಪಿನಲ್ಲೆ ಗರತಿ ಹ್ಯಾಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾಳೆ ನೋಡಿ.

**"ಸೆರಗಿನ ಸಿಂಬಿ ಅರಗಿನ ಕೊಡ**
**ಶೀಲವಂತರ ಮನಿ ಸೀತಾದೇವಿ ಬರತಾಳಂತ**
**ಮಾರಿ ನೋಡಿ ದಾರಿ ಬಿಡತಾರ ನಮ್ಮ ರಾಯರು..............."**

ಹೀಗೆ ಹಲವಾರು ವಿಧದಿಂದ ಗಂಡನ ಹೆಸರನ್ನು ಹೇಳುವ ವಡಪು ಹೇಳುವ ಕಲೆಯನ್ನು ಅಳಿಯದಂತೆ ಉಳಿಸಬೇಕಲ್ಲವೆ?
ಟಿಪಿ ಬಳಗದ ಸದಸ್ಯರೆಲ್ಲರಿಗೂ ಶುಭವಾಗಲಿ.

– ೦ –

## ಬಾಳೆ ಹಣ್ಣಿನ ಸಿಪ್ಪೆ

ಸಂಗ್ರಹ : ಅರುಣ. ಆರ್. ಯಾದವಾಡ.

ನಾಲ್ಕನೇ ಕ್ಲಾಸಿನಲ್ಲಿ ಪಾಠ ನಡೆಯುತ್ತಿತ್ತು.
"ಬಾಳೆ ಹಣ್ಣನ್ನು ಸಿಪ್ಪೆ ಸಮೇತ ನಾವ್ಯಾಕೆ ತಿನ್ನುವದಿಲ್ಲ?" ಪ್ರಶ್ನೇ ಕೇಳಿದ್ದರು ಮೇಡಮ್.
ಹೆಸರುವಾಸಿ ವಕೀಲರ ಮಗ ಉತ್ತರಿಸಿದ " ಈ ಹಿಂದೆ ಹಾಗೆ ಯಾರೂ ತಿಂದದ್ದಿಲ್ಲ ಮೇಡಮ್."

"ಸಿಪ್ಪೆ ಸಮೇತ ತಿನ್ನಬೇಕೆಂದರೆ ತೊಳೆಯಬೇಕಲ್ಲ, ತೊಳೆಯುವದಕ್ಕೆ ನೀರಿಲ್ಲವಲ್ಲ ಮೇಡಮ್." ಮುನಿಸಿಪಾಲಿಟಿ ನೌಕರನ ಮಗಳು ಉತ್ತರಿಸಿದಳು.

ಬಟ್ಟೆ ಅಂಗಡಿ ಮಾಲೀಕನ ಮಗ ಹೇಳಿದ "ಸಿಪ್ಪೆಯ ಬಣ್ಣ ಅಲ್ಲಲ್ಲಿ ಕೆಟ್ಟು ಹೋಗಿರುತ್ತಲ್ವಾ ಮೇಡಮ್, ಅದಕ್ಕೆ".

"ಜೀರ್ಣ ಆಗೋಲ್ಲ ಮೇಡಮ್, ಅದಕ್ಕೆ." ಡಾಕ್ಟರರ ಮಗ ಉತ್ತರಿಸಿದ.

ಸುಮ್ಮನೆ ಕೂತಿದ್ದ ಎಮ್ಮೆಲ್ಲೆ ಮಗನೆಡೆಗೆ ಬೊಟ್ಟು ಮಾಡಿದರು ಮೇಡಮ್.
"ಎಲ್ಲಾ ನಾವೇ ತಿಂದೆವು ಅಂತಾಗಬಾರದಲ್ಲ ಮೇಡಮ್, ಅದಕ್ಕೆ " ಸಾವಕಾಶವಾಗಿ ಎದ್ದು ನಿಂತು ಉತ್ತರಿಸಿದ ಭಾವಿ ಎಮ್ಮೆಲ್ಲೆ..!

## ಹೀಂಗ ಒಂದು ಟ್ರೇನಿಂಗ್ . . . !

– ಗಿರೀಶ. ಬೆಳಂದೂರ.(ಸದ್ದಾಮ್), ಡೆನ್‌ವೇರ್, ಕೊಲೆರಾಡೊ, ಯು.ಎಸ್.ಎ.



ಮಹಾ ವಾಗ್ಮಿ, ಒಳ್ಳೆಯ ತಂತ್ರಜ್ಞ, ಮಿತ್ರನಾಗಿರುವ **ಸದ್ದಾಮ್** ಹುಬ್ಬಳ್ಳಿಯ ಬಿ.ವಿ.ಬಿಯಲ್ಲಿ ಓದಿದ್ದು, ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಮೂರುವರೆ ವರ್ಷ ಸೇವೆ ಸಲ್ಲಿಸಿದ ನಂತರ ಕಳೆದ ಎಂಟು ವರ್ಷಗಳಿಂದ ಸಾಫ್ಟ್‌ವೇರ್ ರಂಗದಲ್ಲಿದ್ದಾರೆ. ವಾದಕ್ಕೆ ನಿಂತರೆ ಸುಲಭವಾಗಿ ಸೋಲೊಪ್ಪದ ಸದ್ದಾಮ್, ಕಂಪನಿಯ ಟ್ರೈನಿಂಗ್ ಒಂದರ ಸ್ವಾರಸ್ಯಕರ ಅನುಭವವನ್ನು ಇಲ್ಲಿ ಹಂಚಿಕೊಂಡಿದ್ದಾರೆ.

ಹೋದ ವರುಷ ನಮ್ಮ ಕಂಪನಿಯವರು, “ಎಕ್ಸೆಲ್” ಅನ್ನೋ ನಾಲ್ಕು ದಿನದ ವಿಶೇಷವಾದ ಒಂದು ತರಬೇತಿಗೆ ನನ್ನನ್ನು ಕಳಸಾಕ ವಿಚಾರ ಮಾಡಾಕತ್ತಿದ್ರು. ಮಾಮೂಲಿಯಾಗಿ ನಮ್ಮ ಕಂಪನಿಯ ತರಬೇತಿಗಳು ಅಂದ್ರ ಅಲ್ಲೇ ಪ್ರಾಜೆಕ್ಟ್‌ನಲ್ಲಿ ಕೆಲಸ ಮಾಡುವ ಯಾರನ್ನಾರ ಹಿಡಿದು "ಟ್ರೈನಿಂಗ್" ತೊಗೋ ಅಂತಾರ. ಆವಾಂ ಎರಡು ದಿನ ಒಂದೆರಡು ಬುಕ್ಸ್ ತಿರುವಿಹಾಕಿ ಹೆಸರಿಗೆ ಒಂದು "ಟ್ರೈನಿಂಗ್" ಅಂತ ಮುಗಿಸಿದ್ರ ಆತು ನೋಡ್ರಿ. ಭಾಳ ಸಲ "ಟ್ರೈನಿಂಗ್" ಅಂದ್ರ ಯಾವನೋ ಪ್ರಿಪೇರ್ ಮಾಡಿದ ಸ್ಲೈಡ್ಸ್ ತೋರಿಸಿ ಅದನ್ನ ಓದಕೋಂತ ಹೋಗೋದು!! ಅಟೆಂಡ್ ಆದೋರಿಗೆ, ಟ್ರೈನಿಂಗ್ ಮುಗಿಯೋ ಅಷ್ಟೊತ್ತಿಗೆ, ತಲಿನೋವ ಹತ್ತಿ, ತಲಿ ಗಿಂವ್ ಅಂತಿರ್‌ತೈತಿ.

ಆದ್ರ "ಟ್ರೈನಿಂಗ್" ವ್ಯವಸ್ಥೆ ಮಾಡಿದ ಪ್ರಾಜೆಕ್ಟ್ ಲೀಡರ್‌ಗ ಒಂದು ಗರಿ, "ಟ್ರೈನಿಂಗ್" ತೊಗೊಂಡ (ಸ್ಲೈಡ್ ಓದಿದ!!)ವನಿಗೆ ಒಂದು ಕೊಂಬು. ಮುಂದೊಂದು ದಿನ "ಅಪ್ರೈಸಲ್" ಟಾಯಮ್ ಬಂತು ಅಂದ್ರ, "ಜಾಸ್ತಿ ರೇಟಿಂಗ್ ಕೊಡಪಾ" ಅಂತ ಹೇಳಾಕ (ಫೈಟ್ ಮಾಡಾಕ!!) ಏನಾರ ಬೇಕಲಾ!! ಇದೆಲ್ಲಾ ಯೋಚ್ನೆ ಮಾಡಕೋಂತ.. ಯಾರಿಗೆ ಬೇಕಪಾ ಈ ಟ್ರೈನಿಂಗ್ ಅಂತ ಗೊಣಗಾಡ್ಕೋತ ಕೇಳಿದೆ, "ಎಲ್ಲಿದೆ ಈ ಟ್ರೈನಿಂಗ್" ಅಂತ. ಬಂದಿತು ಉತ್ತರ "ಲಾಸ್ ಏಂಜಲೀಸ್‌ನಲ್ಲಿ"”ಅಂತ!!!!

ಹೊಗ್ಗೋ ಇವನ... "ಟ್ರೈನಿಂಗ್" ಹೆಂಗಾರ ಇರವಲ್ಲದ್ಯಾಕ.. ಹೋಗಿಬರೋಣ ನಡೀ ಅಂತ ಹೂಂ ಅಂದೆ!! "ಎಕ್ಸೆಲ್ ಬಗ್ಗೆ ಒಂದೆರಡು ಈ–ಮೈಲ್ ಬರತಾವ ರಿಪ್ಲೈ ಮಾಡು" ಅಂತ ಅಂದ ನಮ್ಮ ಮ್ಯಾನೇಜರ್.. ಆತು ಬಿಡು ಅದರಾಗೇನು ಅಂತ ಹೂಂ ಅಂದೆ.

ಎರಡು ಮೈಲೇನೊ ಬಂದ್ವು.. ಆದ್ರ ಒಂದೊಂದ್ರಾಗೂ 500, 500 ಕೊಶ್ಚನ್ಸು!!! ಇವಕ್ಕೆಲ್ಲಾ ಒಂದು ದಿನದಾಗ ಆನ್ಸರ್ ಬರದು ಕಳಿಸ್ರಿ ಅಂತಾ ಕೆಂಪಕ್ಷರದಾಗ ಬ್ಯಾರೆ ಬರದಾರ! ಹೊಗ್ಗೋ ಇವನ ಎಲ್ಲಿಗ ಬಂತಪಾ ಇದು!! ಏನು ಕ್ವೆಶ್ಚನ್ನೋ ಏನೋ.. ಇನ್ನೇನು ನಮ್ಮ ಎಲ್ಲಾ B.E. ಬುಕ್ಸ್ ಹುಡುಕೊಂಡು ಹೋಗಬೇಕೇನೋ ಅನಕೊಂಡೆ. ಎಲ್ಲಾದಕ್ಕೂ ಉತ್ತರ ಬರೀದ, ಅಮ್ಯಾಲ "ನಪಾಸ ಆದ ಇವಾಂ" ಅಂತ ನಗತಾರೇನೋ ಅಂತ ಅಂಜಿಕಿ ಬ್ಯಾರೆ!!

ಹೋಗ್ಲಿ ಏನ್ ಕೊಶ್ಚನ್ಸು ಅದಾವು ಅಂತ ತಗದಾದ್ರೂ ನೋಡೂನ ಅಂತೇಳ್ಕೇಸಿ, ಮೈಲ್‌ನ ಅಟ್ಯಾಚ್‌ಮೆಂಟ್ ಓಪನ್ ಮಾಡಿ ನೋಡಿದೆ. ಮೊದ್ಲೇಕ ಒಂದು ಸೂಚನೆ ಬರದಿದ್ರು. ”There is no, right or wrong answers for these questions. Write whatever you feel like”. ಎಲಾ ಇವನಾ!!! ಕಾಲೇಜ್‌ನ್ಯಾಗೂ ಹಿಂಗ "ಸೂಚನೆ" ಇದ್ರ ಎಷ್ಟು ಚೊಲೋ ಆಕ್ಕಿತ್ತು!! ಅನಕೊಂಡೆ. ಪ್ರಶ್ನೆಗಳೂ ಭಾಳ ಮಜಾ ಇದ್ವು. ಒಂದೆರಡು ಸ್ಯಾಂಪಲ್ :

### True or False

| | |
|---|---|
| I think I would like the work of a building contractor | ಇವ್ರು ಅದನ್ನ ತೊಗೊಂಡು ಎನ್ ಮಾಡ್ತಿದ್ದಾರು ಅಂತೀನಿ!!! |
| A person who doesn't vote is not a good citizen | ಹೂಂ ಅಂದ್ರೂನು ತ್ರಾಸು, ಉಹೂಂ ಅಂದ್ರೂನು |

| | |
|---|---|
| | ತ್ರಾಸು. ಯಾಕಂದ್ರ, ನಾ ಸುಮಾರು 7–8 ವರ್ಷದಿಂದ ವೋಟ್ ಹಾಕಿಲ್ಲ!! |
| I liked Alice in Wonderland by Lewis Carroll. | ಇಕಿ ಯಾವಕಿನೋ ಯಾವನಿಗ್ಗೊತ್ತು!! |
| People often talk about me behind my back. | ಇದೇನೋ ಖರೆ ಇರಬೇಕು.. ಆದ್ರ ನನಗೇನು ಗೊತ್ತು!!! |

ಏನರ ಆಗ್ಲಿ, ಕತಿ ಬರಿಯಾಕ ಜಾಗನ ಇರಲಿಲ್ಲ. ಜಸ್ಟ್ ಟ್ರೂ ಆರ್ ಫ಼ಾಲ್ಸ್. ಹೆಂಗಾದ್ರೂ "ಸೂಚನೆ"''ಇತ್ತಲ (what ever you feel like!!) ಟ್ರೂ/ಫ಼ಾಲ್ಸ್/ಟ್ರೂ/ಫ಼ಾಲ್ಸ್ ಅಂತ ಬರಕೋಂತ ಹೋದೆ. ಇನ್ನೊಂದು ಫ಼ೈಲ್‌ನ್ಯಾಗ ಒಂದಿಪ್ಪತ್ತು ಚಿತ್ರ ಇದ್ವು.. "ಅವನ್ನೆಲ್ಲಾ ಒಮ್ಮೆ ನೋಡ್ರಿ.. ಅಮ್ಯಾಲ ಅವುಗಳ ಮ್ಯಾಲ ಕತಿ ಬರೀರಿ" ಅಂತಿತ್ತು. "ದೊಡ್ಡ ಕತೀನ ಆತಪಾ ಇದು"!!! ಮನಸಿಗೆ ಬಂದಂಗ ಒಂದು ಕತಿ ಬರದೆ!! ಆ ಪ್ರಶ್ನೆಗಳನ್ನ ಓದಕೋತ ಹೋದಂಗ ನಿಧಾನಕ ಗೊತ್ತಾಗಕತ್ತು.. ನನ್ನ “Psychology” ಟೆಸ್ಟ್ ಮಾಡಾಕತ್ಯಾರು ಇವರು ಅಂತ!!!


ದಿನ ಕಳದ್ವು.. ‘‘ಎಕ್ಸೆಲ್’’ ಶುರುವಾತು! ಮಾಮೂಲಿ ಟ್ರೈನಿಂಗ್ ಅಲ್ಲಾ ಅದು. ಇಂಡಿಯಾದಿಂದ ಪ್ರೊಫ಼ೆಶನಲ್ಸ್ ಬಂದಿದ್ರು. ನಮ್ಮ ಕಂಪನ್ಯಾಗ ಕೆಲಸ ಮಾಡೋರಲ್ಲ ಅವರು. ಎಕ್ಸೆಲ್ ನಡಸೋ ಪ್ರೊಫ಼ೆಶನಲ್ಸ್!! ಎಕ್ಸೆಲ್‌ಗೆ ಟ್ರೈನೀ ಆಗಿ ಬಂದಿದ್ದ ನಮ್ಮ ಕಂಪನಿಯ ಸುಮಾರು 30 ಮಂದಿಯ ಆನ್ಸರ್‌ಗಳನ್ನ ಸ್ಟಡಿ ಮಾಡಿಕೊಂಡು ಬಂದಿದ್ರು. "ಟ್ರೈನಿಂಗ್" ಹಿಂದಿನ ದಿನ ಒಬ್ಬೊಬ್ಬರನ್ನು ಕರೆದು, 1–1 (”One-on-one”) ಡಿಸ್ಕಸ್ ಮಾಡಿ, ಈ ಮನಷ್ಯಾ ಎಂಥಾವಾಂ ಅಂತ ಹೇಳತ್ತಿದ್ರು.. ಎಪ್ಪಾ!! ಇವರೇನು ಜ್ಯೋತಿಷ್‌ಗಾರ್ರೇ ಅನಕೊಂಡೆ!! ನನ್ನ ಬಗ್ಗೆ ಏನ್ ಹೇಳಿದ್ರು ಅಂತ ಕೇಳಬ್ಯಾಡ್ರಿ!! ಯಾಕಂದ್ರ ನಿಮಗೆಲ್ಲಾ ಗೊತ್ತ ಐತಿ!!! ಆದ್ರ ಅವರು ಹೇಳಿದ್ರಾಗ ಭಾಳಷ್ಟು ಪಾಯಿಂಟ್ಸ್ ಬರೋಬರಿ ಇದ್ವು, ನೆನಪಿಡ್ರಿ ತೀರಿತು!!

ಟ್ರೈನಿಂಗ್ ಭಾಳ ಮಜ಼ಾ ಇತ್ತು.. ಸಿನಿಮಾ ನೋಡೋದು, ನಡ ನಡಕ ಸಿನಿಮಾ ನಿಂದ್ರಿಸಿ, ಸಿನಿಮಾದ ಕ್ಯಾರಕ್ಟರ್‌ಗಳನ್ನ, ವಿಶ್ಲೇಷಣೆ ಮಾಡಿ ಡಿಸ್ಕಸ್ ಮಾಡೋದು. ಹಿಂಗ ಎರಡು ಸಿನಿಮಾ ನೋಡಿದ್ವಿ. ಸ್ಕಿಟ್ ಮಾಡಿದ್ವಿ. ಆಟ ಆಡಿದ್ವಿ.. ಸೊಂಪಾಗಿ ಊಟ ಮಾಡಿದ್ವಿ, ಒಟ್ಟ ಮಜಾ ಇತ್ತು. ಅದರಾಗ ಒಂದ್ ಟಾಪಿಕ್ ಅಂದ್ರ.. ಸ್ಪೇಸಸ್ (”Spaces”) ಅಂತ.. ಭಾಳ ಚೊಲೊ ಡೆವೆಲಪ್ ಆಯಿತು ಈ ಟಾಪಿಕ್.

ನಮ್ಮ ಸುತ್ತ ಮುತ್ತ ಯಾವ ಯಾವ ತರಹದ ಸಂಸ್ಥೆಗಳು ಇರುತ್ತವೆ ಎಂದು ವಿಚಾರ ಮಾಡಿದರೆ.. ಈ ಕೆಳಗಿನವುಗಳು ಕಲ್ಪನೆಗೆ ಬರಬಹುದು. 1) Family Owned, 2) Small Partnership/private company 3) Public Company 4) Mechanized Company

ಇದೇನು ಸಂಪೂರ್ಣವಾದ ಪಟ್ಟಿ ಅಲ್ಲ. ಆದರೆ ಇವನ್ನು ಬೇರೆ ಬೇರೆ ಕ್ಷೇತ್ರಗಳಾಗಿ ವಿಂಗಡಿಸಿದರೆ, ಈ ಕೆಳಗಿನ ಕೆಲವು ಸ್ಪೇಸ್‌ಗಳನ್ನಾಗಿ ಗುರುತಿಸಬಹುದು. 1) Family Space 2) Arena Space 3) Public Space 4) Machine Space


ಇವನ್ನೆಲ್ಲಾ ಬೇರೆ ಬೇರೆ ಕ್ವಾಡ್ರಂಟ್ ಒಳಗೆ ಹಾಕಿದರೆ, ಈ ಕೆಳಗಿನ ಚಿತ್ರದಲ್ಲಿರುವಂತೆ ಕಾಣತ್ತದೆ. ಮೇಲ್ನೋಟಕ್ಕೆ ಯಾವುದೇ ಸಂಘ/ಸಂಸ್ಥೆ ಪ್ರಾಥಮಿಕವಾಗಿ ಒಂದು ಕ್ವಾಡ್ರಂಟ್‌ನಲ್ಲಿರುವಂತೆ ಕಂಡರೂ, ಅದರ ಪರಿಧಿ ಒಂದೇ ಒಂದು ಕ್ವಾಡ್ರಂಟ್‌ಗೆ ಸೀಮಿತವಾಗಿರುವುದಿಲ್ಲ. ಬೇರೆ ಬೇರೆ ಕ್ವಾಡ್ರಂಟ್‌ಗಳ ಮಧ್ಯ ಒಂದು ನಿರಂತರವಾದ ಸೆಳೆತ ಇರುತ್ತದೆ.




ಇಷ್ಟು ಲೆಕ್ಚರ್ ಆದಮೇಲೆ ನಮಗ ಈ ಪ್ರತಿಯೊಂದು ಸ್ಪೇಸ್ ಬಗ್ಗೆ 4–5 ಗುಣ ಲಕ್ಷಣ ಬರಿಯಾಕ ಹೇಳಿದ್ರು. ಆಮ್ಯಾಲ ನಾಲ್ಕು ಗುಂಪು ಮಾಡಿ, ಪ್ರತಿ ಗುಂಪು ಒಂದೊಂದು ಮೂಕ ನಾಟಕ (Speechless skit) ಮಾಡಾಕ ಹೇಳಿದ್ರು. ಭಾಳ ಮಜಾ ಇತ್ತು. ಎಲ್ಲಾರೂ ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶಗಳನ್ನ ಚೆನ್ನಾಗಿ ನಾಟಕದ ಮೂಲಕ ಪ್ರಕಟ ಪಡಿಸಿದ್ರು.

ವಿಚಾರ ವಿಮರ್ಶೆ ಮುಂದುವರಿಯಿತು. ಈ ಪ್ರಕಟಪಡಿಸಿದ ಸ್ಪೇಸ್‌ಗಳು ಕೇವಲ ಸಂಘ ಸಂಸ್ಥೆಗಳಿಗೆ ಸೀಮಿತವಲ್ಲ. ಪ್ರತೀ ಮನುಷ್ಯನೂ ಕೂಡ ತನ್ನದೇ ಆದಂತಹ ಸ್ಪೇಸ್‌ಗಳ ಮಧ್ಯೆ ತೊಳಲಾಡುತ್ತಿರುತ್ತಾನೆ!! ವಿಮರ್ಶೆ ದಿಕ್ಕು ಬದಲಾಯಿಸಿತ್ತು. ಲಘುವಾಗಿ ಶುರುವಾಗಿದ್ದ ವಿಮರ್ಶೆ ಘನವಾಗತೊಡಗಿತ್ತು.

ಇದಾದ ಮ್ಯಾಲ ಮತ್ತ 1–1 ವಿಚಾರ ವಿಮರ್ಶೆ. ನಾನು ಯಾವ ಯಾವ ಸ್ಪೇಸ್‌ನಲ್ಲಿ ಅದೇನಿ. ಯಾವ ಸ್ಪೇಸ್‌ನಲ್ಲಿ ಸಕ್ರಿಯ /ನಿಷ್ಕ್ರಿಯ ಆಗೇನಿ ಎಂದು ಅವರೇ ನನಗ ಹೇಳಿದರು.. ಮಹಾ ಜ್ಯೋತಿಷಗಾರರೀ ಇವರು!!!!




ಆಳವಾಗಿ ವಿಮರ್ಶೆಮಾಡಿದಂತೆ, ಈ ಯಾವುದೇ ಒಂದು ಸ್ಪೇಸ್‌ನಲ್ಲಿ ಕೊರತೆ ಕಂಡರೂ, ಪರಿಪೂರ್ಣ ಸಫಲತೆ ದೊರಕದು ಎನ್ನುವ ವಿಷಯ ಗೋಚರವಾಗತೊಡಗಿತು. ಈ ಎಲ್ಲಾ ಸ್ಪೇಸ್‌ಗಳ ಮಧ್ಯೆ ಪ್ರಮಾಣಬದ್ಧವಾದ (ಸಾಮರಸ್ಯ) ಸೆಳತವಿದ್ದರೆ ಅದನ್ನು "ಎಕೋ ಸಿಸ್ಟಂ" ಎಂದು ಕರೆಯಬಹುದು. ಇದೇ ಪರಿಪೂರ್ಣ ಸಫಲತೆಯ ಗುಟ್ಟು. ಯಾವುದೇ ಸಂಸ್ಥೆ ಅಥವಾ ಮನುಷ್ಯ ನೂರಕ್ಕೆ ನೂರು "ಎಕೋ ಸಿಸ್ಟಂ" ಆಗಿರದೇ ಇರಬಹುದು. ಆದರೆ ಅದರೆಡೆಗೆ ಹೋಗಲು ಎಲ್ಲಾ ಸ್ಪೇಸ್‌ಗಳ ಮಧ್ಯೆ ಸಾಮರಸ್ಯ ಅವಶ್ಯಕ.

ಅಮ್ಯಾಲ *Twelve angry men* ಅನ್ನೊ ಸಿನಿಮಾ ನೋಡಿದ್ವಿ. ಅದರಾಗ 12 ಮಂದಿ, ಒಂದು ವಿವಾದದ ಬಗ್ಗೆ ಹೆಂಗ ಪ್ರತಿಕ್ರಿಯಿಸುತ್ತಾರ ಅನ್ನೋದರ ಬಗ್ಗೆ ವಿಮರ್ಶೆ. ನಡ ನಡಕ ಸಿನಿಮಾ ನಿಂದ್ರಿಸಿ, ಆ ಟಾಯಮ್‌ನ್ಯಾಗ ಯಾಂವ ಯಾವ ಸ್ಪೇಸ್‌ನ್ಯಾಗ ಅದಾನು, ಯಾಂವ "ಎಕೋ ಸಿಸ್ಟಂ" ಕಡಿಗೆ ಹೊಂಟಾನು, ಯಾಂವ ಪಬ್ಲಿಕ್ ಸ್ಪೇಸ್‌ನ್ಯಾಗ ಸಿಕ್ಕೊಂಡಾನು ಯಾಂವ ಅರೀನಾದಾಗ ಹೊಡದಾಡಾಕತ್ಯಾನು, ಹಿಂಗ ನಾನಾ ರೀತಿಯ ವಿಮರ್ಶೆ ಮಾಡಿದ್ವಿ. ಮೊದ್ಲಿಗೇ 1–1 ಡಿಸ್ಕಶನ್‌ನ್ಯಾಗ ಪ್ರತಿಯೊಬ್ಬರಿಗೂ ನಮ್ಮದು ಯಾವ ತರಹದ ವ್ಯಕ್ತಿತ್ವ ಐತಿ ಅಂತ, ಈ 12 ಮಂದಿಯಲ್ಲಿ ಒಬ್ರು ಅಥವಾ ಇಬ್ಬರನ್ನ ಉದಾಹರಣೆಯಾಗಿ ಕೊಟ್ಟು ಹೇಳಿದ್ರು. ಸಿನಿಮಾ ನೋಡುವಾಗ ನಮ್ಮನ್ನು ನಾವು ಪರಾಮರ್ಶೆ ಮಾಡಾಕ ಹೇಳಿದ್ರು!! ಒಂದೂವರಿ ತಾಸಿನ ಸಿನಿಮಾನ, ಸುಮಾರು ಮೂರು ತಾಸಿನ್ಯಾಗ ನೋಡಿ ಮುಗ್ಸಿದ್ವಿ

ಹಿಂಗ ದಿನಾಲು ಬ್ಯಾರೆ ಬ್ಯಾರೆ ವಿಮರ್ಶಾತ್ಮಕ ಆಟಗಳು ನಡದ್ವು. ದಿನಾ 9:00 ರಿಂದ 6:00 ತನ ಎಡಬಿಡದೇ ಟ್ರೈನಿಂಗ್. ಎಲ್ಲಾ ಮುಗಿಯುವುದರಲ್ಲಿ ತೆಲಿ ಗಿಂವ್ ಅಂತಿತ್ತು.. ತೆಲಿನೋವು ಹತ್ತಿ ಅಲ್ಲಾ.. ನಮ್ಮ ವ್ಯಕ್ತಿತ್ವಕ್ಕ ಅವರು ಬರೋಬ್ಬರಿ ಕನ್ನಡಿ ಹಿಡಿದು ವಿಮರ್ಶೆಗೆ ಒಳಪಡಿಸಿದ್ದಕ್ಕ!!!

## ಫ್ಲಾಸ್ಟ ಫಾರವರ್ಡ್ – ಮೃಣಾಲಿನಿ ಎಸ್. ಗುಡಿ, ಹರ್ನ್‌ಡಾನ್, ವಾಷಿಂಗ್ಟನ್ ಡಿ.ಸಿ. ಯು.ಎಸ್.ಎ



ಮೃಣಾಲಿನಿ ಅವರು ಶ್ರೀನಿವಾಸ ಗುಡಿ ಅವರ ಪತ್ನಿ ಮತ್ತು ಖ್ಯಾತ ಕನ್ನಡ ಸಾಹಿತಿ, ಕವಿ, ವಿಮರ್ಶಕ ಧಾರವಾಡದ ಶ್ರೀ ಸುಬ್ಬರಾವ ದೇಶಪಾಂಡೆ ಅವರ ಪುತ್ರಿ. ಪುತ್ರಿ ಮಹೀಯ ಆಟ-ಪಾಠ ಮತ್ತು ಉನಾನೆಟ್ ದಲ್ಲಿನ ಕೆಲಸ – ಇವೆಲ್ಲದರ ನಡುವೆಯೂ ಸಮಯ ಉಳಿಸಿಕೊಂಡು ಒಂದು ಒಳ್ಳೆಯ ಬರಹವನ್ನು ನಮಗಾಗಿ ನೀಡಿದ್ದಾರೆ. ಸಾಹಿತ್ಯದಲ್ಲಿ ಸಾಕಷ್ಟು ಆಸಕ್ತಿಯನ್ನು ಬೆಳೆಸಿಕೊಂಡಿರುವ ಮೃಣಾಲಿನಿ ಅವರು ಒಳ್ಳೆಯ ಗಾಯಕಿಯೂ ಹೌದು.

### *25 ವರ್ಷಗಳ ಹಿಂದೆ...*

ಅದೊಂದು ಊರು, ಇತ್ತ ಶಹರವೂ ಅಲ್ಲ, ಅತ್ತ ಹಳ್ಳಿಯೂ ಅಲ್ಲದ, ಶಾಂತವಾದ ಊರು. ಅಲ್ಲೊಂದು ದೊಡ್ಡ ಮನೆ. ಮನೆ ತುಂಬ ಜನ. ಅಂಗಳದಲ್ಲಿ ಒಂದು ನಾಯಿ – ಬೊಗಳಿದರೆ ಅರ್ಧ ಊರು ನಡುಗಬೇಕು. ಮನೆಗೆ ಒಂದು ಹಿತ್ತಿಲ. ಹುಣಸೆ, ತೆಂಗು, ಮಾವು, ಹಲಸು ಹೀಗೆ ಹಲವಾರು ದೊಡ್ಡ ಮರಗಳಿಂದ ತುಂಬಿದ, ತರಹೇವಾರಿ ಹೂವುಗಳು, ಅವುಗಳ ಮೇಲೆ ಹಾರಡುವ ಸಣ್ಣ-ಸಣ್ಣ, ಬಣ್ಣ-ಬಣ್ಣದ ಚಿಟ್ಟೆಗಳಿಂದ ತುಂಬಿದ ಹಿತ್ತಲು. ಪಡಸಾಲೆಯಲ್ಲಿ ಅಜ್ಜ ಇವತ್ತಿನ ಪೇಪರ್ ಓದುತಿದ್ದಾರೆ. ಅಡುಗೆ ಮನೆಯಲ್ಲಿ ಅಜ್ಜಿ ಮತ್ತು ಅಜ್ಜಿಯ ಸೊಸೆ ಅಡುಗೆ ಮಾಡುತಿದ್ದಾರೆ. ಅಜ್ಜಿಯ ಮಗಳು(ಪುಟ್ಟಿಯ ತಾಯಿ) ಪೂಜ ಸಾಮಗ್ರಿ ತೊಳೆಯುತಿದ್ದಾರೆ. ಐದು ವರ್ಷದ ಪುಟ್ಟಿ ಎಂದಿನಂತೆ ಹಿತ್ತಿಲಲ್ಲಿ ಮಣ್ಣಿನಿಂದ ಆಟದ ಪಾತ್ರೆಗಳನ್ನು ಮಾಡಿ ತನ್ನ ಗೆಳತಿಯರೊಂದಿಗೆ "ಅಡುಗೆ-ಆಟ" ಆಡುತಿದ್ದಾಳೆ.

ಅಜ್ಜಿ : ಪುಟ್ಟಿ, ಒಳಗ ಬಾ. ಬೆಳಗ್ಗೆಯಿಂದ ಮಣ್ಣಾಗ ಆಡಲಿಕತ್ತಿ, ಊಟದ ಹೊತ್ತಾತು.
ಪುಟ್ಟಿ : ಬಂದೆ ಅಜ್ಜಿ, ಐದ ನಿಮಿಷ...

ಹತ್ತಾರು ಕರೆಗಳು ಮತ್ತು ಒಂದು ಕಾಲು ಗಂಟೆ ಆದಮೆಲೆ ಪುಟ್ಟಿ ಅವಸರದಿಂದ ಬಂದು ಗಬ-ಗಬನೆ ಊಟ ಮಾಡಿ, ಮತ್ತೆ ಆಟಕ್ಕೆ ಒಡುವಳು!

ಶಕು (ಅಜ್ಜಿಗೆ) : ಅವ್ವಾ, ಈ ಪುಟ್ಟಿಗೆ ಸ್ವಲ್ಪ ಮನಿ ಕೆಲಸ ಕಲಸು. ಯಾವಗ ನೊಡಿದರೂ ಹಿತ್ತಲದಾಗ ಆಡತಿರತಾಳ, ನಾಳೆ ಕೊಟ್ಟ ಮನ್ಯಾಗ ನಮಗ ಕೆಟ್ಟ ಹೆಸರು ಬರತದ.
ಅಜ್ಜಿ : ಶಕು, ಇನ್ನು ಸಣ್ಣಕಿ ಇದ್ದಾಳ, ಸ್ವಲ್ಪ ಆಡಲಿ ಬಿಡು.
ಅಜ್ಜಿ: ಅದು ಹೋಗಲಿ, ಅಕಿ ಕೂದಲಕ್ಕ ಸ್ವಲ್ಪ ಎಣ್ಣಿ ಕಾಣಿಸು, ಆ ಫ್ರಾಕ್-ಗೀಕು ಬಿಟ್ಟು ಒಂದು ಲಕ್ಷಣಾಗಿ ಇರೊ ಅರಿವಿ ಹಾಕವಾ. ಆಮೇಲೆ ಅಕಿದು ಅದೇನೋ ಹಾಡಿನ ಕ್ಲಾಸ್ ಅಂದ್ಯಲ್ಲ, ಎಲ್ಲಿಗೆ ಬಂತು?
ಶಕು: ಹೊಗಲಿಕತ್ತಾಳ, ಚಲೊ ಹಾಡತಾಳ ಅಂತ ಅವರ ಟೀಚರ್ ಹೇಳ್ಯಾರ.

ಹೀಗೆ ಸಂಭಾಷಣೆ ಸಾಗುವುದು...ಅಜ್ಜಿ ಹಲವಾರು ಸಲಹೆ-ಸೂಚನೆ ಕೊಡುತ್ತ ಅಡುಗೆ ಮುಂದುವರೆಸುವರು. ಶಕು ತಮ್ಮ ಅಮ್ಮನ ಮಾತಿಗೆ ಹೂಗುಡುತ್ತ ಕೆಲಸ ಮುಂದುವರೆಸುವಳು.

ಸಂಜೆ. ಅಜ್ಜಿ ದೇವರ ಮುಂದೆ ದೀಪ ಹಚ್ಚಿ, ಕೈ ಮುಗಿಯುವ ಹೊತ್ತಿಗೆ ಪುಟ್ಟಿ ಮೈ-ಕೈ ಎಲ್ಲ ಮಣ್ಣು ಮಾಡಿಕೊಂಡು ಒಳಗೆ ಬರುವಳು. ಅಜ್ಜಿ ಅವಳಿಗೆ ಸ್ವಲ್ಪ ಪ್ರೀತಿಯಿಂದ ಗದ್ದರಿಸಿದಂತೆ ಮಾಡಿ, ಅವಳನ್ನು ಶುಭ್ರ ಮಾಡಿ, ಪುಟ್ಟಿಗೆ ಇಷ್ಟವಾದ "ಅರಳಿಟ್ಟು" ಕಲಿಸಿ ಕೊಡುವರು. ಆಮೇಲೆ, ಎಂದಿನಂತೆ ಪುಟ್ಟಿ ಅಜ್ಜನ ಹತ್ತಿರ ಐದರ ಮಗ್ಗಿ ಕಲಿಯುವಳು....ಅಜ್ಜಿ ತಮ್ಮ ಮನೆ ಸುತ್ತು-ಮುತ್ತಲಿನ ಜನರ ಜೊತೆ ಕುಳಿತು ದೇವರ ನಾಮ ಹೇಳುತ್ತ ಹತ್ತಿ ಬಸೆಯುವರು. ಅಜ್ಜಿಯ ಸೊಸೆ ಮತ್ತು ಶಕು ಅವರ ಜೊತೆ ಹಾಡುತ್ತ, ಇತ್ತ ಹರಟೆಯೂ ಹೊಡೆಯುತ್ತ ರಾತ್ರಿ ಅಡುಗೆಯ ತಯಾರಿ ಮಾಡುವರು....

ಅಂದು ರಾತ್ರಿ, ತುಂಬಿದ ಮನೆಯಲ್ಲಿ, ಸೋದರ ಮಾವಂದಿರು, ಚಿಕ್ಕಮ್ಮರ ಒಡನಾಟದಲಿ, ಅಜ್ಜ-ಅಜ್ಜಿಯರಿಂದ ಕತೆ ಹೇಳಿಸಿಕೊಳ್ಳುತ್ತ, ಅಲ್ಲಿಂದ ಇಲ್ಲಿ ಓಡುತ್ತ ತೊದಲು ಮಾತನಾಡುತ್ತ, ಎಲ್ಲರನು ನಗಿಸುತ್ತ, ಮಧ್ಯ-ರಾತ್ರಿ ಆದರೂ ಪುಟ್ಟಿ ಮಲಗಲು ತಯಾರಿಲ್ಲ. ಎಲ್ಲರ ಕಣ್ಮಣಿಯಾಗಿ, ಮೊದಲ ಮೊಮ್ಮಗುವಿಗೆ ಸಿಕ್ಕಿರುವ ಅಪೂರ್ವವಾದ ಪ್ರೀತಿಯ ಸವಿಯನ್ನು ನಿದ್ದೆಯಿಂದ ಹಾಳು ಮಾಡಿಕೊಳ್ಳಲು ಪುಟ್ಟಿ ತಯಾರಿಲ್ಲ.
ಶಕು(ಪುಟ್ಟಿಗೆ) :ಪುಟ್ಟಿ, ಎಲ್ಲಾರಿಗು ಸಾಕಗೇದ, ನಿದ್ದಿ ಬಂದದ, ನಡಿ ಇನ್ನ ಮಲಕೋಳೋಣ.
ಪುಟ್ಟಿ : ಊಹೂಂ, ನನಗ ಇನ್ನು ನಿದ್ದಿ ಬಂದಿಲ್ಲ, ನೀ ಬೇಕಾರ ಮಲಕೊ
ಶಕು : ಒಣಾ ಅಛ್ಛಾ ಭಾಳ ಆಗೇದ ನಿನಗ, ಮಲಕೋತಿಯೊ ಇಲ್ಲ ಒಂದು ಕಡಬು ಬೇಕೊ?
ಗದರಿಕೆಗೆ ಪುಟ್ಟಿ, ಹೊಯ್ಯ್ ಅಂತ ಅಳಲು ಶುರು ಮಾಡುವಳು.
(ರಮಿಸುವ ದನಿಯಲ್ಲಿ) ಅಜ್ಜಿ : ಪುಟ್ಟಿ ಅಳಬ್ಯಾಡಾ. ಏನು ಬೇಕು ಹೇಳು ನಿನಗ?
ಪುಟ್ಟಿ : ನನಗ ಕಡಬು ಬೇಕು, ಕಡಬು ಬೇಕು, ಅಂತ ಅಳುವ ದನಿಯ ತಾರಕಕ್ಕೇರಿಸುವಳು.
ಶಕು : ಸುಮ್ಮನ ಮಲಕೊ ಈಗ ರಾತ್ರಿಯಾಗೇದ, ಈಗ ಎಂತ ಕಡಬು ನಿನಗ?
ಬೆಳಿಗ್ಗೆಯಿಂದ ಕೆಲಸ ಮಾಡಿ ಸುಸ್ತಾಗಿದ್ದರೂ ಅಜ್ಜಿ : ಅಯ್ಯ, ಸುಮ್ಮನಿರು ನೀನು, ಕೂಸು ಕೇಳತದ, ಮಾಡಿಕೊಟ್ಟರಾತು ಅಂತ ಹೂರಣದ ಕಡಬು ಮಾಡುವ ಸಿದ್ಧತೆ ನಡೆಸಿದರು. ಅಜ್ಜಿ ಕಷ್ಟ-ಪಟ್ಟು ಮಾಡಿದ ಕಡಬನ್ನು, ಒಂದರ್ಧ ಮುಟ್ಟಿದ ಶಾಸ್ತ್ರ ಮಾಡಿ, ಪುಟ್ಟಿ ಮಲಗಿಬಿಡುವಳು.
ಸರಿ ತಿನ್ನದೆ ಮಲಗಿದ ಪುಟ್ಟಿ ಕಂಡು ಮರುಗಿದ ಅಜ್ಜಿ: ಅಯ್ಯೊ, ಕೂಸು ಆಶಾಪಟ್ಟು ತಿನ್ನಲೇ ಇಲ್ಲ ನೋಡ ಪಾಪ!

2 ತಿಂಗಳ ರಜೆ ಮುಗಿದು ಪುಟ್ಟಿ ತನ್ನ ಊರಿಗೆ ತಿರುಗಿ ಹೋಗುವ ಮುನ್ನ, ಅಜ್ಜಿ ಕಣ್ಣೀರು ಸೆರಗಿನ ತುದಿಯಿಂದ ಒರೆಸುತ್ತ ಹೇಳುವರು, "ಪುಟ್ಟಿ ಇದ್ದಷ್ಟು ದಿನಾ ಮನಿ ತುಂಬಿದಂಗ ಇತ್ತು, ಈಗ ಎಷ್ಟು ಭಣಾ-ಭಣಾ..."

### *ಫ಼ಾಸ್ಟ ಫ಼ಾರವರ್ಡ್ - 10 ವರ್ಷಗಳ ಬಳಿಕ :*

ಅಜ್ಜಿಗೆ ಸ್ವಲ್ಪ ವಯಸ್ಸಾಗಿದೆ. ಮೊದಲಿನಂತೆ ಸರ-ಸರನೆ ಕೆಲಸ ಸಾಗದು. ಅಜ್ಜ ತೀರ ಹಣ್ಣಾಗಿದ್ದಾರೆ. ನಾಯಿ ತನ್ನ ಸ್ಥಳ ಬಿಟ್ಟು ಸರಿಯಲಾರದಷ್ಟು ಹಣ್ಣಾಗಿದೆ. ಬೊಗಳಲು ಶಕ್ತಿ ಇಲ್ಲದೆ ಕುಂಯಿ-ಕುಂಯಿ ಎನ್ನುತ್ತ ಒಂದು ಮೂಲೆಯಲ್ಲಿ ಬಿದ್ದಿದೆ. ಪುಟ್ಟಿ ಈಗ 15 ವರ್ಷದ ಹುಡುಗಿ. ಎಸ್ ಎಸ್ ಎಲ್ ಸಿ ಪರೀಕ್ಷೆ ಮುಗಿಸಿ ಬಂದಿದ್ದಾಳೆ. ಇನ್ನೆರಡು ತಿಂಗಳಲ್ಲಿ ಕಾಲೇಜ್ ಮೆಟ್ಟಲು ಹತ್ತುವೆ ಅನ್ನುವ ಉತ್ಸಾಹದಲ್ಲಿದ್ದಾಳೆ. ಅಜ್ಜಿಗೆ ಮೊಮ್ಮಗಳು ಬಂದಿರುವ ಸಂಭ್ರಮ.

ಅಜ್ಜಿ : ಪುಟ್ಟಿ...
ಪುಟ್ಟಿ : ಅಜ್ಜಿ, ಪುಟ್ಟಿ ಅಂತೆಲ್ಲ ಕರೀಬ್ಯಾಡ. ನನ್ನ ಫ಼್ರೆಂಡ್ಸ್ ನಗತಾರ. ನನ್ನ ಹೆಸರು ಕರೀ...ದೇವಯಾನಿ ಅಂತ
ಅಜ್ಜಿ : ಹೋಗ, ನಿಮ್ಮಪ್ಪಗ ಬ್ಯಾರೆ ಹೆಸರು ಸಿಗಲಿಲ್ಲೇನು, ಎಂಥಾ ಅಪದ್ಧ ಹೆಸರು ಇಟ್ಟಾನ. ಅದನ್ನೇನು ಕರಿಯೋದ..
ಪುಟ್ಟಿ : ಒಟ್ಟ, ನನ್ನ ಪುಟ್ಟಿ ಅಂತ ಕರೀಬ್ಯಾಡ
ಅಜ್ಜಿ: ಆತು ತೊಗೋವಾ, ಅರಳಿಟ್ಟು ಕಲಿಸೇನಿ
ಪುಟ್ಟಿ (ಅರಳಿಟ್ಟು ತಿನ್ನುತ್ತ): ಅಜ್ಜಿ, ನೀನು ಎಷ್ಟು ಚಲೊ ಅರಳಿಟ್ಟು ಮಾಡತಿ. ಅಮ್ಮಗ ಹಿಂಗ ಬರಂಗಿಲ್ಲ. ನಿನ್ನ ಹಂಗ ಯಾರೂ ಅರಳಿಟ್ಟು ಮಾಡಂಗಿಲ್ಲ ನೊಡು
ಅಜ್ಜಿ: ಹೋಗ ಹುಚ್ಚಿ, ಅದರಗೇನು ಅದ ಮಹಾ, ಬ್ರಹ್ಮ ವಿದ್ಯಾ ..ಅಂದಂಗ ನಿನ್ನ ಹಾಡಿನ ಕ್ಲಾಸ್ ಹೆಂಗ ನಡದದ ಪುಟ್ಟಿ?
ಪುಟ್ಟಿ : ಹಾಡು ಬಿಟ್ಟೆ ಅಜ್ಜಿ, ಎಸ್.ಎಸ್.ಎಲ್.ಸಿಗೆ ಓದಬೇಕಿತ್ತಲ್ಲಾ...
ಅಜ್ಜಿ : ಎಂಥಾ ಕೆಲಸಾ ಮಾಡಿದ್ಯವ್ವಾ, ಹುಡುಗೀಗೆ ಒಂದು ನಾಲ್ಕು ಛಲೊ ಹಾಡು-ಹಸಿ ಬರಬೇಕು
ಪುಟ್ಟಿ : ಅಜ್ಜಿ, ಈಗಿನ ಕಾಲದಾಗ ಅವನೆಲ್ಲಾ ಯಾರು ಕೇಳತಾರ?
ಅಜ್ಜಿ : ನಮಗೇನು ಗೊತ್ತು ಬಿಡವಾ, ನಾವು ಹಳೇ ಕಾಲದವರು.

ಪುಟ್ಟಿ 1 ತಿಂಗಳು ಅಜ್ಜಿ ಮನೆಯಲ್ಲಿ ಇದ್ದು ತಿರುಗಿ ತನ್ನ ಊರಿಗೆ ಹೊಗುವಳು. ಅಜ್ಜಿ ದುಖ-ಹೆಮ್ಮೆ ಮಿಶ್ರಿತ ಧ್ವನಿಯಲ್ಲಿ ಅಜ್ಜನ ಮುಂದೆ ಹೇಳುವರು," ನಮ್ಮ ಪುಟ್ಟಿ ಎಷ್ಟು ಚಂದ ಆಗ್ಯಾಳ್ರಿ, ಎಷ್ಟು ತಿಳುವಳಿಕಿ. ಅಕಿ ಇರೊ ಅಷ್ಟು ದಿನ ಹೆಂಗ ಕಳೀತೋ ಗೊತ್ತ ಆಗಲಿಲ್ಲ....."

### *ಫ಼ಾಸ್ಟ ಫ಼ಾರವರ್ಡ್ – 8 ವರ್ಷದ ಬಳಿಕ:*

ಅಜ್ಜ ತೀರಿಕೊಂಡು ವರ್ಷಗಳಾಗಿವೆ. ನಾಯಿಯೂ ಅಜ್ಜನ ಕಾವಲು ಕಾಯಲು ಅವರ ಹಿಂದೆ ಹೊಗಿದೆ. ಅಜ್ಜಿ ಈಗ ಏಕಾಂಗಿ, ಆರೋಗ್ಯ ಕೆಟ್ಟಿದೆ. ಆದರೂ ನಗು-ನಗುತ್ತ ಎಲ್ಲರೊಂದಿಗೆ ಹರಟೆ ಹೊಡೆಯುತ್ತ, ಸೊಸೆಯರೊಂದಿಗೆ ಸಮಯ ಕಳೆಯುತ್ತಾರೆ. ಪುಟ್ಟಿಯ ಮದುವೆ. ಮದುವೆ ಮನೆಯ ಗದ್ದಲ ತಾಳುವ ಶಕ್ತಿ ಇಲ್ಲದಿದ್ದರೂ ಅಜ್ಜಿ ಸಂಭ್ರಮದಿಂದ ಪುಟ್ಟಿಯ ಮದುವೆಗೆ 1 ತಿಂಗಳು ಮುಂಚೆ ಬಂದಿರುವರು.

ಅಜ್ಜಿ : ಪುಟ್ಟಿ, ಈ ಸರ ಹಾಕಿಕೊಳ್ಳ, ನಮ್ಮ ಅವ್ವಂದು..
ಪುಟ್ಟಿ : ಅಜ್ಜಿ, ಅಷ್ಟು ಹಳೆ ಸ್ಟೈಲ್ ಯಾರು ಹಾಕ್ಕೋತಾರ?
ಅಜ್ಜಿ : ನಮಗೇನು ಗೊತ್ತಾಗಬೇಕವಾ, ನಾವು ಹಳೇ ಕಾಲದವರು. ಆತು, ನಿನಗ ಹೆಂಗ ಬೇಕೋ ಹಂಗ ಇದನ್ನ ಮುರಿಸಿ ಮಾಡಿಸಿಕೋ. ಅಂದಂಗ, ನಿನಗಂತ ಅರಳಿಟ್ಟು ತಂದೇನಿ, ನಿನ್ನ ಗಂಡನ ಮನಿಗೆ ತೊಗೊಂಡು ಹೋಗು...
ಪುಟ್ಟಿ : ಥ್ಯಾಂಕ್ಸ್ ಅಜ್ಜಿ!
ಅಜ್ಜಿ : ಹೋಗ, ನನಗ್ಯಕ ಥ್ಯಾಂಕ್ಸ್-ಪೀಂಕ್ಸ್ ಹೇಳತಿ..

ಪುಟ್ಟಿ ಮದುವೆ ಮಾಡಿಕೊಂಡು ಗಂಡನ ಮನೆಗೆ ಹೋಗುವಳು. ಅಜ್ಜಿ ಅವಳ ಕಾರಿನ ಹಿಂದೆ ಹೋಗುತ್ತ ಅಳುವರು ಮತ್ತು ತಮ್ಮ ಮಗಳಿಗೆ ಸಮಾಧಾನ ಮಾಡುವರು, "ಅಳಬ್ಯಾಡ ಶಕು, ಹೆಣ್ಣು ಮಕ್ಕಳು ಅಂದರೆ ಹಿಂಗನವ, ಹಿಂಗ ಒಂದಲ್ಲ ಒಂದು ದಿನ ಗಂಡನ ಮನಿಗೆ ಹೋಗವರ, ನೀನೂ ಹಿಂಗ ಹೋಗಿದ್ದ್ಯವಾ ..."

### *ಫ಼ಾಸ್ಟ ಫ಼ಾರವರ್ಡ್ – 10 ವರ್ಷದ ಬಳಿಕ:*

ದೇವಯಾನಿ ಈಗ ತನ್ನ ಗಂಡ ಸೌರಭನೊಂದಿಗೆ ಆಸ್ಟ್ರೇಲಿಯದಲ್ಲಿ ನೆಲೆಸಿದ್ದಾಳೆ. ಅವಳಿಗೀಗ ಕಂಪ್ಯುಟರಿನ ಉದ್ಯೋಗ. ಬೆಳೆಸಿಕೊಂಡ ಹತ್ತಾರು ಹವ್ಯಾಸ, ವೀಕೇಂಡ ಟ್ರೆಕ್ಕಿಂಗ್/ಕ್ಯಾಂಪಿಂಗ್, ಕನ್ನಡ ಸಂಘ, ಜಿಮ್, ಕಿಟ್ಟಿ ಕ್ಲಬ್, ಮಗಳು ಸಮುದ್ಯತಾಳ ಹೋಮ್ ವರ್ಕ್, ಇತ್ಯಾದಿಗಳ ನಡುವೆ ಒಮ್ಮೊಮ್ಮೆ ಉಸಿರು ಬಿಡಲೂ ಆಗದಷ್ಟು ಕೆಲಸ, ಒಟ್ಟಿನಲ್ಲಿ ಬಿಡುವಿಲ್ಲದ ಓಟದ ಬದುಕು.

ಒಂದು ಮುಂಜಾನೆ. ಸೌರಭ ತನ್ನ ಬೊಜ್ಜು ಕರಗಿಸಲು ಜಿಮ್ಮಿಗೆ ಹೋಗಿದ್ದಾನೆ. ದೇವಯಾನಿ (ಗಡಿಬಿಡಿಯಿಂದ ಸೀರಿಯಲ್ ಮತ್ತು ಹಾಲು ಕಲೆಸುತ್ತ ತನ್ನ 4 ವರ್ಷದ ಮಗಳಿಗೆ) :
*Samu, it's time for school, have your breakfast*
*Samu : I don't want it mommy, I want uttappa*
*Devyani : Samu, I am late for work. I have to pick up dry cleaning on my way. Eat this now, I will make uttappas over the weekend*
ಸಮು (ಗಂಟು ಮುಖ ಹಾಕಿಕೊಂಡು ) ಸೀರಿಯಲ್ ನೋಡುವಳು.

ಫೋನ್ ಬಾರಿಸಿದ ಸದ್ದು.
ದೇವಯಾನಿ ಫೋನ್ ಎತ್ತಿ, "ದೇವಯಾನಿ ಹಿಯರ್"
ಅತ್ತ ಕಡೆಯಿಂದ ಒಂದು ಕ್ಷಣ ಮೌನ, ಆಮೇಲೆ ಒಂದು ಕ್ಷೀಣ ಧ್ವನಿ, "ಪುಟ್ಟಿ, ನೀನ ಎನ?"
ದೇವಯಾನಿ "*wrong number*" ಅನ್ನಬೇಕೆಂದವಳು ಒಂದು ಕ್ಷಣ ತಡೆದು, "ಯಾರು?"

ಅತ್ತ ಕಡೆಯಿಂದ,"ದೇವಯಾನಿ ಬೇಕಾಗಿತ್ತು"
ದೇವಯಾನಿ : "ಅಜ್ಜಿ?!!!"
ಅಜ್ಜಿ : "ಪುಟ್ಟಿ, ಹೆಂಗಿದ್ದಿಯವ್ವಾ? ನಿನ್ನ ನೆನಪು ಭಾಳ ಆಗಿತ್ತವಾ.ಅದಕ್ಕ ನಿಮ್ಮ ಮಾಮಾಗ ಫೋನ್ ಹಚ್ಚಿ ಕೊಡಪ ಅಂದೆ.."
ದೇವಯಾನಿ : ಅಜ್ಜಿ, ನಾನು ವಾಪಸ್ ಫೋನ್ ಮಾಡತೇನಿ, ನೀನು ಫೋನ್ ಇಡು
ಅಜ್ಜಿ : ಇರಲಿ, ಮಾತಾಡು
ದೇವಯಾನಿ : ಹೆಂಗಿದ್ದಿ ಅಜ್ಜಿ?
ಅಜ್ಜಿ : ಅರಾಮಿದ್ದೇನವ ಪುಟ್ಟಿ, ಸಮು ಹೆಂಗಿದ್ದಾಳ?
ದೇವಯಾನಿ : ಭಾಳ ತಿರಕಚ್ಚ ಆಗೇದ ಅಜ್ಜಿ ಅಕಿಗೆ, ನನ್ನ ಮಾತು ಒಟ್ಟ ಕೇಳಂಗಿಲ್ಲ
ಅಜ್ಜಿ : ಮಕ್ಕಳು ಹಂಗನವಾ. ನೊಡು ಪುಟ್ಟಿ, ಅಕಿನ್ನ ಬೈಯ್ಯಬ್ಯಾಡ ನೀನು
ದೇವಯಾನಿ : ಇಲ್ಲ ಅಜ್ಜಿ, ಆದರ ಭಾಳ ಹಟಾ ಮಾಡತಾಳ
ಅಜ್ಜಿ : ಪುಟ್ಟಿ..
ದೇವಯಾನಿ : ಹೇಳು ಅಜ್ಜಿ
ಅಜ್ಜಿ : ಯಾಕೋ ನಿನ್ನ ನೆನಪು ಭಾಳ ಆಗೇದವಾ, ಒಂದು ಸರ್ತಿ ಬಂದು ಹೋಗು
ದೇವಯಾನಿ : ಹೆಂಗ ಬರಲಿ ಅಜ್ಜಿ? ಈಗ ಸಮುನ್ನ ಸ್ಕೂಲ್ ಹಾಕಬೇಕು, ಸೌರಭಗ ಮತ್ತ ನನಗ ರಜಾ ಇಲ್ಲ
ಅಜ್ಜಿ : ಇರಲಿ ಬಿಡು. ನಿಮ್ಮದು ಮೊದಲು ನೊಡ್ರಿ. ಪುಟ್ಟಿ, ನಿನಗಂತ ಅರಳಿಟ್ಟು ಮಾಡೇನಿ, ಯಾರರ ಬರುವವರು ಇದ್ದರ ಹೇಳವಾ...

ದೇವಯಾನಿಗೆ ಮಾತೆ ಹೊರಡದು, ಕಣ್ಣಲ್ಲಿ ನೀರು. ಕೈಯಲ್ಲಿ ಫೋನ್ ಹಿಡಿದು ಸಮುನ್ನ ನೊಡುವಳು. ಸಮು ಇನ್ನು ಗಂಟು ಮುಖ ಹಾಕಿಕೊಂಡು ಸೀರಿಯಲ್ ತಿನ್ನುವ ಪ್ರಯತ್ನದಲ್ಲಿದಾಳೆ.

ದೇವಯಾನಿ : ಅಜ್ಜಿ, ಹೇಳತೇನಿ ತೊಗೋ
ಅಜ್ಜಿ : ಆತು, ನಾನು ಫೋನ್ ಇಡತೇನವಾ....

ಫೋನ್ ಇಟ್ಟ ತಕ್ಷಣ ದೇವಯಾನಿಯ ಮನಸು, ಹೇಳದೆ-ಕೇಳದೆ ವೇಗದಿಂದ ಫಾಸ್ಟ್-ಫಾರ್ವರ್ಡ್ ಅಗುತ್ತಿರುವ ಜೀವನದ ರೀಲನ್ನು ಸ್ವಲ್ಪ ಸ್ವಲ್ಪ ರಿವೈಂಡ್ ಮಾಡತೊಡಗಿತು. ಯಾವುದೇ ಆಧುನಿಕ ಅನುಕೂಲತೆ-ಸೌಲಭ್ಯಗಳೂ ಇಲ್ಲದ ಅಜ್ಜಿಯ ಮನೆ ಥಟ್ಟನೆ ನೆನಪಿಗೆ ಬಂತು. ಸುಣ್ಣ ಬಣ್ಣ ಕಾಣದ ಮನೆಯನ್ನು ಇನ್ನಷ್ಟು ಅಂದಗೊಳಿಸಲೆಂದೇ, ಭೋರೆಂದು ಸುರಿವ ಮಳೆ, ಆ ಮಳೆಗೆ ಅಲ್ಲಲ್ಲಿ ಸೋರುವ ಮನೆ, ಸೋರಿದಾಗ ನೀರು ಹರಿಯದಿರಲೆಂದು ಇಟ್ಟ ಕೊಡ, ಬಕೆಟ್ಟುಗಳು, ಸೋರಿಕೆಯ ಹಸಿ ಕಟ್ಟಿಗೆಯ ಉರಿಹಚ್ಚಿ, ಹೊಗೆ ಎಬ್ಬಿಸಿಕೊಂಡು, ಕೆಮ್ಮುತ್ತ, ಊದುಗೊಳವೆಯಿಂದ ಊದುತ್ತ ಮಾಡುವ ಅಜ್ಜಿಯ ಕಸರತ್ತು, ಆ ಹೊಗೆಗೆ ಕಪ್ಪಾಗಿ ಮಸಿ ಹಿಡಿದ ಕಟ್ಟಿಗೆ/ಇದ್ದಿಲು ಒಲೆಗಳು, ಪಕ್ಕದಲ್ಲಿಯೆ ಇರುವ ರುಬ್ಬಲು ಇರುವ ಕಲ್ಲಿನ ಕರಿ ಒಳ್ಳು, ಅದರ ಸಂಗಾತಿಗಳಾದ ಭಾರವಾದ ರುಬ್ಬು-ಗುಂಡು, ಹಾರೆ, ಕುಡಿವ ನೀರಿನ ತಾಮ್ರದ ದೊಡ್ಡ ಹಂಡೆಗಳು ಮತ್ತು ಆ ಹಂಡೆಗಳ ತುಂಬಲು ಬೆಳಿಗ್ಗೆಯಿಂದಲೇ ಪಕ್ಕದ ಓಣಿಯ ಬಾವಿಯ ಸೇದುವ, ಸೋದರ ಮಾವಂದಿರು ಮತ್ತು ಚಿಕ್ಕಮ್ಮಂದಿರು! ಬಡತನವಿದ್ದರೂ ವಿದ್ಯೆ-ದಾನ, ಅನ್ನ-ದಾನಕ್ಕೆ ಇಟ್ಟುಕೊಂಡ ವಾರಾನ್ನದ ಹುಡುಗರು, ಸಾಲದ್ದಕ್ಕೆ ಯಾವಗಲೂ ಇರುವ ಅತಿಥಿಗಳು, ಎಲ್ಲರಿಗು ಭಕ್ಕರಿ ಬಡಿಯುವಾಗ, ಹಬ್ಬ-ಹರಿದಿನಗಳಲ್ಲಿ ನಾನಾ ವಿಧದ ಪಂಚ-ಪಕ್ವಾನ್ನ ಮಾಡುವದರಲ್ಲಿ ಅಜ್ಜಿ ಎಂದೂ ಬೇಸರಗೊಂಡಿದ್ದೇ ಇಲ್ಲ, ಕೆಲಸ ಜಾಸ್ತಿಯಾಯಿತು ಅಂತ ಗೊಣಗಿದ್ದೇ ಇಲ್ಲ, ಮುಖ ಸಿಂಡರಿಸಿದ್ದಿಲ್ಲ. ಸದಾ ಕೆಲಸ ಮಾಡುತ್ತ, ದಣಿವಾದಾಗ ದೇವರ ನಾಮ-ಸ್ಮರಣೆ ಮಾಡುತ್ತ, 'ಅನ್ನ-ಪೂರ್ಣೇಶ್ವರಿ'ಯಾಗಿ ಜನರಿಗೆ ಉಣ-ಬಡಿಸುವದರಲ್ಲಿಯೆ ಸಂತೃಪ್ತಿ ಕಾಣುತ್ತಿದ್ದ ಅಜ್ಜಿ, ಅಜ್ಜ ಕೊನೆಕಾಲದಲ್ಲಿ ಅಸ್ಥಮಾ ಕಾಯಿಲೆಯಿಂದ ನರಳುತ್ತಿರುವಾಗ ಹಗಲಿರುಳು ಅಜ್ಜಿ ಮಾಡಿದ ಸೇವೆ, ಮನೆಯಲ್ಲಿ ಕೆಲಸ-ಕಾರ್ಪಣ್ಯಗಳನ್ನ ಬೇಸರಿಸಿದೆ ಮಾಡಿ, ಅಕ್ಕ-ಪಕ್ಕದವರಿಗೂ ಸಹಾಯವಾಗುತ್ತಿದ್ದ ಸೋದರಮಾವಂದಿರು, ಚಿಕ್ಕಮ್ಮಂದಿರು, ಇಷ್ಟಾಗಿಯು, ಮನೆಯಲ್ಲಿ ಯಾವಗಲು ಹರಟೆ, ನಗೆ-ಚಾಟಿಗೆ, ನಗೆಯ ಹೊಳೆ!

ಮತ್ತೆ ದೇವಯಾನಿಯ ಮನಸು ಇಂದಿನ ಬದುಕಿನತ್ತ ಇಣುಕಿತು. ಇಂದು ಎಲ್ಲ ಆಧುನಿಕ ಸೌಲಭ್ಯಗಳನ್ನ ಹೊಂದಿರುವ ಮನೆ, ಏರ್-ಕಂಡಿಷನರ್, ವಾಶರ್-ಡ್ರಾಯರ್, ಡಿಶ್-ವಾಶರ್, ಗ್ಯಾಸ್ ಸ್ಟೋವ್, ಮೈಕ್ರೊ-ವೇವ್, ರೆಫ್ರಿಜರೇಟರ್, ಮಿಕ್ಸಿ-ಗ್ರೈಂಡರ್, ಸಾಲದ್ದಕ್ಕೆ ಕಷ್ಟ ಆಗಬರದೆಂದೇ ಬಂದಿರುವ ಇನಸ್ಟಂಟ್-ಮಿಕ್ಸ್ ಗಳು. ಆದರೂ ಈ ಆರಾಮಗಳನ್ನ ಅನುಭವಿಸುವ ವ್ಯವಧಾನವಾಗಲಿ, ಸಂಯಮವಾಗಲಿ ಇಲ್ಲ. ನೀರು ತುಂಬುವದಿಲ್ಲ, ವಿದ್ಯುತ್ ಹೋಗುವದಿಲ್ಲ, ಬಸ್ಸಿಗೆ ಕಾಯುವ ಪ್ರಮೇಯವಿಲ್ಲ ಇತ್ಯಾದಿಗಳಿಂದ ಬದುಕು ಎಷ್ಟೇ ಸರಳಗೊಂಡಿದ್ದರೂ, ಏನೊ ಬದುಕಿನಲ್ಲಿ ಒಂದು ಬಿಗುಮಾನ, ಯಾಕೋ ಒಂದು ಟೆನ್ಷನ್, ನಗುವನಂತೂ ಹುಡುಕಿಕೊಂಡು ಹೋಗಬೇಕು! ಕೊರತೆಗಳಿದ್ದರೂ ಕೊರತೆಗಳಿಲ್ಲದಂತೆ ಬದುಕುತ್ತಿದ್ದ ಅಜ್ಜ-ಅಜ್ಜಿಯ ದಿನಗಳನ್ನ, ಕೊರತೆಗಳಿಲ್ಲದಿದ್ದರೂ ತೀವ್ರ ಕೊರತೆಯಿರುವಂತೆ ಬದುಕುತ್ತಿರುವ ಇಂದಿನ ದಿನಗಳನ್ನ ತುಲನೆಮಾಡಿ, ದೇವಯಾನಿಗೆ ಪಿಚ್ಚೆನಿಸಿತು. ಯಾವುದನು 'ಹಳೆಯದೆಂದು', 'ಓಲ್ಡ್-ಫ್ಯಾಶನ್' ಎಂದು ತಾತ್ಸಾರ ಮಾಡುತ್ತಿದ್ದಳೊ, ಅದರಿಂದ ಕಲಿಯಲು ಇರುವ ವಿಷಯಗಳೆಷ್ಟು ಅಂತ ಅಚ್ಚರಿ ಪಡುತ್ತ, ಅದರ ಬಗ್ಗೆ ಗೌರವಾದರಗಳನ್ನ ಹೆಚ್ಚಿಸಿಕೊಂಡು, ಸಮುನ್ನ ಹತ್ತಿರ ಬಂದು, "samu, you don't have to eat that. Let me make uttapas for you.." ಅನ್ನುತ್ತ ಸೀರಿಯಲ್ ತೆಗೆದುಕೊಂಡು ಹೋಗುವಳು.

ಫೋನ್ ಎತ್ತಿ ದೇವಯಾನಿ, , "Chris, I will be late to work. " ಅನ್ನುತ್ತ ಫೋನ್ ಇಡುವಳು.

ಸಮುವಿನ ಮುಖದ ಮೇಲೆ ದೊಡ್ಡ ಮುಗುಳ್ನಗೆ...

(ಪ್ರೇರಣೆ - ನಮ್ಮ ಅಜ್ಜಿ (ತಾಯಿಯ ತಾಯಿ) ಮತ್ತು ಆಪ್ತ ಸ್ನೇಹಿತೆ ರಾಜಿ ಮೋಹನ್ )

**ಪ್ರಾಣ**

ಅಂದು ಹೇಳುತ್ತಿದ್ದ
ನೀನೇ ನನ್ನ ಪ್ರಾಣ
ಇಂದು ಹೇಳುತ್ತಾನೆ
ಯಾಕೇ, ತಿಂತೀಯಾ ನನ್ನ ಪ್ರಾಣ ??!!
- ಶುಭಶ್ರೀ. ಜಿ. ಬೆಳಂದೂರ

## ಸಂಕ್ರಾಂತಿ ಹಬ್ಬದ ಖಾದ್ಯಗಳು. – ಶ್ರೀಮತಿ. ಮೀನಾಕ್ಷಿ ಅನಿಲ್ ಅಂಗಡಿ, ಬೆಂಗಳೂರು.



ಟಿಪಿಬಳಗದ ಸಕ್ರಿಯ ಸದಸ್ಯ ಪ್ರಕಾಶ್ ರಾಜಗೋಳಿಯವರ ಸಹೋದರಿ ಮೀನಾಕ್ಷಿ ಇತಿಹಾಸದಲ್ಲಿ ಎಮ್.ಎ ಪದವಿಧರೆಯಾಗಿದ್ದು, ಇತ್ತೀಚೆಗಷ್ಟೆ ಅಂದರೆ 2005 ಜುಲೈ 10 ರಂದು ಗ್ರಹಸ್ಥಾಶ್ರಮ ಪ್ರವೇಶಿಸಿದ್ದಾರೆ. ಇವರ ಹವ್ಯಾಸಗಳಲ್ಲಿ ಮುಖ್ಯವಾದವು ಎಂದರೆ ಪುಸ್ತಕ ಓದುವದು, ಟಿವಿ ನೋಡುವದು ಹಾಗೂ ಹೊಸರುಚಿ.

ನಿಮ್ಮ "ನಿರಂತರ" ಪತ್ರಿಕೆಗೆ ನಾನು ಉತ್ತರ ಕರ್ನಾಟಕದ ಕೆಲವು ಅಡುಗೆ ವಿಧಾನಗಳನ್ನು ಕಳಿಸಿರುತ್ತೇನೆ. ಇವು ಉತ್ತರ ಕರ್ನಾಟಕದವರಿಗೇನೂ ಹೊಸತಲ್ಲ. ಆದರೆ ಸಂಕ್ರಾಂತಿ ಹಬ್ಬ ಹತ್ತಿರ ಬರುತ್ತಿರುವದರಿಂದ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಕಳಿಸಿದ್ದೇನೆ.

### 1) ಬದನೆಕಾಯಿ ಎಣಗಾಯಿ (ಮುಳಗಾಯಿ ಪಲ್ಯ)

**ಬೇಕಾಗುವ ಸಾಮಾನುಗಳು:**

ಸಣ್ಣ ಗಾತ್ರದ ಬದನೆಕಾಯಿಗಳು 1/2 ಕಿಲೋ
1 ಸಣ್ಣ ಬಟ್ಟಲು ಒಣ ಕೊಬ್ಬರಿ ತುರಿ.
2 ಉಳ್ಳಾಗಡ್ಡಿ
3 ಚಹಾ ಚಮಚ ಕೆಂಪು ಖಾರದ ಪುಡಿ
2–3 ಚಹಾ ಚಮಚ ಹುರಿದ ಶೇಂಗಾ ಪುಡಿ
1/2 ಚಹಾ ಚಮಚ ಜೀರಿಗೆ
1 ಚಹಾ ಚಮಚ ಉಪ್ಪು
ಸ್ವಲ್ಪ ಹುಣಸೆ ರಸ
ಸ್ವಲ್ಪ ಬೆಲ್ಲ
1 ಚಿಟಿಕೆ ಅರಿಷಿಣ ಪುಡಿ
ಎಣ್ಣೆ
ಸ್ವಲ್ಪ ಹೆಚ್ಚಿದ ಕೊತ್ತಂಬರಿ ಸೊಪ್ಪು
ಸ್ವಲ್ಪ ಹೆಚ್ಚಿದ ಕರಿಬೇವು ಸೊಪ್ಪು
ಸ್ವಲ್ಪ ಬೆಳ್ಳುಳ್ಳಿ

**ತಯಾರಿಸುವ ವಿಧಾನ :**

ಮೊದಲು ಜೀರಿಗೆ ಮತ್ತು ಒಣ ಕೊಬ್ಬರಿ ತುರಿ ಹುರಿದುಕೊಳ್ಳಿ. ನಂತರ ಹೆಚ್ಚಿದ ಉಳ್ಳಾಗಡ್ಡಿ, ಕೊತ್ತಂಬರಿ, ಕರಿಬೇವು ಮತ್ತು ಬೆಳ್ಳುಳ್ಳಿ ಎಣ್ಣೆಯಲ್ಲಿ ಕರಿಯಬೇಕು. ನಂತರ ಹುರಿದ ಜೀರಿಗೆ ಮತ್ತು ಕೊಬ್ಬರಿತುರಿ ಮಿಕ್ಸರ್‌ನಲ್ಲಿ ಪೌಡರ್ ಮಾಡಿ ಮತ್ತು ಕರಿದಿಟ್ಟ ಉಳ್ಳಾಗಡ್ಡಿ ಇತ್ಯಾದಿ ಪೇಸ್ಟ್ ಮಾಡಿ ಒಂದು ಪಾತ್ರೆಯಲ್ಲಿ ಇವನ್ನೆಲ್ಲ ಹಾಕಿ ಅದಕ್ಕೆ ಶೇಂಗಾ ಪುಡಿ, ಖಾರದ ಪುಡಿ, ಉಪ್ಪು, ಅರಿಷಿಣ, ಹುಣಸೆ ರಸ, ಬೆಲ್ಲ ಬೆರೆಸಿ 1 ಚಹಾ ಚಮಚದಷ್ಟು ಎಣ್ಣೆ ಹಾಕಿ ಚೆನ್ನಾಗಿ ಕಲಸಿ ಮಿಶ್ರಣ ರೆಡಿ ಮಾಡಿಟ್ಟುಕೊಳ್ಳಿ.
ಬದನೆಕಾಯಿಗಳನ್ನು 4 ಭಾಗ ಮಾಡಿ ಹೆಚ್ಚಬೇಕು (ಇವು ಬಿಡಿ ಬಿಡಿ ಆಗದಂತೆ ಎಚ್ಚರ ವಹಿಸಿ) ನೀರಿನಲ್ಲಿ ಹಾಕಿ ತೊಳೆದು ಪ್ರತಿಯೊಂದು ಬದನೆಕಾಯಿಗೆ ಮಧ್ಯ ರೆಡಿ ಮಾಡಿದ ಮಿಶ್ರಣ ತುಂಬಿ ಎಣ್ಣೆಯಲ್ಲಿ ಸ್ವಲ್ಪ ಹುರಿದು ಕುದಿಸಲು ಇಡಿ. ಸ್ವಲ್ಪ ಬೆಂದ ಮೇಲೆ ಆರಿಸಿ ಸರ್ವ್ ಮಾಡಿ. ಇದು ರೊಟ್ಟಿ, ಮೊಸರು ಮತ್ತು ಚಟ್ನಿ ಜೊತೆ ತಿನ್ನಲು ಸರಿ.

## 2) ಉದುರು ಬೇಳೆ:

**ಬೇಕಾಗುವ ಸಾಮಾನುಗಳು:**

ತೊಗರಿ ಬೇಳೆ 1 ಲೋಟ

2 ಉಳ್ಳಾಗಡ್ಡಿ

7 ರಿಂದ 8 ಹಸಿಮೆಣಸಿನಕಾಯಿ

1/2 ಚಹಾ ಚಮಚ ಜೀರಿಗೆ

1 ಚಹಾ ಚಮಚ ಉಪ್ಪು

ಸ್ವಲ್ಪ ಹುಣಸೆ ರಸ

1 ಚಿಟಿಕೆ ಅರಿಷಿಣ ಪುಡಿ

ಎಣ್ಣೆ

ಸ್ವಲ್ಪ ಹೆಚ್ಚಿದ ಕೊತ್ತಂಬರಿ ಸೊಪ್ಪು

ಸ್ವಲ್ಪ ಹೆಚ್ಚಿದ ಕರಿಬೇವು ಸೊಪ್ಪು

ಸ್ವಲ್ಪ ಬೆಳ್ಳುಳ್ಳಿ

ಸ್ವಲ್ಪ ಸಕ್ಕರೆ

**ತಯಾರಿಸುವ ವಿಧಾನ :**

ಮೊದಲು ತೊಗರಿ ಬೇಳೆಯನ್ನು ಉದುರಾಗಿ ಬೇಯಿಸಿ ಆರಿಸಿಟ್ಟುಕೊಳ್ಳಿ. ನಂತರ ಎಣ್ಣೆ ಕಾಯಲು ಇಟ್ಟು ಇದಕ್ಕೆ ಹೆಚ್ಚಿದ ಉಳ್ಳಾಗಡ್ಡಿ ಮತ್ತು ಕರಿಬೇವು ಹಾಕಿ ಫ್ರಾಯ್ ಮಾಡಿ ನಂತರ ಮೊದಲೆ ಮಾಡಿಟ್ಟುಕೊಂಡ ಚಿಲ್ಲಿ ಪೇಸ್ಟ್ (ಮೆಣಸಿನಕಾಯಿ, ಕೊತ್ತಂಬರಿ, ಬೆಳ್ಳುಳ್ಳಿ, ಜೀರಿಗೆ, ಉಪ್ಪು ಹಾಕಿ ಮಿಕ್ಸರಿನಲ್ಲಿ ಪೇಸ್ಟ್ ಮಾಡಿಟ್ಟುಕೊಳ್ಳಬೇಕು) ಹಾಕಿ ಕಲಸಿರಿ. ನಂತರ ರುಚಿಗೆ ತಕ್ಕಷ್ಟು ಉಪ್ಪು ಅರಿಶಿಣ ಸಕ್ಕರೆ ಹಾಕಿ ಸ್ವಲ್ಪ ಹುಣಸೆ ರಸ ಹಾಕಿ ಕುದಿಸಿರಿ. ಬೇಯಿಸಿದ ಬೇಳೆ ಹಾಕಿ ಕಲಸಿ ಸರ್ವ್ ಮಾಡಿ. ಇದನ್ನು ರೊಟ್ಟಿ ಇಲ್ಲವೆ ಚಪಾತಿಯ ಜೊತೆ ತಿನ್ನಬಹುದು.

## 3) ಬದನೆಕಾಯಿ ಭರತ

ಬೇಕಾಗುವ ಸಾಮಾನುಗಳು:

1 ದೊಡ್ಡ ಗಾತ್ರದ ಬದನೆಕಾಯಿ

1 ಹೆಚ್ಚಿದ ಉಳ್ಳಾಗಡ್ಡಿ

2-3 ಹಸಿ ಮೆಣಸಿನಕಾಯಿ

ಸ್ವಲ್ಪ ಉಪ್ಪು

ಸ್ವಲ್ಪ ಸಕ್ಕರೆ

1 ಚಿಟಿಕೆ ಅರಿಷಿಣ ಪುಡಿ

ಎಣ್ಣೆ

ಸ್ವಲ್ಪ ಹೆಚ್ಚಿದ ಕೊತ್ತಂಬರಿ ಸೊಪ್ಪು

ಸ್ವಲ್ಪ ಹೆಚ್ಚಿದ ಕರಿಬೇವು ಸೊಪ್ಪು

ಸ್ವಲ್ಪ ಬೆಳ್ಳುಳ್ಳಿ

ಲಿಂಬೆ ರಸ

**ತಯಾರಿಸುವ ವಿಧಾನ :**

ಬದನೆಕಾಯಿಯನ್ನು ಕೆಂಡದ ಮೇಲೆ ಸುಡಬೇಕು. ಕೆಂಡ ಇಲ್ಲದಿದ್ದಲ್ಲಿ ಗ್ಯಾಸ್ ಬರ್ನರ್ ಉಪಯೋಗಿಸಿ. ನಂತರ ಅದರ ಸಿಪ್ಪೆ ತೆಗೆದು ಅದರ ತಿರುಳನ್ನು ಮಾತ್ರ ತೆಗೆದಿಡಿ. ನಂತರ ಮಿಕ್ಸರಿನ ಸಣ್ಣ ಜಾರಿನಲ್ಲಿ ಉಳ್ಳಾಗಡ್ಡಿ, ಮೆಣಸಿನಕಾಯಿ, ಕೊತ್ತಂಬರಿ, ಕರಿಬೇವು, ಜೀರಿಗೆ, ಉಪ್ಪು ಸೇರಿಸಿ ಪೇಸ್ಟ್ ಮಾಡಿ ನಂತರ ಇದಕ್ಕೆ ಬದನೆಕಾಯಿ ತಿರುಳನ್ನು ಸೇರಿಸಿ 1 ಚಿಟಿಕೆ ಸಕ್ಕರೆ, ಲಿಂಬೆ ರಸ ಸೇರಿಸಿ ರುಬ್ಬಿಕೊಂಡು ತೆಗೆದಿಡಿ. ಇದು ಬಿಸಿ ರೊಟ್ಟಿ, ತುಪ್ಪದ ಜೊತೆ ತಿನ್ನಲು ಸ್ವಾದಿಷ್ಟವಾಗಿರುತ್ತದೆ.

## 4) ಜುನಕದ ವಡೆ

**ಬೇಕಾಗುವ ಸಾಮಾನುಗಳು:**

1 ಲೋಟ ಜುನಕದ ಹಿಟ್ಟು ಅಥವ 1 ಲೋಟ ಕಡಲೆ ಹಿಟ್ಟು
1 ಸಣ್ಣಗೆ ಹೆಚ್ಚಿದ ಉಳ್ಳಾಗಡ್ಡಿ
ಹಸಿ ಮೆಣಸಿನಕಾಯಿ ಪೇಸ್ಟ್
ಉಪ್ಪು
1 ಚಿಟಿಕೆ ಅರಿಷಿಣ ಪುಡಿ
ಎಣ್ಣೆ
ಸ್ವಲ್ಪ ಬೆಲ್ಲ ಅಥವ ಸಕ್ಕರೆ
ಸ್ವಲ್ಪ ಹೆಚ್ಚಿದ ಕೊತ್ತಂಬರಿ ಸೊಪ್ಪು
ಸ್ವಲ್ಪ ಹೆಚ್ಚಿದ ಕರಿಬೇವು ಸೊಪ್ಪು
ಸ್ವಲ್ಪ ಹುಣಸೆ ರಸ
ಎಳ್ಳು ಅಥವ ಕಸಕಸಿ
ನೀರು

**ತಯಾರಿಸುವ ವಿಧಾನ :**

ಮೊದಲು ಎಣ್ಣೆ ಕರಿಯಲು ಇಟ್ಟು ಅದರಲ್ಲಿ ಉಳ್ಳಾಗಡ್ಡಿ, ಕರಿಬೇವು ಹಾಕಿ ಕರಿದು ನಂತರ ಹಸಿಮೆಣಸಿನಕಾಯಿ ಪೇಸ್ಟ್ ಹಾಕಿ ಫ್ರ್ರಾಯ್ ಮಾಡಿ ಇದಕ್ಕೆ ರುಚಿಗೆ ತಕ್ಕಷ್ಟು ಉಪ್ಪು, ಅರಿಷಿಣ, ಹುಣಸೆರಸ, ಬೆಲ್ಲ ಅಥವಾ ಸಕ್ಕರೆ ಸೇರಿಸಿ 3/4 ಲೋಟ ನೀರು ಹಾಕಿ ಕುದಿಸಿ. ನಂತರ ಕುದಿಯುತ್ತಿರುವಾಗಲೆ ಜುನಕದಹಿಟ್ಟು ಅಥವಾ ಕಡಲೆ ಹಿಟ್ಟು ಹಾಕಿ ಗಂಟಾಗದಂತೆ ಚೆನ್ನಾಗಿ ಕಲಸಿ. ಇದು ಬಹಳ ಗಟ್ಟಿ ಅಥವಾ ಮೆದು ಆಗದಂತೆ ಮಧ್ಯಮವಾಗಿರಬೇಕು. ನಂತರ ಆರಿಸಿ ಹೋಳಿಗೆ ಮಣೆ ಅಥವಾ ಒಂದು ಸ್ಟೀಲ್ ತಟ್ಟೆಗೆ ಎಣ್ಣೆ ಸವರಿ ಇದನ್ನು ಸಮಾನಾಂತರವಾಗಿ ಹರಡಬೇಕು. ಇದರ ಮೇಲೆ ಎಳ್ಳು/ಕಸಕಸಿ ಉದುರಿಸಿ. ಬೇಕಾದ ಆಕಾರಕ್ಕೆ ಕತ್ತರಿಸಿ ಸರ್ವ್ ಮಾಡಿ.

## 5) ಬಾಣ/ ಮೊಸರನ್ನ

ಬೇಕಾಗುವ ಸಾಮಾನುಗಳು:

1 ಲೋಟ ದಪ್ಪ ಅಕ್ಕಿ
1 ಲೋಟ ಮೊಸರು
1 ಉಳ್ಳಾಗಡ್ಡಿ
5–6 ಎಸಳು ಬೆಳ್ಳುಳ್ಳಿ
ಉಪ್ಪು
ಶುಂಠಿ ಮತ್ತು ಕರಿಮೆಣಸಿನ ಪೌಡರು
ನೀರು

**ತಯಾರಿಸುವ ವಿಧಾನ :**

ಮೊದಲು ಬಹಳ ಮೆತ್ತಗೆ ದಪ್ಪ ಅಕ್ಕಿಯ ಅನ್ನವನ್ನು ಮಾಡಿ ಆರಿಸಿ ಒಂದು ಪಾತ್ರೆಗೆ ಹರಡಿ. ಇದಕ್ಕೆ ಮೊಸರು ಸೇರಿಸಿ ಕಲಸಿ ಬೇಕಿದ್ದರೆ ಮತ್ತೆ ಸ್ವಲ್ಪ ಉಪ್ಪು ಹಾಕಿ ಸಣ್ಣಗೆ ಹೆಚ್ಚಿದ ಉಳ್ಳಾಗಡ್ಡಿ ಮತ್ತು ಬೆಳ್ಳುಳ್ಳಿ ಸೇರಿಸಿ. ಇದರ ಮೇಲೆ ಶುಂಠಿ ಮತ್ತು ಕರಿಮೆಣಸು ಕಾಳಿನ ಪೌಡರ್ (1/2 ಚಮಚ) ಉದುರಿಸಿ ಚೆನ್ನಾಗಿ ಕಲಸಿ ಉಂಡೆ ಕಟ್ಟಿ ಅಥವಾ ಹಾಗೆಯೇ ಸರ್ವ್ ಮಾಡಿ.

## 6) ಶೇಂಗಾ ಹೋಳಿಗೆ

**ಬೇಕಾಗುವ ಸಾಮಾನುಗಳು:**

ಹುರಿದು ಸಿಪ್ಪೆ ತೆಗೆದ ಶೇಂಗಾ ಪೌಡರು 1 ಪಾವು.

ಬೆಲ್ಲ 1 ಪಾವು

2 ಚಹದ ಚಮಚ ಹುರಿದ ಗಸಗಸೆ ಪೌಡರ್

1 ಚಹದ ಚಮಚ ಯಾಲಕ್ಕಿ ಪೌಡರು

ಕನಕ: 1/4 ಕಿಲೊ ಮೈದಾ ಹಿಟ್ಟು, ಅಕ್ಕಿ ಹಿಟ್ಟು 1 ಸೌಟು, 2 ಚಹದ ಚಮಚ ಕಾಯಿಸಿದ ಎಣ್ಣೆ, ಉಪ್ಪು, ಅರಿಷಿಣ ಪುಡಿ, ತುಪ್ಪ ಸೇರಿಸಿ ತಯಾರಿಸಿದ್ದು.

**ತಯಾರಿಸುವ ವಿಧಾನ :**

ಮೊದಲು ಮೈದಾ ಹಿಟ್ಟಿಗೆ ಅಕ್ಕಿ ಹಿಟ್ಟು, ಅರಿಷಿಣ, ಎಣ್ಣೆ, ಉಪ್ಪು ಹಾಕಿ ನಾದಿ ಕನಕ ಮಾಡಿಟ್ಟುಕೊಳ್ಳಿ.
ಹೂರಣಕ್ಕೆ ಶೇಂಗಾ ಪೌಡರ್, ತುರಿದ ಬೆಲ್ಲ, ಗಸಗಸೆ ಪೌಡರ್, ಯಾಲಕ್ಕಿ ಪೌಡರ್ ಇವುಗಳನ್ನು ಹಾಕಿ ಚೆನ್ನಾಗಿ ಕಲಸಿ ಹೂರಣ ಸಿದ್ಧ ಪಡಿಸಿಕೊಳ್ಳಿ, ನಂತರ ಕನಕ ತೆಗೆದುಕೊಂಡು ಅದರಲ್ಲಿ ಹೂರಣ ತುಂಬಿ ಅಕ್ಕಿ ಹಿಟ್ಟು ಹಚ್ಚಿ ಲಟ್ಟಿಸಬೇಕು. ತವೆಗೆ ಹಾಕಿ ಬೇಯಿಸಿ ತುಪ್ಪದ ಜೊತೆ ತಿನ್ನಲು ಕೊಡಿ.


– ೦ –

## ಶ್ರೀನಿವಾಸ ಗುಡಿ.

**ಅಂದು**



**ಇಂದು**



# ಬಾರ್ ಬಾರ್ ಎಲ್ನೋಡಿ ಬಾರ್

– ರಚನೆ: ಶ್ರೀ ಗಿರೀಶ ಪಿ. ಮೆಟಗುಡ್ಡಮಠ, ಬೆಂಗಳೂರು.

ಧಾಟಿ: **'ನನ್ನ ಪ್ರೀತಿಯ ಹುಡುಗಿ'** ಚಿತ್ರದಲ್ಲಿ ಖ್ಯಾತ ಗಾಯಕಿ ಶ್ರೀಮತಿ॥ ಬಿ. ಜಯಶ್ರೀ ಅವರು ಹಾಡಿರುವ **'ಕಾರ್ ಕಾರ್'** ಧಾಟಿಯಲ್ಲಿ.



ಪ್ರೀತಿಯಿಂದ 'ಸ್ವಾಮಿ' ಎಂದು ಕರೆಯಲ್ಪಡುವ ನಮ್ಮ ಸ್ನೇಹಿತ ಬಿ.ಇ.ಯಿಂದ ಸಹಪಾಠಿ ಗಿರೀಶ, ಕನ್ನಡ ಭಾಷೆ, ನೆಲ, ನುಡಿಗಾಗಿ ಯಾವಾಗಲೂ ಮುಂದು. ಹುಬ್ಬಳ್ಳಿಯಲ್ಲಿ ತಮ್ಮ ಸಂಪೂರ್ಣ ವಿದ್ಯಾಭ್ಯಾಸ ಮುಗಿಸಿರುವ ಸ್ವಾಮಿಗೆ ಬರವಣಿಗೆಯಲ್ಲಿ ಒಳ್ಳೆಯ ಹಿಡಿತವಿದೆ. ಆದರೆ ಬರೆಯಲು ಏಕೊ ಸಮಯವಿಲ್ಲ..! ಇವರ ವಿಶೇಷ ಅಂದರೆ ಯಾವುದೇ ಒಂದು ವಿಷಯದ ಬಗ್ಗೆ ಇವರಿಗಿರುವ ಇರುವ ಆಳವಾದ ಜ್ಞಾನ ಹಾಗೂ ಅದಕ್ಕೆ ಪೂರಕವಾದ ಅಂಕಿ–ಅಂಶಗಳು ಮತ್ತು ಅದನ್ನು ಬರಹದ ರೂಪದಲ್ಲಿ ಹೊರಹೊಮ್ಮಿಸುವ ಸಾಮರ್ಥ್ಯ.

ಬಾರ್ ಬಾರ್ ಬಾರ್ ಬಾರ್ ಎಲ್ನೋಡಿ ಬಾರ್
ಬಾರ್ ಬಾರ್ ಬಾರ್ ಬಾರ್ ಎಲ್ನೋಡಿ ಬಾರ್॥***॥

ಬೆಂಗಳೂರ್ ಹುಡುಗಿ : ಇವಿನಿಂಗ್ ಡ್ರೈವು ಮಾಡಿಕೊಂಡು,
ಪಾರ್ಟಿ ಅಂತ ಹೇಳಿಕೊಂಡು,
ಬಿಜನೆಸ್ ಅಂತ ಗುಂಡು ಹಾಕ್ತಾರೋ...,

ಹುಬ್ಬಳ್ಳಿ ಹುಡುಗ : ನಮ್ಮೂರಲ್ಲಿ ಹಂಗೇನಿಲ್ಲ
ಬ್ರಾಂಡಿ, ರಮ್ಮು, ಜಿನ್ನು, ವಿಸ್ಕಿ
ಏನೇ ಇರಲಿ ಕುಡಕೊಂಡ್ ಹೋಗ್ತಾರೇ....

ಬೆಂಗಳೂರ್ ಹುಡುಗಿ : ಸೊಷಿಯಲ್ ಸ್ಟೇಟಸ್ ಅಂದುಕೊಂಡು,
ನಾಲ್ಕು ಪಟ್ಟು ದುಡ್ಡು ಕೊಟ್ಟು,
ರಾತ್ರಿ ಇಡೀ ಡಾನ್ಸು ಮಾಡ್ತಾರೋ,

ಹುಬ್ಬಳ್ಳಿ ಹುಡುಗ : ನಮ್ಮೂರಲ್ಲಿ ಹಂಗೇನಿಲ್ಲ
ಬಾರಲ್ಲ ಜಾಗ ಸಾಕಾಗೊಲ್ಲ,
ಕೌಂಟರಲ್ಲೇ ಕುಡುದು ಸ್ನಾೃಕ್ಸು ತಿಂತಾರೆ ॥***॥॥1॥

ಬೆಂಗಳೂರ್ ಹುಡುಗಿ : ಬಾರ್ ಬಾರ್ ಬಾರ್ ಬಾರ್ ಎಲ್ನೋಡಿ ಬಾರ್
ಬಾರ್ ಬಾರ್ ಬಾರ್ ಬಾರ್ ಎಲ್ನೋಡಿ ಬಾರ್
ಬಾರಿಂದೆ ಕಾರ್ಬಾರು .. ಬಾರಿಂದೆ ದರ್ಬಾರು
ಊರಿನ ತುಂಬ ಬರಿಯ ಬಾರಗಳೋ

ಹುಬ್ಬಳ್ಳಿ ಹುಡುಗ : ನಮ್ಮೂರ ಕಥೆ ಗೊತ್ತಾ?
ಗೋವಾ ಒರಿಜಿನಲ್ ಮಾಲೆ ಇದ್ದರೂ,
ಸರ್ಕಾರದ್ದೇ ಗುಂಡು ಇದ್ದರೂ,
ಕಮರಿಪೇಟೆ ಕಂಟ್ರಿ ಕುಡಿದು ಹಾಯಾಗಿರ್ತಾರೆ ॥2॥

ಬೆಂಗಳೂರ್ ಹುಡುಗಿ : ಬಾರ್ ಬಾರ್ ಬಾರ್ ಬಾರ್ ಎಲ್ನೋಡಿ ಬಾರ್
ಬಾರ್ ಬಾರ್ ಬಾರ್ ಬಾರ್ ಎಲ್ನೋಡಿ ಬಾರ್
ಬಾರಿಗೆ ಹೊಡೆದಾಟ ಬಾರಿಗೆ ಬಡಿದಾಟ
ಬಾರೆ ಇಲ್ಲಿ ದೈವ ಕಾಣಿರೋ

ಹುಬ್ಬಳ್ಳಿ ಹುಡುಗ : ನಮ್ಮ ಕಡೆ ಏನು ಅಂತಾರೆ ಗೊತ್ತಾ?
ಬಾರಲ್ಲಿ ಕುಡಿದ್ರೆ ತುಟ್ಟಿಯಾಗುತ್ತೆ,
ಒರಿಜಿನಲ್ ಕುಡುದ್ರೆ ನಿಶೆಯಾಗೊಲ್ಲ,
ಲೊಕಲ್ ಡಿ–ಮಾಲ್ ಕುಡುದ್ರೆ ಮಾತ್ರ ನಿದ್ದೆ ಮಾಡ್ತಾರೆ ॥3॥

ಬೆಂಗಳೂರ್ ಹುಡುಗಿ : ಬಾರ್ ಬಾರ್ ಬಾರ್ ಬಾರ್ ಎಲ್ನೋಡಿ ಬಾರ್
ಬಾರ್ ಬಾರ್ ಬಾರ್ ಬಾರ್ ಎಲ್ನೋಡಿ ಬಾರ್
ಬಾರೆ ನಿನ್ನ ತಾಯಿ, ಬಾರೆ ನಿನ್ನ ತಂದೆ
ಬಾರೆ ಇಲ್ಲಿ ಲೈಫು ಕಾಣಿರೋ....

ಹುಬ್ಬಳ್ಳಿ ಹುಡುಗ : ಬಾರಿಗಿಂತ ಗುಂಡು ಮುಖ್ಯ,
ಗುಂಡಿಗಿಂತ ನಿಶೆಯು ಮುಖ್ಯ
ಅನ್ನೊ ನೀತಿ ನಮ್ಮ ಊರಲ್ಲಿ ॥4॥

– ೦ –

**ಅರುಣ ಯಾದವಾಡ.**

**ಅಂದು** **ಇಂದು**





## ನನ್ನ ಕನ್ಯಾನ್ವೇಷಣೆಯ ಪ್ರಸಂಗಗಳು – ರಾಜು. ಹಿರೇಗೌಡರ, ಬೆಂಗಳೂರು.



ನಮ್ಮ ನೆಚ್ಚಿನ ಮಿತ್ರ 'ಜೇಮ್ಸ್ ಬಾಂಡ್' ರಾಜು ಹಿರೇಗೌಡರ ಬಿ.ವಿ.ಬಿಗಾಗಿ , ಬಿವಿಬಿ ಮಿತ್ರರಿಗಾಗಿ ಯಾವಾಗಲೂ ಮಿಡಿಯುವ ಒಬ್ಬ ಸಹೃದಯಿ ಸ್ನೇಹಿತ. ಪ್ರಸ್ತುತ ಐಟಿ ರಂಗದಲ್ಲಿ 'ಟೆಸ್ಟಿಂಗ್' ಕ್ಷೇತ್ರದಲ್ಲಿ ನೈಪ್ಯಣ್ಯತೆಯನ್ನು ಸಾಧಿಸಿರುವ ಇವರು , ತಮ್ಮ ವಿವಾಹ ಪೂರ್ವ ದಿನಗಳ ಕೆಲವು ವಿನೋದ ಪ್ರಸಂಗಗಳನ್ನು ಹಂಚಿಕೊಂಡಿದ್ದಾರೆ.

**ಒ**ಮ್ಮೆ ನಾನು ಕಮಡೊಳ್ಳಿಗೆ ಕನ್ಯಾ ನೋಡಾಕ್ಕಂತ ಹೋಗಿದ್ದೆ. ಕನ್ಯಾದ ಮನಿಯವರು ನನ್ನ ಇಂಟ್‌ರ್‌ವ್ಯೂ ಮಾಡಾಕ್ಕಂತ ಬೆಂಗಳೂರಿನಲ್ಲಿ ಎಚ್‌ಎಎಲ್‌ನಲ್ಲಿ ಕೆಲಸ ಮಾಡಿ ರಿಟೈರ್ ಆದ ಒಬ್ಬ ಮನುಷ್ಯಾನ್ನ ಕರಿಸಿದ್ದರು. ಹಂಗ ಮೊದಲು ನನ್ನ ಪರಿಚಯ ಮಾಡಿಕೊಟ್ಟ ಮೇಲೆ ನಮ್ಮ ಮಾತು ಕತೆ ಹೀಗೆ ಮುಂದುವರಿದಿತ್ತು.

| | |
|---|---|
| ಬೆಂಗಳೂರ್ ಸ್ಪೆಷಲಿಸ್ಟ್ | : ಸರ್, ನೀವು ಯಾವ ಫ್ಯಾಕ್ಟರಿ ಒಳಗ ಕೆಲಸ ಮಾಡತಿರಿ? |
| ನಾನು | : ರೆಲ್–ಕ್ಯೂ ಸಾಫ್ಟ್‌ವೇರ್ ಅಂತರಿ. |
| ಬೆಂಗಳೂರ್ ಸ್ಪೆಷಲಿಸ್ಟ್ | : ಮತ್ತ ಈಗ ಎಷ್ಟು ವರ್ಷ ಆತ್ರಿ ಅಲ್ಲಿ ಕೆಲಸ ಮಾಡಕ ಹತ್ತ?? |
| ನಾನು | : ಒಂದುವರಿ ವರ್ಷ ಸರ್.. |
| ಬೆಂಗಳೂರ್ ಸ್ಪೆಷಲಿಸ್ಟ್ | : ಮತ್ತ ಪಗಾರ ಎಷ್ಟು ಕೊಡತಾರ್ರಿ ನಿಮಗ?? |
| ನಾನು | : ಹದಿನಾಲ್ಕು ಸಾವಿರ್ ರೂಪಾಯಿರಿ ಸರ್. |
| ಬೆಂಗಳೂರ್ ಸ್ಪೆಷಲಿಸ್ | : ಅದೇನ್ ವರ್ಷದ ಪಗಾರ್ ಏನ್ರಿ, ಏನ್ ಮೂರ ತಿಂಗಳಿಗೊಮ್ಮೆನೊ ಇಲ್ಲಾ ಆರ ತಿಂಗಳಿಗೊಮ್ಮೆನೊ?? |
| ನಾನು | : ಇಲ್ಲರಿ ಇದು ಒಂದ ತಿಂಗಳ ಪಗಾರ್ರಿ..! |

ನನ್ನ ಉತ್ತರ ಕೇಳಿ ಅವರು ಅಲ್ಲೇ ತಬ್ಬಿಬ್ಬು..!

– ೦–

ಇನ್ನೊಮ್ಮೆ ನಾನು ಬೇರೊಂದು ಕನ್ಯಾ ನೋಡಾಕ ಭದ್ರಾವತಿಗೆ ಹೋಗಿದ್ದೆ. ಆ ಕನ್ಯಾ ನನಗ ಮತ್ತು ನಮ್ಮ ಮನಿಯವರಿಗೆಲ್ಲಾ ಭಾಳ ಮನಸ್ಸಿಗೆ ಬಂದಿತ್ತು. ಹುಡುಗಿ ಅಪ್ಪಾ ದೊಡ್ಡ ಮನುಷ್ಯಾ..ಅವಾ ಒಂದು ಸ್ಕೂಲ್ ಸಹಾ ನಡೆಸುತ್ತಿದ್ದ, ಆದರ ಅವನಿಗೆ ಅದು ಹೇಗೊ ಏನೋ ನನಗೆ ಬ್ರೋಂಕೈಟಿಸ್ ಪ್ರಾಬ್ಲಮ್ ಇದ್ದದ್ದು ಗೊತ್ತ ಆಗಿತ್ತು. ಆದ್ರ ನನಗ ಅವನಿಗೆ ಗೊತ್ತ ಐತಿ ಅಂತಾ ಗೊತ್ತ ಇರಲಿಲ್ಲ. ಅವ್ರು ನನ್ನ ಟೆಸ್ಟ್ ಮಾಡಾಕ ಅಂತಾ ಒಂದ ಸಲಾ ಬೆಂಗಳೂರಾಗ ಒಂದ ಹೊಟೆಲ್‌ಗೆ ಬಾ ಅಂತಾ ಹೇಳಿದರು. ಬೇಕಂತಲೇ ಅವತ್ತ ಬೋಂಡಾ, ವಡಾ ಆರ್ಡರ್ ಮಾಡ್ಯಾರ. (ಎಣ್ಣೆಯಲ್ಲಿ ಕರಿದಿದ್ದ ಪದಾರ್ಥಗಳನ್ನು ತಿಂದರ ಬ್ರೋಂಕೈಟಿಸ್ ಇದ್ದವರಿಗೆ ಪ್ರಾಬ್ಲಮ್ ಆಗತೈತಿ ಅಂತಾ ಹಂಗ ಮಾಡಿದಾರ) ಆವತ್ತ ನನ್ನ ಹೊಟ್ಟೆ ಹಸಿದಿದ್ದಿಲ್ಲ. ಮತ್ತ ಬ್ಯಾರೆ ಮಂದಿ ಮುಂದ ಹೆಂಗ ತಿನಬೇಕು ಅಂತಾ ನಾನು ಒಲ್ಲೆ ಅಂದೆ. (ಆದ್ರ ಖರೇನ ತಿನ್ನಾಕ ನನಗ ಮನಸ್ಸು ಇತ್ತು.) ನಾನು ಇಲ್ಲಿ ಬೆಂಗಳೂರಾಗ ತಿನ್ನಲಿಲ್ಲ ಅಂತ ಹೇಳಿ ಮತ್ತೊಮ್ಮೆ ಟೆಸ್ಟ್ ಮಾಡಾಕ ನನಗ ಭದ್ರಾವತಿಗೆ ಬರಾಕ ಹೇಳಿದರು. ನಾನೂ ಒಮ್ಮೆ ಫಿಕ್ಸ್ ಆಗುಕಿಂತ ಮೊದಲು ಒಂದ ಸಲಾ ಈ ಹುಡಗೀನ್ನ ಮಾತಾಡಸೋಣ ತಡಿ ಅಂತ ಅಂದುಕೊಂಡು ಹೂಂ ಅಂದೆ. ಒಂದ ಶನಿವಾರದ ದಿನ ಭದ್ರಾವತಿಗೆ ಹೋದೆ. ಹುಡುಗಿ ಮನ್ಯಾಗ ಬರೀ ಎಣ್ಣೆಯಲ್ಲಿ ಕರದಿದ್ದ ಊಟ. ಹೋಳಗಿ, ಶಂಡಗಿ, ಹಪ್ಪಳ ಇತ್ಯಾದಿ....ಮಾಡಿದ್ರು. ನಾನು ಊಟ ಮಾಡಿದೆ. ಹುಡುಗಿ ಅಪ್ಪಾ ನನ್ನನ್ನು ನೊಡಾಕ ಹತ್ತಿದ್ದಾ..!

ನನಗ ಏನರೆ ಆಗತ್ಯೆತೇನು ಅಂತ. ಆದರ ನನಗ ಏನೂ ಆಗದೆ ಇದ್ದದ್ದು ನೋಡಿ ಅವಾ ಅಲ್ಲೇ ಬೆಸ್ತು ಬಿದ್ದಾ..!

ಆಮ್ಯಾಲ ಹುಡುಗಿ ಮಾತಾಡ್ಸಿ ನನ್ನ ಬಗ್ಗೆ ಎಲ್ಲ ಹೇಳಿದೆ, ನಾ ಹಿಂಗ ಹಂಗ ಅಂತ. ಹುಡ್ಗಿಗೆ ಅವಳ ಒಪೀನಿಯನ್ ಕೇಳಿದೆ ಮ್ಯಾರೇಜ್ ಬಗ್ಗೆ. ಅವಳು ಹೂಂ ಅಂದ್ಲು. ನನಗ ಯಾಕ ಡೌಟ್ ಬಂತು. ಅದಕ ನನ್ನ ಮೊಬೈಲ್ ನಂಬರ್ ಕೊಟ್ಟು, ಏನಾರ ಇದ್ರ ಫ್ಹೋನ್ ಮಾಡು ಅಂತ ಹೇಳಿ ಬಂದೆ.

ಎರಡ ದಿವಸ ಆದ ಮ್ಯಾಲೆ ಹುಡುಗಿ ಕಡೆಯಿಂದ ಫ್ಹೋನ್ ಬಂತು. "ಏನಂದ್ರ, ನೀವ ಇಷ್ಟೆಲ್ಲ ಫ್ರಾಂಕ್ ಆಗಿ ಹೇಳಿದ್ದಕ್ಕ ನನ್ನೂ ನನ್ನ ಬಗ್ಗೆ ಫ್ರಾಂಕ್ ಆಗಿ ಹೇಳಬೇಕು ಅಂತ ಐತೆ" ಅಂದ್ಲು. ನಾ ಓಕೆ ಹೇಳ್ರಿ ಅಂದೆ. ಆವಾಗ ಅವ್ಳು "ನಾ ಒಂದ ಹುಡುಗನ್ನ ಲವ್ ಮಾಡಿದ್ದೆರಿ" ಅಂದ್ಳು. ನಾ ಹೇಳ್ದೆ " ಹೌದ..ನಿಮ್ಮ ಲವ್ ಕಂಟಿನ್ಯೂ ಆಗ್ಯೆತೋ ಇಲ್ಲೊ ಹೇಳ್ರಿ". ಅದಕ್ಕ ಅವಳು "ಈಗ ಏನ್ ಇಲ್ಲ, ಆದ್ರ ಹುಡುಗ ಇನ್ನೂ ನನ್ನ ಬಿಟ್ಟಿಲ್ಲ , ನನ್ನ ಮದ್ವಿ ಆಗಬೇಕು ಅಂತಾನ. ನಂದೂ ನಿಮ್ದೂ ಏನಾರ ಮದ್ವಿ ಫಿಕ್ಸ್ ಆಗಿ ಎಂಗೇಜ್‌ಮೆಂಟ್‌ನ್ಯಾಗ ಅಥವಾ ಮದ್ವಿ ಒಳಗ ಅವ ಬಂದು ಗಲಾಟಿ ಮಾಡಬಹುದು ಅನಸ್ತೈತಿ" ಅಂದ್ಲು. ನಿಮಗ ಹಂಗ ಆಗೋದು ಬ್ಯಾಡ ಅಂದ್ರ ಮನೀಲಿ ಬ್ಯಾರೆ ಏನೋ ಹೇಳಿ ಇದನ್ನ ಕ್ಯಾನ್ಸಲ್ ಮಾಡಸರ್ರಿ ಅಂದ್ಲು.

ಆಮೇಲೆ ಎನ್ಕ್ವೈರಿ ಮಾಡಿದರ ಗೊತ್ತಾತು ಅವಳ್ಗೆ ಇನ್ನೂ ಅವನ ಮದವಿ ಆಗ ಬೇಕು ಅಂತ ಐತೆ ಅಂತ. ಕಡೀಕ ಮುಂದ ಹೋಗುವದು ಬ್ಯಾಡ ಅಂತ ಹೇಳಿ ಅದನ್ನ ಕ್ಯಾನ್ಸಲ್ ಮಾಡಿದ್ವಿ.

ಇದಾ ತರ ನಾ ಮನಸ್ ಮಾಡಿದ್ದ ಮೂರ್ ಕನ್ಯಾ ಕ್ಯಾನ್ಸಲ್ ಆದ್ವರಿ. ಈಕಿ ಒಬ್ಬಾಕಿನ ನಂಗ ಡೈರೆಕ್ಟ್ ಹೇಳಿದಳು, ಉಳಿದವ್ರದು ಬ್ಯಾರೆ ಕಡೀಂದ ಸುದ್ದಿ ಬಂದು ಕ್ಯಾನ್ಸಲ್ ಆತರಿ.
ಒಟ್ಟ ಮೂರ್ ಸರಿ ಜೀವಂತ್ ಹೆಣ ಆಗೋದು ತಪ್ಪಿತು ನೋಡ್ರಿ.. !.

– ೦–

ಕಡೇಕ್ಕ ವೇದಾ ಹೆಂಗ ನಂಗ ಸಿಕ್ಕಳು ಹೇಳತೇನಿ ಕೇಳ್ರಿ.. !
ಒಂದ ಈ–ಮೇಲ್ ಐ.ಡಿ ಸಂಬಂಧ ವೇದ ನನಗ ಸಿಕ್ಕಳ್ಲು ಅಂದ್ರ ನಂಬ್ತೀರೇನು??

ನಾ ಐ–ಫ್ಲೆಕ್ಸ್ ಪ್ರಾಜೆಕ್ಟ್ ಮುಗಸಿ ರೆಲ್‌ಕ್ಯೂನ್ಯಾಗ ಕಾಲಿ ಅಡ್ಡಾಡತ್ತಿದ್ದಿನ್ರಿ, ಏನ್ರ ಕೆಲ್ಸ ಹಚ್ಗೊಳ್ಳೊನು ತಡಿ ಅಂತ, ನನಗ ಹೆಂಗ ಇದ್ರು ರೆಲ್ಕ್ಯೂ ಮೈಲ್ ಐ.ಡಿ ಇದ್ದಿದ್ದಿಲ್ಲ ಅದನ್ನರ ತಗೊಳ್ಳೊನು ಅಂತ ನಮ್ಮ ಅಡ್ಮಿನ್ ಮಂಜುನಾಥನ್ನ ಕೇಳಿದೆ. ಅವರು ಅದಕ್ಕ ನೀ ಒಂದ ಈ–ಮೇಲ್ ರಿಕ್ವಿಸಿಶನ್ ಫ್ಹಾರ್ಮ್ HR ಕಡೆ ಇಸಕೊಂಡು ಅವ್ರ ಸೈನ್ ಮಾಡ್ಸಿ ನನ್ಗ ಕೊಡರಿ, ಆಮೇಲೆ ನಾ ಐ.ಡಿ ಕ್ರಿಯೇಟ್ ಮಾಡತೇನಿ ಅಂತ ಹೇಳಿದ್ರು.

ಆತು ಅಂತ ನಮ್ಮ HR ಇರೊ ಆಫ್ಹೀಸ್‌ಗೆ ಮಾರ್ನೆ ದಿವಸ ಹೋಗಿ HR ಭೇಟಿ ಆಗಿ ಫ್ಹಾರ್ಮ್ ಕೇಳ್ದೆ, ಅವನು ನನ್ನ ಕಡೆ ಫ್ಹಾರ್ಮ್ ಇರೋದಿಲ್ಲ, ಅದೆಲ್ಲ ಅಡ್ಮಿನ್ ಕಡೇನ ಇರತವ ಅಂದ , ನನ್ನ ಪುಣ್ಯಕ್ಕ ಮಂಜುನಾಥ್ ನನ್ನ ಹಿಂದೇನ ಇದ್ದ , ಅವ ಯಾವ್ದೋ ಕೆಲ್ಸಕ್ಕ HR ಭೇಟಿಗೆ ಬಂದಿದ್ದ. ನಾ ಅವ್ರ ನೋಡಿ, ಸರ್ ಇವ್ರ ಕಡೆ ಆ ಫ್ಹಾರ್ಮ್ ಇಲ್ಲ ಅಂತ ಅಂದೆ. ಆದಕ್ಕ ಅವ್ರು ತಮ್ಮ ಜೂನಿಯರ್ಗೆ ಹೇಳಿ ಅವ್ರ ಕಡೆ ಇದ್ದ ರೆಫ್ಹರೆನ್ಸ್ ಫ್ಹಾರ್ಮ್ ಕೊಟ್ಟು ಇದನ್ನ ಫ್ಹಿಲ್ ಅಪ್ ಮಾಡಿ ಸೈನ್ ತೊಗೊಂಡು ಬರ್ರಿ ಅಂದ್ರು. ನಾ ಆತ್ರಿ ಅಂತ ಫ್ಹಿಲ್ಲ್ ಮಾಡಿ HR ಕಡೆ ತಗೊಂಡು ಹೋದೆ. HR ಏನೇನೋ ಕತಿ ಹೇಳಿ ನನ್ಗ ಸೈನ್ ಮಾಡಲಾರ್ದ ವಾಪಸ್ ಕಳಿಸಿದ.


ಬಾಗಲ್‌ದಾಗ ಮಂಜುನಾಥ್ ಕಾಯ್ತಾ ಇದ್ದರ, ನನ್ನ ನೋಡಿದವ್ರ ಎಲ್ರಿ ಫ್ಹಾರ್ಮ್ ಕೊಡ್ರಿ, ನಾ ಈಗ ಕ್ರಿಯೇಟ್ ಮಾಡತೇನಿ ಅಂದ್ರು, ನಾ ಆಗಿದ್ದೆಲ್ಲ ಹೇಳ್ದೆ. ಅದ್ಕ ಅವರು ಹೀಗೆ ರಿ ಇವ್ರು ಯಾರನ್ನೂ ಚೆನ್ನಾಗಿ ನೋಡ್ಕೊಳ್ಳಲ್ಲ, ಅದಕ್ಕೆ

ಎಲ್ರೂ ಈ ಕಂಪೆನಿ ಬಿಟ್ಟು ಬ್ಯಾರೆ ಕಡೆ ಹೊಂಟಾರ, ಮತ್ತ ಎಲ್ಲಿ ಚೊಲೊ ನೋಡಕೊಂತಾರೊ ಅಲ್ಲೆ ಹೊಗತಾರ , ನಮ್ಮ ಕಡೆ ಹಿಂಗ ಮನಿ ಮಾಡೋಕಿಂತ ಮೊದ್ಲ ಆ ಏರಿಯಾದಾಗಿನ ಜನ ಚೆನ್ನಾಗಿ ಇದ್ದಾರೊ ಇಲ್ಲೊ ಅಂತ ನೋಡಕೊಂಡ ಮನಿ ಮಾಡತಾರ ಅಂದ್ರು. ನಾ ಅವ್ರ್ನ ಕೇಳ್ದೆ "ನಿಮ್ದು ಯಾವ್ ಊರ್ ಸರ್?" ಅಂತ, ಅವರಂದ್ರು ನಮ್ದು ಭದ್ರಾವತಿ ಅಂತ. ನಾ ಒರಿಜಿನಲ್ ಭದ್ರಾವತೀನ ಸರ್ ಅಥವಾ ಬ್ಯಾರೆ ಅದ್ರ ಹತ್ರದ ಊರ ಅಂತ ಕೇಳ್ದೆ. ಅದಕಾ ಅವರು ನಮ್ದು ಭದ್ರಾವತೀನ ನೀವ ಯಾವಗಾರೆ ಅಲ್ಲಿ ಬಂದಿದ್ರೇನು ಅಂತ ಕೇಳಿದ್ರು. ನಾ ಅಂದೆ ಭಾಳಷ್ಟ್ ಅಲ್ಲ ಸರ್ ಕನ್ಯ ನೋಡಕ ಅಂತ ಬಂದಿದ್ದೆ. ಅದಕ ಅವರು ನಿಮ್ಮ ಮದ್ವಿ ಆಗಿಲ್ಲೇನ್ರಿ ಇನ್ನು ಅಂತ ಕೇಳಿದ್ರು. ಇಲ್ಲರಿ ಕನ್ಯ ಹುಡಕಾಕ ಹತ್ತೇನಿ ಅಂದೆ. ನಿಮ್ಮ ಕ್ಯಾಸ್ಟ್ ಯಾವದ್ರಿ ಅಂದ್ರು. ಹೇಳ್ದೆ.....ಬರ್ರಿ ಇಲ್ಲೆ ಒಂದ ನಿಮಿಷ ಅಂದೋರ ನನ್ನ ಅವರ್ ಕ್ಯಾಬಿನ್‌ಗೆ ಕರಕೊಂಡ ಹೋಗಿ ಒಂದ್ ಫ಼ೋನ್ ಮಾಡೇ ಬಿಟ್ರು.. ಫ಼ೋನ್ ಮಾಡಿದ್ದು ಯಾರಿಗೆ ಅಂದ್ರ ನನ್ನ ಹೆಣ್ತಿ ಅಕ್ಕಗ .... ಆಮೇಲೆ ನಾ ವೇದನ್ನ ನೋಡಿ ಮಾತು ಕತಿ ಎಲ್ಲಾ ಆಗಿ ನನ್ನ ಮದ್ವಿ ಆಗೇ ಹೋತು.. . !

ಹಿಂಗ ಜಸ್ಟ್ ಒಂದ ಈ ಮೇಲ್ ಐ.ಡಿ ಸಲುವಾಗಿ ನನ್ನ ಮದ್ವಿ ಆತು ನೋಡ್ರಿ.. !

## ಗಿರೀಶ ಮೆಟಗುಡ್ಡಮಠ

**ಅಂದು**



**ಇಂದು**



## ಈಗಿನ ಜೀವನಾನ ಆರಾಮ್ ಐತಿ..ಮುಂದಿನ ಜೀವನ ಇನ್ನೂ ಕಠಿಣ ಇರಬಹುದು.. !

– ತಾಹೀರ್ ಎ. ಸನದಿ.



ನಮ್ಮ ಬಳಗದ ಪ್ರಮುಖ ತಾರೆಯರಲ್ಲಿ ಒಬ್ಬರಾದ ತಾಹೀರ್ ಓದಿದ್ದು, ಬೆಳೆದಿದ್ದು ಬೆಳಗಾವಿ ಹಾಗೂ ಧಾರವಾಡ ಜಿಲ್ಲೆಗಳಲ್ಲಿ. ಚಿಕ್ಕಂದಿನಿಂದಲೂ ಇದ್ದ ಟೆಬಲ್ ಟೆನ್ನಿಸ್ ಆಡುವ ಹವ್ಯಾಸ ಇವರನ್ನು ಕರೆತಂದಿದ್ದು ಧಾರವಾಡಕ್ಕೆ. ಅಲ್ಲಿ ಈ ಕ್ರೀಡೆಯಲ್ಲಿ ಸಾಕಷ್ಟು ಕೃಷಿ ಮಾಡಿದ ತಾಹೀರ್ ಅದರಲ್ಲಿ ಗಣನೀಯ ಯಶಸ್ಸನ್ನು ಕಂಡರು. ಜೆ.ಎಸ್.ಎಸ್. ಕಾಲೇಜು, ಧಾರವಾಡ ಹಾಗು ಹುಬ್ಬಳ್ಳಿಯ ಬಿ.ವಿ.ಬಿ. ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡಿರುವ ತಾಹೀರ್ ಟೆಬಲ್ ಟೆನ್ನಿಸ್‌ನಲ್ಲಿ ರಾಜ್ಯ ಮಟ್ಟದ ಆಟಗಾರನಾಗಿ ಬೆಳೆದು ಕರ್ನಾಟಕ ಹಾಗೂ ಗೋವ ರಾಜ್ಯಗಳನ್ನು ಸಾಕಷ್ಟು ಸಲ ಪ್ರತಿನಿಧಿಸಿದ್ದಾರೆ. ಕಳೆದ ಸುಮಾರು ಒಂದು ದಶಕದಿಂದ ಸಾಫ್ಟ್‌ವೇರ್ ರಂಗದಲ್ಲಿ ಸೇವೆ ಸಲ್ಲಿಸುತ್ತಿರುವ ಇವರು ಈಗ ಮುದ್ದಿನ ಮಡದಿ ಶ್ರೀಮತಿ ನೂರ್ ಅವರೊಂದಿಗೆ ತಮ್ಮ ಮುದ್ದು ಕಂದನ ಆಗಮನದ ನಿರೀಕ್ಷೆಯಲ್ಲಿದ್ದಾರೆ.

"ಈಗಿನ ಜೀವನ ಆರಾಮ್ ಐತಿ..ಮುಂದಿನ ಜೀವನ ಕಠಿಣ ಇರಬಹುದು"ಅಂತ ನಾ ಹೆಂಗ ನನ್ನ attitude ಬದಲ ಮಾಡಕೊಂಡೆ ಅಂತ ತಿಳಸಾಕ ಒಂದು ಸಣ್ಣ ಬರಹ.

ಮೊದಲು ಐ–ಫ್ಲೆಕ್ಸ್ ಸೇರಿದಾಗ ಬೆಂಗಳೂರಿನಲ್ಲಿ ನಾನು ಗ್ಲೋಬಲ್ ಸಪೋರ್ಟ್‌ನಲ್ಲಿ ಸಪೋರ್ಟ್ ಟೀಮ್ ಮೆಂಬರ್ ಅಂತ ಆಗಿದ್ದೆ. ಆಗ ಇಲ್ಲಿ ಕೆಲಸದ ಒತ್ತಡ ಅಷ್ಟೇನೂ ಭಾಳ ಹೇಳಿಕೊಳ್ಳುವ ಹಾಗೇನೂ ಇರಲಿಲ್ಲ. ಓಕೆ.. ನಾಲ್ಕಾರು ಜನ ಸೀನಿಯರ್ಸ್ ಒಟ್ಟಿಗೆ ಇರತಿದ್ದರು, ನನ್ನ ಕೈಯಾಗ ಎಷ್ಟು ಆಗತ್ತಿತ್ತೊ ಅಷ್ಟು ಮಾಡಿ ಇಲ್ಲಂದ್ರ ಅವ್ರಿಗೆ ಕೇಳೋದು. ಹಿಂಗ ನಡತಿತ್ತು ಜೀವನ.

ಆಮ್ಯಾಲೆ ಬಂತು ನೋಡ್ರಿ first assignment to Jhakartha .. ! ಇಲ್ಲಿ ಮಾತ್ರ ನಾನೊಬ್ಬನೇ 3 sites ನೋಡಿಕೊಳ್ಳಬೇಕಾಗಿತ್ತು. ಹೇಳೋವ್ರು ಕೇಳೋವ್ರು ಅಂತಾ ಯಾರೂ ಇರಲಿಲ್ಲ. ಆದ್ರ ಕೆಲಸ ಸ್ವಲ್ಪ ಒತ್ತಡ ತರುತ್ತಿತ್ತು. ಯಾಕಂದ್ರ ಒಬ್ಬನೆ ಇದ್ದೆ ನೋಡ್ರಿ. ಏನಾರ ಜಾಸ್ತಿ ಪ್ರಾಬ್ಲಮ್ ಆದ್ರ ಸತ್ತೇನೊ ಬದುಕೇನೋ ಅಂತ ಕೇಳಾಕ್ಕ ಸೈತ ಯಾರೂ ಇರಲಿಲ್ಲ. ಇಂಡಿಯಾಕ್ಕ್ ಫೋನ್ ಮಾಡಿ ಕೇಳಬೇಕಾಗತಿತ್ತು. ಆವಾಗ ನಾ ವಿಚಾರ್ ಮಾಡತಿದ್ದೆ "ಎಲಾ ಇವನ ಇಂಡಿಯಾದಾಗ ಎಷ್ಟೋ ಆರಾಮ್ ಇದ್ದೆ, ಇದ ಒಳ್ಳೇ ಇಲ್ಲಿ ಬಂದ್ ಸಿಕ್ಕ ಹಾಕ್ಕೊಂಡೆ ಅಂತ".

ಆಮ್ಯಾಗ ಬಂತು ಮುಂದಿನ ಅಸೈನ್‌ಮೆಂಟ್ ಮಲೇಶಿಯಾಕ್ಕ. ಕಸ್ಟಮರ್ ಮತ್ತ ಸಪೋರ್ಟ್ ಕೆಲಸ almost round the clock ನಡೀತಿತ್ತ. ವೀಕೆಂಡ್ಸ್ ಕೂಡ ಕೆಲಸ ಮಾಡಬೇಕಾಗಿತ್ತು. ಆಮ್ಯಾಲೆ ನಮ್ಮ ಹೊಸ ಪ್ರಾಡಕ್ಟ್ flexcubeಗೆ ಮೈಗ್ರೇಶನ್ ಬ್ಯಾರೆ ಶುರು ಆತು. ಹಿಂಗಾಗಿ ಮೈಗ್ರೇಶನ್ ಮತ್ತು ಸಪೋರ್ಟ್ ಎರಡೂ ನೋಡಕೊಬೇಕಾಗಿತ್ತು. ಕೆಲಸ ಭಾಳ್ ಅನಸ್ತಿತ್ತು. ಆವಾಗ್ ನನಗ ಅನಸಾಕ ಶುರು ಅತು.." ಎಲಾ ಇವನ.. ಝಕಾರ್ತದಾಗ ಎಷ್ಟ್ ಆರಾಮ್ ಇದ್ದೆ, ಇಲ್ಲಿ ಬಂದು ಒಳ್ಳೇ ಸಿಕ್ಕ ಹಾಕ್ಕೊಂಡಿನಲ್ಲಾ" ಅಂತ.

ಇನ್ನ ನೋಡ್ರಿ.. ಮುಂದಿನ ಅಸೈನ್‌ಮೆಂಟ್ ಆಫ್ರಿಕಾದಾಗ PM ಆಗಿ ಹೋಗು ಅಂದರು. ಈಗಂತೂ ತಲಿ ಒಡದುಕೊಳ್ಳುದು ಒಂದ ಬಾಕಿ. "ಇದೇನಪಾ ಪೂರ್ತಿ ಜವಾಬ್ದಾರಿ ಬಂದ್ ಬಿಟ್ಟಲ್ಲ ಅಂತ.....ಝಕಾರ್ತ, ಮಲೇಶಿಯಾದಾಗ ಎಷ್ಟೋ ಆರಾಮ್ ಇತ್ತು ಇದೊಳ್ಳೆ ಇಲ್ಲಿ ಬಂದ್ ಸಿಕ್ಕ ಹಾಕ್ಕೊಂಡೆ" ಅಂತ ಅಂದುಕೊಂಡೆ.

ಒಂದ ದಿನ ಹೀಂಗ ಕುಂತ ವಿಚಾರ ಮಾಡಿದೆ with flashback. ಪ್ರತಿ ಹೊಸ ಅಸೈನ್‌ಮೆಂಟ್ ಸಿಕ್ಕಾಗನೂ ಹಿಂದಿನ ಅಸೈನ್‌ಮೆಂಟ್‌ನ ಚಲೊ ಇತ್ತು ಅನ್ನಸತಿತ್ತು. ಹಿಂಗಾದ್ರ ಸ್ವಲ್ಪ ತಡಿ ನಮ್ಮ attitudeನ ಚೇಂಜ್ ಮಾಡಿ ಬಿಡೋಣು ಅಂತ. ಇನ್ನ ಮ್ಯಾಲಿಂದ ಹೆಂಗ ವಿಚಾರ್ ಮಾಡೋದು ಅಂದ್ರ "ಈಗಿನ ಅಸೈನ್‌ಮೆಂಟ್ ಭಾಳ ಚಲೊ ಐತಿ, ಯಾಕಂದ್ರ ಮುಂದಿನ ಅಸೈನ್‌ಮೆಂಟ್ ಇದಕ್ಕಿಂತ ಕಠಿಣ ಇರತೈತಿ" . So ಅವತ್ತಿಂದ ನಾನು ಈ ಹೊಸಾ ಅಸೈನ್‌ಮೆಂಟ್‌ಗಳ ಬಗ್ಗೆ ಟೆನ್ಶನ್ ತುಗೊಳ್ಳುದು ಬಿಟ್ಟೆ. ಅದಕ್ಕ ನಾನು ನಿಮಗಾದರೂ ಹೇಳತೆನಿ.. "Don't worry , be happy….. enjoy the current assignment".

**ಆಶಾ ಪಾಟೀಲ**

**ಅಂದು** **ಇಂದು**





# ಪರಮಾತ್ಮನ ಪರಿಚಯ

ಬ್ರಹ್ಮಕುಮಾರಿ ಮಾಲಾ (ಎಮ್.ಬಿ.ರಾಜಗೋಳಿ, ನಿವೃತ್ತ ಮುಖ್ಯೋಪಾಧ್ಯಾಯಿನಿ), ಯರಡಾಲ.



ಪ್ರಕಾಶ ಅವರ ಸೊದರತ್ತೆಯವರಾದ ಇವರು ಗೋಕಾಕ್ ತಾಲೂಕಿನ ಬಡಿಗವಾಡ ಗ್ರಾಮದ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಪ್ರಧಾನ ಗುರುಮಾತೆಯಾಗಿ ಕಳೆದ ಅಕ್ಟೊಬರ್ 31 ರಂದು ನಿವೃತ್ತರಾಗಿದ್ದಾರೆ. ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಕ್ರಿಯ ಸದಸ್ಯರಾಗಿರುವ ಇವರು ಪರಮಪಿತ ಶಿವನ ಬಗ್ಗೆ ಜನಜಾಗೃತಿ ಮೂಡಿಸಲು ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ.

ಇದೇನು ಹೊಸ ಮಾತಲ್ಲ. ಯಾರಿಗೆ ಪರಮಾತ್ಮನ ಪರಿಚಯ ಇಲ್ಲ ಮತ್ತು ಯಾರಿಗೆ ಗೊತ್ತಿಲ್ಲ. ಪರಮಾತ್ಮ ಅಂದರೆ ಕೊರಳಲ್ಲಿ ರುದ್ರಾಕ್ಷಿ ಸರ, ಜಡೆಯಲ್ಲಿ ಗಂಗೆ, ಕೈಯಲ್ಲಿ ತ್ರಿಶೂಲ, ಕೊರಳಿಗೆ ಸುತ್ತಿದ ಹಾವು, ಹುಲಿ ಚರ್ಮದ ಉಡುಗೆ ಪಕ್ಕದಲ್ಲಿ ಪಾರ್ವತಿ ಜೊತೆಗೆ ಗಣಪತಿ. ಈತನೆ ಪರಮಾತ್ಮ ಎನ್ನುತ್ತಾರೆ. ಬೇರೆ ಬೇರೆ ದೇವಾಲಯಗಳಿಗೆ ಹೋಗಿ ಹನುಮಾನ್, ಕೃಷ್ಣ, ಲಕ್ಷ್ಮಿ ಇವರುಗಳನ್ನು ದೇವರು ಎನ್ನುತ್ತಾರೆ. ಕಲ್ಲು, ಮಣ್ಣು, ಕಟ್ಟಿಗೆ ಮುಂತಾದವುಗಳಿಂದ ಮಾಡಿದ ಮೂರ್ತಿಗಳನ್ನು ದೇವರು ಎನ್ನುತ್ತಾರೆ. ಮಸೀದೆಗಳಿಗೆ ಹೋಗಿ ಪ್ರಾರ್ಥನೆ ಮಾಡಿ ಅಲ್ಲಾಹುವನ್ನು ದೇವರು ಎನ್ನುತ್ತಾರೆ. ಚರ್ಚುಗಳಿಗೆ ಹೋಗಿ ಪ್ರಾರ್ಥನೆ ಮಾಡಿ ಕ್ರಿಸ್ತನನ್ನು ದೇವರು ಎನ್ನುತ್ತಾರೆ. ಗುರುದ್ವಾರಗಳಿಗೆ ಹೋಗಿ ಗ್ರಂಥಸಾಹಿಬ್ ಪಠಣ ಮಾಡಿ ಗುರುನಾನಕನನ್ನು ದೇವರು ಎನ್ನುತ್ತಾರೆ. ಅಹಿಂಸಾ ಪರಮೋಧರ್ಮ ಎಂದು ಹೇಳಿದ ಮಹಾವೀರನನ್ನು, ಆಸೆಯೇ ದುಃಖಕ್ಕೆ ಮೂಲ ಎಂದು ಹೇಳಿದ ಬುದ್ಧನನ್ನು, ಕಾಯಕವೇ ಕೈಲಾಸ ಎಂದು ಹೇಳಿದ ಬಸವಣ್ಣನನ್ನು, ವಿವಿಧ ಸಿದ್ಧಾಂತ ಬೋಧಿಸಿದ ಆಚಾರ್ಯರನ್ನು, ಮಠಾಧಿಪತಿಗಳನ್ನು, ಸಂತರನ್ನು, ಸಾಧುಗಳನ್ನು ದೇವರೆನ್ನುತ್ತಾರೆ. ಹಾಗಾದರೆ ಇವರೆಲ್ಲರೂ ದೇವರಾ? ನಿಜವಾದ ದೇವರು ಯಾರು? ಆ ನಿಜವಾದ ಸತ್ಯವಾದ ಪರಮಪಿತ ಪರಮಾತ್ಮನ ಪರಿಚಯವನ್ನು ಸಂಕ್ಷಿಪ್ತವಾಗಿ ಮಾಡಿಕೊಳ್ಳೋಣ ಬನ್ನಿ.

ಪರಮಪಿತ ಪರಮಾತ್ಮ ಎಂದರೆ ಈತನಿಗೆ ಯಾವ ತಂದೆ ತಾಯಿ ಇಲ್ಲ. ಈತನು ಯಾರ ಗರ್ಭದಿಂದಲೂ ಹುಟ್ಟಿಲ್ಲ. ಈತನಿಗೆ ಶರೀರ ಇಲ್ಲ. ಈತನು ಅಭೋಕ್ತ, ಅಯೋನಿಜ, ಅಶರೀರಿ, ಅಕಾಲ, ಜನನ ಮರಣ ರಹಿತ, ಧರ್ಮ–ಜಾತಿ–ವರ್ಣ–ವರ್ಗಬೇಧ ರಹಿತ ಜ್ಯೋತಿರ್ಬಿಂದು ಪರಮಾತ್ಮ ಸದಾ ಪವಿತ್ರ. ಈತನ ಹೆಸರು ಶಿವ. ಶಿವ ಎಂದರೆ ಸದಾ ಕಲ್ಯಾಣಕಾರಿ, ಮಂಗಳಕಾರಿ, ಶುಭಕಾರಿ. ದುಃಖ ದೂರ ಮಾಡಿ ಸುಖ ಕೊಡುವವನು. ದೇವರಿಗೆ ಹೆದರುವ ಕಾರಣ ಇಲ್ಲ. ಪರಮಾತ್ಮ ಆನಂದಸಾಗರ, ದಯಾಸಾಗರ, ಪ್ರೇಮಸಾಗರ. ಸಮುದ್ರದ ನೀರನ್ನೆಲ್ಲ ಮಸಿ (ಇಂಕ್) ಮಾಡಿ, ಆಕಾಶವನ್ನೆ ಹಾಳೆ (ಪೇಪರ್) ಮಾಡಿ, ಗಿಡಗಂಟಿಗಳನ್ನೆಲ್ಲ ಲೇಖನಿ (ಪೆನ್) ಮಾಡಿ ಬರೆದರೂ ಆತನ ಮಹಿಮೆ ತೀರುವದಿಲ್ಲ.

ಹಾಗಾದರೆ ಪರಮಾತ್ಮ ಜ್ಯೋತಿರ್ಬಿಂದು ಎಂದ ಹಾಗಾಯಿತು. ಈ ಜ್ಯೋತಿರ್ಬಿಂದು ಪರಮಾತ್ಮನ ಸ್ಥಾನ ಎಲ್ಲಿದೆ, ಆತ ಮಾಡುವ ಕೆಲಸವೇನು, ಯಾವಾಗ ಭೂಮಿಗೆ ಬರುತ್ತಾನೆ, ಹೇಗೆ ಬರುತ್ತಾನೆ, ಯಾರ ಮುಖಾಂತರ ತನ್ನ ಪರಿಚಯ ತಿಳಿಸುತ್ತಾನೆ. ಪರಮಾತ್ಮ ಎಂದರೆ ಇಡೀ ವಿಶ್ವಕ್ಕೆ ತಂದೆ ಆಗಿದ್ದಾರೆ.

ಭಕ್ತಿಯಿಂದ ರಘುಪತಿ ರಾಘವ ರಾಜಾರಾಮ್ ಪತಿತ ಪಾವನ ಸೀತಾರಾಮ್ ಎನ್ನುತ್ತಾರೆ ಇದರ ಅರ್ಥ ಏನು? ರಾಮ ರಾಜ್ಯ ರಾವಣ ರಾಜ್ಯಗಳ ಬಗ್ಗೆ ಮಾತಾಡುತ್ತಾರೆ ಇವು ಯಾವಾಗ ಇದ್ದವು? ಭಾರತದಲ್ಲಿ ಬಂಗಾರದ ಪಕ್ಷಿ ಇತ್ತಂತೆ ಹೌದೆ? ಶಿವನ ಜಯಂತಿ ಆಚರಿಸುತ್ತಾರೆ ಏಕೆ? ಆಗಿ ಹೋದ ನಾಲ್ಕು ಯುಗಗಳ ಬಗ್ಗೆ ಈಗಿರುವ ಕಲಿಯುಗದ ಬಗ್ಗೆ ಹೇಳುತ್ತಾರೆ ಅವೆಲ್ಲ ಏನು? ಹೆಣ್ಣು ದೇವತೆಗಳಿಗೆ ಹುಲಿ ಸಿಂಹಗಳೇ ಏಕೆ ವಾಹನಗಳು? ಶಿವಲಿಂಗದ ಮುಂದೆ ನಂದಿಯೇ ಏಕೆ? ಶಿವನಿಗೆ ತ್ರಿದಳವೆ (ಪತ್ರಿ) ಏಕೆ ಪ್ರೀತಿ? ಶಿವಭಕ್ತರು ವಿಭೂತಿಯನ್ನೇ ಏಕೆ ಧರಿಸಬೇಕು? ವಿಷ್ಣು ಭಕ್ತರು ನಾಮವನ್ನೇ ಏಕೆ ಹಚ್ಚಬೇಕು? ಇವೆಲ್ಲಕ್ಕಿಂತ ಹೆಚ್ಚಾಗಿ ನಮ್ಮನ್ನು ನಾವೇಕೆ ತಿಳಿದುಕೊಂಡಿಲ್ಲ. ನಾನು ಯಾರು? ಎಲ್ಲಿಂದ ಬಂದೆ? ಯಾಕೆ ಬಂದೆ? ಎಲ್ಲಿಗೆ

ಹೋಗಬೇಕು? ಹಿಂದೆ ಎಷ್ಟು ಜನ್ಮಗಳನ್ನು ಪಡೆದೆ? ಮುಂದೆ ಎಷ್ಟು ಜನ್ಮಗಳನ್ನು ಪಡೆಯಲಿದ್ದೇನೆ? ಈ ನಿರಂತರ ಜನನ ಮರಣಗಳಿಗೆ ಕೊನೆ ಇದೆಯೆ? ಮುಕ್ತಿ ಎನ್ನುವದೊಂದು ಇದೆಯೆ?

ಬರೀ ನದಿಗೆ ಹೋಗಿ ಜಳಕ ಮಾಡಿ ದೇಹ ಶುದ್ಧಿ ಮಾಡಿಕೊಂಡರಾಯಿತೆ? ಹಸಿವಾದಾಗ ಊಟ ಮಾಡಿದರಾಯಿತೆ? ಈ ಶರೀರದ ಹಣೆಯ ಮಧ್ಯದಲ್ಲಿ ಜ್ಯೋತಿಸ್ವರೂಪ ಆತ್ಮ ಇದೆ. ಅದೇ ಜೀವ. ಈ ಜೀವಕ್ಕೆ ಊಟ ಯಾವಾಗ ಸಿಗುತ್ತದೆ ಅಂದರೆ ಪರಮಪಿತ ಪರಮಾತ್ಮನನ್ನು ನೆನಪು ಮಾಡಿಕೊಂಡಾಗ. ನಾವು ಪರಮಾತ್ಮನನ್ನು ಎಷ್ಟು ಪ್ರೀತಿಯಿಂದ ನೆನಪು ಮಾಡಿಕೊಳ್ಳುತ್ತೇವೆಯೊ ಅಷ್ಟು ನಮ್ಮ ಆತ್ಮ ಶಕ್ತಿಶಾಲಿಯಾಗುತ್ತದೆ, ಖುಷಿಯಿಂದ ಸಂತೋಷದಿಂದ ಇರುತ್ತದೆ. ಜ್ಞಾನ ಬೇರೆ, ವಿಜ್ಞಾನ ಬೇರೆ, ಅಜ್ಞಾನ ಬೇರೆ. ಚಿಂತೆ ಬೇರೆ, ಚಿತೆ ಬೇರೆ ಅಂತರ ಬಿಂದು ಮಾತ್ರ. ಹಾಗೆಯೆ ಒಂದು ದೀಪಕ್ಕೆ ಎಣ್ಣೆ ಇಲ್ಲ ಅಂದರೆ ಹ್ಯಾಗೆ ಅದು ಮಂದವಾಗುತ್ತದೋ ಕಡಿಮೆ ಪ್ರಕಾಶ ಕೊಡುತ್ತದೋ ಅದೇ ರೀತಿ ಆತ್ಮವೆಂಬ ಜ್ಯೋತಿರ್ಬಿಂದುವಿಗೆ ಪರಮಾತ್ಮನ ನೆನಪು ಕಡಿಮೆ ಮಾಡಿದರೆ ಶಕ್ತಿ ಕುಂದುತ್ತದೆ. ನೆನಪು ಹೆಚ್ಚು ಮಾಡಿದಂತೆಲ್ಲ ಶಕ್ತಿ ಹೆಚ್ಚುತ್ತದೆ. ಆಗ ಆತ್ಮ ಜ್ಯೋತಿ ಪ್ರಕಾಶಮಾನವಾಗಿ ಹೊಳೆಯುತ್ತದೆ.

ಶಿವನಿಗೆ ಸತ್ಯಂ ಶಿವಂ ಸುಂದರಂ ಎಂದು ಹೇಳುತ್ತಾರೆ. ಗಾಂಧೀಜಿ ಕೇವಲ ಶಾಂತಿಗಾಗಿ ಪ್ರಾರ್ಥನೆ ಮಾಡಿದರು. ಅವರು ಮಹಾತ್ಮರೇನೋ ಅನ್ನಿಸಿಕೊಂಡರು ಆದರೆ ನಿಜವಾದ ಪರಮಾತ್ಮನ ಬಗ್ಗೆ ಅವರು ತಿಳಿಯಲಿಲ್ಲ.

ಹಾಗಾದರೆ ನಾವು ಹೇಳುವ ಪರಮಪಿತ ಪರಮಾತ್ಮ ಯಾವ ಯುಗದಲ್ಲಿ ಮತ್ತು ಯಾವಾಗ ಈ ಧರೆಗೆ ಬರುತ್ತಾನೆ? ಈಗ ನಾವಿರುವ ಸಂಗಮಯುಗದಲ್ಲಿ ನಾವು ಪರಮಾತ್ಮನ ನೆನಪು ಮಾಡಿಕೊಳ್ಳುವದರಿಂದ ಮುಂದೆ ಬರುವ ಸತ್ಯ ಯುಗದಲ್ಲಿ ದೇವತಾ ಪದವಿ ಪಡೆಯುತ್ತೇವೆ. ಹೀಗಿರುವ ಪರಮಾತ್ಮನನ್ನು ನೆನಪು ಮಾಡಿಕೊಳ್ಳುತ್ತ ಆ ಪರಮಾತ್ಮನಿಂದ ಸಿಗುವ ಆಸ್ತಿಗೆ ಅಧಿಕಾರಿ ಆಗೋಣ.

ಟಿಪಿ ಬಳಗದ ಸದಸ್ಯರೆಲ್ಲರಿಗೂ ಶುಭವಾಗಲಿ.

ಓಂ ಶಾಂತಿ

– ೦ –

## ಪುಂಡಲೀಕ ಸತ್ಯನಾಯಕ

**ಅಂದು**



**ಇಂದು**



## ಬೀಸೂಕಲ್ಲಿನ ಪದಗಳು – ಸಂಗ್ರಹ: ಶ್ರೀಮತಿ. ಶಾಂತಾ ಸಿ ರಾಜಗೋಳಿ. ಧಾರವಾಡ

ನನ್ನ ಅತ್ತೆಯವರು ದೇವರ ನೈವೇದ್ಯಕ್ಕೆ ಮಡಿಯಿಂದ ತಯಾರಿಸುತ್ತಿದ್ದ ಅಡುಗೆಗಳಿಗೆ ಸ್ವತಃ ಧಾನ್ಯಗಳನ್ನು ಬೀಸುತ್ತಿದ್ದಾಗ ಹೇಳುತ್ತಿದ್ದ ಕೆಲವು ಹಾಡುಗಳನ್ನು ಇಲ್ಲಿ ಕೊಟ್ಟಿದ್ದೇನೆ. ಅವರ ಮೊಮ್ಮಗ ಪ್ರಕಾಶನ ಕುರಿತಾಗಿ ಅವರು ಬಹಳಷ್ಟು ಹಾಡುತ್ತಿದ್ದರು.

ಮಾಡಿಲ್ಲ ಮಳಿಯಿಲ್ಲ ಮ್ಯಾಗ ಗದ್ದಿನಿಲ್ಲ
ಮಾಳಗಿಮ್ಯಾಲ ಮಡನಿಂತು
ಮಾಳಗಿಮ್ಯಾಲ ಮಡನಿಂತು ನನ ಪರಕಾಶಿ
ನೀ ಓದಬಲ್ಲವ ನೀ ಒಡದೇಳೋ.......

(ಮಾಡಿಲ್ಲ–ಮೋಡವಿಲ್ಲ, ಗದ್ದಿನಿಲ್ಲ–ಗುಡುಗು)

ಸರಕಾರ ಅನ್ನೋದು ದರಕಾರ ನನಗಿಲ್ಲ
ಬರಕೊಳ್ಳೊ ಪರಕಾಶಿ ಮನಿಯಾಗ
ಬರಕೊಳ್ಳೊ ಪರಕಾಶಿ ಮನಿಯಾಗ ಇದ್ದಾಗ
ಸರಕಾರದ ಅಂಜಿಕಿ ನನಗಿಲ್ಲಾ.....

(ದರಕಾರ–ಹೆದರಿಕೆ, ಬರಕೊಳ್ಳೊ–ಓದಿದ, ಪರಕಾಶಿ –ಪ್ರಕಾಶ)

ಅವರ್‍ಯಾರ ಇವರ್‍ಯಾರ ಅವರಿಗೊಂಚಲದವರ
ಅವರ ನಮ್ಮವ್ವನ ತವರವರ
ಅವರ ನಮ್ಮವ್ವನ ತವರವರ ಬಂದರ
ಹಾಲಿನ್ಯಾಗ ಹಸ್ತ ತೊಳಿಸೇನ....

ಅವರೀ ಹೂವಿನಂಗ ಅವರ ಬಾಳ ಚಲುವರ
ಅವರವ್ವ ನಮ್ಮನಿಗೆ ಕಳವಳ್ಳ
ಅವರವ್ವ ನಮ್ಮನಿಗೆ ಕಳವಳ್ಳ ಅವರಿಲ್ದೆ
ಮಾಗಿಯ ಹೊತ್ತ ನಾ ಹ್ಯಾಂಗ ಕಳೀಯಲೆ...

(ಕಳವಳ್ಳ–ಕಳಿಸ್ತಾ ಇಲ್ಲ)

ಅತ್ತಿಗಿ ಅಣ್ಣನ ಮಡದಿ ಸಿಟ್ಟ ತಾಳವಳಲ್ಲ
ಅಕ್ಕತಪ್ಪಿ ನನ್ನ ಬೇದಾಳ
ಅಕ್ಕತಪ್ಪಿ ನನ್ನ ಬೇದಾಳ ನನ ಪರಕಾಶಿ
ತಪ್ಪಂದ ನನ್ನ ಕಾಲ ಹಿಡಿಸ್ಯಾನ....

(ಅಕ್ಕತಪ್ಪಿ–ಬೈ ಚಾನ್ಸ್)


ಮಳಿಯ ಬಂದರ ನಾ ಮರದಹನಿಗೆ ನಿಂತೇನ
ಮಳಿಬಿಟ್ಟರೂ ಬಿಡದ ಮರದ ಹನಿ
ಮಳಿಬಿಟ್ಟರೂ ಬಿಡದ ಮರದ ಹನಿ ನನ್ನ ಹಡದವ್ವ
ನಾ ಬಿಟ್ಟರ ಬಿಡದ ನಿನ ಮನವ.....

ಅಂಜಬ್ಯಾಡ ಮನವ ಆನೀಯ ಬಲವೈತಿ
ಹಿಂದ ಗರ್ಜಿಸುವ ಹುಲಿ ಐತಿ
ಹಿಂದ ಗರ್ಜಿಸುವ ಹುಲಿ ಐತಿ ನನ ಪರಕಾಶಿ
ಸರಜಾ ನಿನಬಲವ ನನಗೈತಿ.....

(ಸರಜಾ–ಒಳ್ಳೆಯ ಗುಣದವ)

ಆಕಳ ಕರಬಿಟ್ಟ ನಾಕಮೂಲಿಗೆ ನಿಂತ
ಯಾಕ ಗೋಪೆವ್ವ ನೀ ತೊರಿವಲ್ಲಿ
ಯಾಕ ಗೋಪೆವ್ವ ನೀ ತೊರಿವಲ್ಲಿ ನನಕಂದ
ಆಡಿಬಂದ ಮಗ ಹಸದಾನ....

- o -



**ಬೀಸೂಕಲ್ಲು :** ಬೀಸುವ ಕಲ್ಲು– ಹಳ್ಳಿಗಳಲ್ಲಿ ಹಿಟ್ಟಿನ ಗಿರಣಿಗಳು ಬರುವ ಮೊದಲು, ಧಾನ್ಯಗಳನ್ನು ಬೀಸಲು ಉಪಯೋಗಿಸುತ್ತಿದ್ದ ಎರಡು ವೃತ್ತಾಕಾರದ ಚಪ್ಪಟೆ ಕಲ್ಲುಗಳಿಂದ ಮಾಡಿದ ಒಂದು ಸಾಧನ. ಈಗಲೂ ಹಳ್ಳಿಗಳಲ್ಲಿ ಈ ಬೀಸುವ ಕಲ್ಲನ್ನು ಮನೆ–ಮನೆಗಳಲ್ಲಿ ಕಾಣಬಹುದು.

# ಅಮೇರಿಕನ್ ಲೈಫು – ಶ್ರೀಮತಿ ಶುಭಶ್ರೀ. ಜಿ. ಬೆಳಂದೂರ. ಡೆನ್‌ವೇರ್, ಕೊಲೆರಾಡೊ, ಯು.ಎಸ್.ಎ.

(ನಮ್ಮ ಅಮೇರಿಕಾ ಜೀವನದ ಮೇಲೊಂದು ಇಣುಕು ನೋಟ )

ನನ್ ಗಂಡ ಸವೀತಿದ್ದಾನೆ ಬ್ಯೂಟಿಫುಲ್ ಅಮೇರಿಕನ್ ಲೈಫು
ಜೊತೇಲ್ ಕಟ್ಕೊಂಡ್ ಏಗ್ತಿದ್ದಾನೆ ಒಂದು ಇಂಡಿಯನ್ ವೈಫು
ಮನೇಲೊಂದು ಕುಣೀತಿದೆ ಇಂಡಿಯನ್ ಅಮೇರಿಕನ್ ಕೂಸು
ಅವನ್ಗದಾಗಿದೆ ಆಟದ್ ಗೊಂಬೆ ಮುಗುದ್ ಮೇಲ್ ಆಫೀಸು

ದಿನಾ ಕೆಲ್ಸಕ್ ಹೋಗಿ ಹೋಗಿ ಸವೆಸ್ತಾನೆ ಕಾರಿನ್ ಟೈರು
ಕಂಪ್ಯೂಟರ್ ಮುಂದೆ ಕೂತು ಬೆಳಸ್ತಾನೆ ಕ್ಲೈಂಟಿನ ಪೈರು
ಬೆಳ್ದಿದ್ ಬೆಳೆ ಸರಿ ಇಲ್ದಿದ್ರೆ ಸಿಗೋದಿಲ್ಲ ಪಗಾರ
ಪಾಪ ಇವ್ನೂ ಮಾಡ್ಬೇಕಲ್ಲ ಹೆಂಡ್ತಿ ಮಕ್ಳ ಉದ್ಧಾರ

ಹಗ್ಲೂ ರಾತ್ರಿ ದುಡೀತಾನೆ ಗಾಣದ್ ಎತ್ತಿನ್ ಹಾಗೆ
ಬುದ್ಧಿ ಎಲ್ಲಾ ಖರ್ಚ್ ಮಾಡ್ತಾನೆ ಕುಡೀತಾ ಎಸಿ ಹೊಗೆ
ಹೀಗೇ ದಿನಾ ಕಳೀತಾನೆ ವೀಕೆಂಡನ್ನೇ ಕಾಯ್ತಾ
ಅದಕ್ಕಾಗೆ ಕಾಯ್ತಾ ಇರೋ ಎರ್ಡು ಜೀವಾನ ನೆನೀತಾ

ಇದೇ ಸ್ವರ್ಗ ಅನ್ಕೊಂಡ್ರೂನು ಒಂದೊಂದ್ ಸಲ ಇಣ್ಕುತ್ತೆ ದುಃಖ
ಆವಾಗೆಲ್ಲ ನೆನ್ಪಾಗುತ್ತೆ ಅಲ್ಲಿ ಅನುಭವಿಸಿದ್ ಸುಖ
ಮನಸ್ಸಿನ್ ತುಂಬಾ ಹರಿದಾಡ್ತಾವೆ ಅಲ್ಲಿರೋರ ಮುಖ
ಯಾಕೋ ಅನ್ಸಕ್ ಶುರುವಾಗುತ್ತೆ ಇಲ್ಲೂ ಇದೆ ನರಕ

ಯಾವತ್ತಿದ್ರೂ ಹೋಗ್ಲೇಬೇಕು ಈ ದೇಶಾನ ಬಿಟ್ಟು
ಇಲ್ಲಿರೋ ಸ್ವರ್ಗಾನ ಇಲ್ಲಿಯವ್ರಿಗೇ ಬಿಟ್ ಕೊಟ್ಟು
ಮುಗ್ಯೋ ತನ್ಕಾ ಇರ್ಲೇಬೇಕು ಇಲ್ಲಿಯ ಅನ್ನದ್ ಋಣ
ಆಮೇಲ್ ಹೋಗಿ ತೀರಿಸ್ಬೇಕು ಆ ತಾಯಿಯ ಋಣ

– ೦ –

## ಹೊಸ ವರುಷ ತರಲಿ ನಮಗೆಲ್ಲ ಹರುಷ – ಪ್ರಕಾಶ ಸಿ. ರಾಜಗೋಳಿ, ಬೆಂಗಳೂರು

ಎಲ್ಲರಿಗೂ ಹೊಸ ವರ್ಷದ ಹಾರ್ದಿಕ ಶುಭಾಶಯಗಳು.

ಈ ಲೇಖನದಲ್ಲಿ ನಾನು ಜಗತ್ತಿನಾದ್ಯಂತ ಆಚರಿಸಲ್ಪಡುವ ಹೊಸ ವರ್ಷದ ವಿವಿಧ ಆಚರಣೆಗಳು ಮತ್ತು ಅವುಗಳ ವಿಶೇಷತೆಗಳ ಬಗ್ಗೆ ವಿವರಿಸುವ ಅಲ್ಪ ಪ್ರಯತ್ನ ಮಾಡಿರುತ್ತೇನೆ.

### ಹೊಸ ವರ್ಷದ ಆಚರಣೆಯ ಉಗಮ ಮತ್ತು ಇತಿಹಾಸ:

ನಾಲ್ಕು ಸಾವಿರ ವರ್ಷಗಳಷ್ಟು ಮುಂಚೆ ಪ್ರಾಚೀನ ಬ್ಯಾಬಿಲೋನಿಯನ್ನರು (ಈಗಿನ ಇರಾಕ್ ) ಹೊಸ ವರ್ಷದ ಆಚರಣೆ ಮಾಡುತ್ತಿದ್ದರೆಂದು ತಿಳಿದು ಬಂದಿದೆ. ಕ್ರಿ ಶ ಪೂ 2000 ದಲ್ಲಿ ಚಳಿಗಾಲದ ಮೊದಲ ಪಾಡ್ಯದ ದಿನ (ಸರಿ ಸುಮಾರು ಮಾರ್ಚ್ 1 ನೆ ತಾರೀಖು) ಇದನ್ನು ಆಚರಿಸುತ್ತಿದ್ದರಂತೆ. ಆಗ ಹೊಸ ವರ್ಷದ ಆಚರಣೆ ಹನ್ನೊಂದು ದಿನಗಳದ್ದಾಗಿರುತ್ತಿತ್ತಂತೆ!!

ರೋಮನ್ ನಾಗರೀಕತೆಯಲ್ಲಿ ಮಾರ್ಚ್ ತಿಂಗಳಿನಲ್ಲಿ ಹೊಸ ವರ್ಷದ ಆಚರಣೆಗೆ ನಾಂದಿ ಹಾಡಲಾಯಿತು. ಬೇರೆ ಬೇರೆ ರೋಮನ್ ದೊರೆಗಳಿಂದ ರೋಮನ್ ಕ್ಯಾಲೆಂಡರು ಬಹಳ ಬದಲಾವಣೆ ಕಂಡಿದ್ದರಿಂದ ಕ್ರಿ ಶ ಪೂ 153ರಲ್ಲಿ ಜನೆವರಿ 1 ನ್ನು ಹೊಸ ವರ್ಷದ ಆರಂಭದ ದಿನ ಎಂದು ರೋಮನ್ ಸೆನೆಟು ನಿರ್ಧಾರ ಮಾಡಿತು. ದೊರೆ ಜ್ಯುಲಿಯಸ್ ಸೀಸರ್ ಕ್ರಿ ಶ ಪೂ 46 ರಲ್ಲಿ ಜನೆವರಿ 1 ನ್ನು ಹೊಸ ವರ್ಷದ ಮೊದಲ ದಿನ ಎಂದು ನಿರ್ಧರಿಸಿ ಜ್ಯೂಲಿಯನ್ ಕ್ಯಾಲೆಂಡರಿಗೆ ನಾಂದಿ ಹಾಡಿದ. ರೋಮನ್ನರ ಹೊಸ ವರ್ಷಾಚರಣೆಗೆ ಕ್ಯಾಲೆಂಡುಸ್ ಎನ್ನುತ್ತಾರೆ. ಕ್ರಿಸ್ತನ ಜನ್ಮದಿಂದ ಉದಯಿಸಿದ ಕ್ರಿಸ್ತಿಯನ್ ಧರ್ಮ ರೋಮನ್ನರ ಹೊಸ ವರ್ಷದ ಆಚರಣೆಗೆ ಮೊದಮೊದಲು ವಿರೋಧ ವ್ಯಕ್ತಪಡಿಸಿದರೂ ಕ್ರಮೇಣ ತಮ್ಮ ಚರ್ಚಿನ ಆಚರಣೆಗಳಲ್ಲಿ ಅಳವಡಿಸಿಕೊಳ್ಳತೊಡಗಿದರು. ಹೊಸ ವರ್ಷವೆಂದಾಕ್ಷಣ ನಮಗೆ ನೆನಪಾಗುವದು ಆ ವರ್ಷದಲ್ಲಿ ಏನಾದರೂ ರೆಸಲುಶನ್ ಮಾಡಿಕೊಳ್ಳುವದು ಮತ್ತು ಅದನ್ನು ಪಾಲಿಸಲು ವರ್ಷವಿಡೀ ಹೆಣಗುವದು. ಉದಾಹರಣೆಗೆ ಧೂಮಪಾನ ಬಿಡುವದು, ಮಾಂಸಾಹಾರವನ್ನು ಬಿಡುವದು ಇತ್ಯಾದಿ. ಈ ರೀತಿಯ ಹೊಸ ವರ್ಷದ ರೆಸಲುಶನ್ (ನಿರ್ಧಾರ) ಮಾಡಿಕೊಳ್ಳುವ ಸಂಪ್ರದಾಯ ಬಹಳ ಹಳೆಯದು. ಪ್ರಾಚೀನ ಬ್ಯಾಬಿಲೋನಿಯನ್ನರ ಹೆಸರಾಂತ ಹೊಸ ವರ್ಷದ ರೆಸಲುಶನ್ ಏನಾಗಿರುತ್ತಿತ್ತು ಗೊತ್ತೆ? ಕಡ ತಂದ ರೈತಕಿ ಸಾಮಾನುಗಳನ್ನು ಹಿಂದಿರುಗಿಸುವದು!!!!

ಪ್ರಾಚೀನ ಈಜಿಪ್ತಿನಲ್ಲಿ ಅಲ್ಲಿಯ ಜೀವನಾಡಿ ನೈಲ್ ನದಿಗೆ ಮಹಾಪೂರ ಬಂದಾಗ ಹೊಸ ವರ್ಷ ಆಚರಿಸುತ್ತಿದ್ದರಂತೆ!!! ಇದು ಸೆಪ್ಟೆಂಬರಿನ ಆಸುಪಾಸು ಬರುತ್ತಿತ್ತು. ಅವರು ಮಹಾಪೂರವನ್ನೇ ಏಕೆ ಆಯ್ದುಕೊಂಡಿದ್ದರು ಎಂದರೆ ನೈಲ್ ನದಿ ಉಕ್ಕಿ ಹರಿದರೆ ಮಾತ್ರ ಈಜಿಪ್ತಿನ ಬೆಂಗಾಡಿನಲ್ಲಿ ಜೀವಕಳೆ ಎಂಬ ಕಟುಸತ್ಯವನ್ನು ಆಗಿನವರು ಅರಿತಿದ್ದರು. ಹೊಸ ವರ್ಷದ ದಿನ ಅವರು ತಮ್ಮ ದೇವತೆ ಅಮೊನ್ ಆತನ ಹೆಂಡತಿ ಮತ್ತವನ ಮಗನ ಮೂರ್ತಿಗಳನ್ನು ಹಾಡುತ್ತ ಕುಣಿಯುತ್ತ ನೈಲ್ ನದಿಯಲ್ಲಿ ದೋಣಿಯಲ್ಲಿ ಮೆರವಣಿಗೆ ಮಾಡುತ್ತಿದ್ದರು. ಒಂದು ತಿಂಗಳಿನ ಆಚರಣೆಗಳ ನಂತರ ಮೂರ್ತಿಗಳನ್ನು ವಾಪಸ್ಸು ದೇವಾಲಯಗಳಿಗೆ ತೆಗೆದುಕೊಂಡು ಹೋಗುತ್ತಿದ್ದರು.

ವರ್ಷದ ಆರಂಭದ ದಿನದಂದು ನವಜಾತ ಶಿಶುಗಳ ಪೆರೆಡು ಮಾಡುವ ಸಂಪ್ರದಾಯ ಗ್ರೀಕ್ ಮತ್ತು ಈಜಿಪ್ತಿಯನ್ ನಾಗರೀಕತೆಯಲ್ಲಿ ಇತ್ತಂತೆ. ಹೊಸ ವರ್ಷದ ಹುಟ್ಟು ಮಗುವಿನ ಜನನಕ್ಕೆ ಸಮ ಎಂದು ಅವರು ಭಾವಿಸಿದ್ದರಂತೆ. ಹದಿನಾಲ್ಕನೆಯ ಶತಮಾನದಲ್ಲಿ ನವಜಾತ ಮಗುವಿನ ಬದಲಾಗಿ ಮಗುವಿನ ಚಿತ್ರವಿರುವ ಬ್ಯಾನರುಗಳನ್ನು ಬಳಸಿ ಹೊಸ ವರ್ಷ ಆಚರಿಸುವ ಪದ್ಧತಿ ಅಮೇರಿಕೆಯಲ್ಲಿ ಜಾರಿಗೆ ಬಂದಿತು. ಇದನ್ನು ಜರ್ಮನರು ಅಮೇರಿಕೆಗೆ ಪರಿಚಯಿಸಿದರು ಎನ್ನಲಾಗಿದೆ. ಹೊಸ ವರ್ಷದ ಮೊದಲ ದಿನ ತಾವು ಮಾಡುವ ಕಾರ್ಯಗಳು ಅಥವಾ ತಿನ್ನುವ ಪದಾರ್ಥಗಳು ವರ್ಷ ಪೂರ್ತಿಯ ಶುಭಾಶುಭಗಳಿಗೆ ಕಾರಣವಾಗುತ್ತವೆ ಎಂದು ಸಾಂಪ್ರದಾಯಿಕವಾಗಿ ನಂಬಲಾಗಿತ್ತು.

ಒಂದು ವರ್ಷ ಕಳೆದು ಇನ್ನೊಂದು ವರ್ಷದ ಆರಂಭದ ಪದ್ಧತಿಯಿರುವ ಎಲ್ಲ ಸಂಸ್ಕೃತಿಗಳು ಹೊಸ ವರ್ಷದ ಆಚರಣೆ ಮಾಡುತ್ತವೆ. ನಾವು ವಾಸಿಸುವ ಭೂಮಿ ಸೂರ್ಯನ ಸುತ್ತ ಸುತ್ತಲು ಒಂದು ವರ್ಷದ ಕಾಲ ತೆಗೆದುಕೊಳ್ಳುತ್ತದೆ. ಹೀಗೆ ಪುನರಾವೃತ್ತಿಯಾಗುವ ಸಂದರ್ಭ ಸೂಚಿಸಲು ಹೊಸ ವರ್ಷದ ಆಚರಣೆ ಬಳಕೆಗೆ ಬಂತು.

**ಜಗತ್ತಿನಾದ್ಯಂತ ಹೊಸ ವರ್ಷದ ವಿಭಿನ್ನ ಆಚರಣೆಗಳು:**

**ಜನೇವರಿ 1 :** ಜಾಗತಿಕವಾಗಿ ಮಾನ್ಯವಾಗಿರುವ ಗ್ರಿಗೋರಿಯನ್ ಕ್ಯಾಲೆಂಡರಿನ ಪ್ರಕಾರ ಹೊಸ ವರ್ಷದ ಆರಂಭದ ದಿನ ಜನೇವರಿ 1. (ಜನೇವರಿ ಎನ್ನುವದು ರೋಮನ್ ದೇವತೆ ಜಾನುಸ್ಸನ ನೆನಪಿಗಾಗಿ ಇಡಲಾಗಿದೆ. ರೋಮನ್ನರ ಪ್ರಕಾರ ಜಾನುಸ್ ಎರಡು ತಲೆ ಹೊಂದಿದ್ದು ಒಂದು ತಲೆ ಹಿಂದೆ ಅಂದರೆ ಕಳೆದ ವರ್ಷವನ್ನು ಮತ್ತೆ ಇನ್ನೊಂದು ತಲೆ ಮುಂದಿನ ವರ್ಷವನ್ನು ನೋಡುತ್ತದಂತೆ) ಅಂದು ಸ್ನೇಹಿತರಿಗೆ ಬಂಧುಬಳಗದವರಿಗೆ ಶೇಕ್ ಹ್ಯಾಂಡ್ ಕೊಡುವದರ ಮೂಲಕ, ಫೋನಾಯಿಸುವದರ ಮೂಲಕ, ಈ ಮೇಲ್ ಕಳಿಸುವದರ ಮೂಲಕ, ಗ್ರೀಟಿಂಗ್ ಕಾರ್ಡ್ ಕಳಿಸುವದರ ಮೂಲಕ, ಗಿಫ್ಟಗಳನ್ನು ಕೊಡುವದರ ಮೂಲಕ ಹೊಸ ವರ್ಷವನ್ನು ಸಂಭ್ರಮೋಲ್ಲಾಸಗಳಿಂದ ಆಚರಿಸುತ್ತಾರೆ.

ಜಪಾನಿನಲ್ಲಿ ಜನೇವರಿ 1 ರಂದೆ ಹೊಸ ವರ್ಷ ಆಚರಿಸಿದರೂ ಅದಕ್ಕೆ ತಮ್ಮದೇ ಛಾಪು ಮೂಡಿಸಿರುತ್ತಾರೆ. ಅಂದು ಅವರು ಸುಖ ಸಮೃದ್ಧಿಯ ದ್ಯೋತಕವಾಗಿ ಮತ್ತು ದುಷ್ಟ ಶಕ್ತಿಗಳನ್ನು ದೂರವಿಡಲು ಬಾಗಿಲಿಗೆ ಸ್ಟ್ರಾಗಳಿಂದ ಅಲಂಕೃತ ಹಗ್ಗವನ್ನು ಕಟ್ಟುತ್ತಾರೆ.

**ರೊಶ್ ಹಸನ್ನಾ:** ಜ್ಯೂ ಜನರ ಹೊಸ ವರ್ಷಾಚರಣೆಗೆ "ರೊಶ್ ಹಸನ್ನಾ" ಎನ್ನುತ್ತಾರೆ. ಅಂದು ಸಿನೆಗೊಗ್ ಗಳಲ್ಲಿ ವಿಶೇಷ ಪ್ರಾರ್ಥನಾ ಸಭೆಗಳನ್ನು ಏರ್ಪಡಿಸುತ್ತಾರೆ. ಶೊಫ್ಹರ್ ಎನ್ನುವ ವಾದ್ಯವನ್ನು ನುಡಿಸುತ್ತಾರಲ್ಲದೆ ಮಕ್ಕಳಿಗೆ ಸಿಹಿ ಹಂಚುತ್ತಾರೆ.

**ಚೈನೀಸ್ ಹೊಸ ವರ್ಷ :** ಪ್ರತಿ ವರ್ಷ ಜನೇವರಿ 17 ರಿಂದ ಫೆಬ್ರುವರಿ 19 ರ ನಡುವೆ ಬರುವ ಪಾಡ್ಯದ ದಿನವನ್ನು ಚೈನೀಯರು ಜಗತ್ತಿನಾದ್ಯಂತ "ಯುಆನ್ ಟ್ಯಾನ್"(ಹೊಸ ವರ್ಷದ ದಿನ) ಎಂದು ಆಚರಿಸುತ್ತಾರೆ. ಈ ದಿನ ವರ್ಷದಿಂದ ವರ್ಷಕ್ಕೆ ಬದಲಾಗುತ್ತದೆ. ಮದ್ದು ಸಿಡಿಸುವದು ಮತ್ತು ಪ್ರಭಾತ್ ಫೇರಿಗಳು (ಪೆರೆಡು) ಚೈನೀಸ್ ಹೊಸ ವರ್ಷಾಚರಣೆಯ ಪ್ರಮುಖ ಭಾಗಗಳು. ಸಾವಿರಾರು ಲ್ಯಾಂಟೀನುಗಳ ಮೆರವಣಿಗೆಗಳು ನೋಡುಗರಿಗೆ ಹಬ್ಬ ಎಂದು ಬಣ್ಣಿಸಲಾಗಿದೆ. ದುಷ್ಟ ಶಕ್ತಿಗಳನ್ನು ದೂರವಿರಿಸಲು ಅವರು ಮದ್ದು ಸಿಡಿಸುತ್ತಾರೆ.

**ವಿಯೆಟ್ನಾಮ್ ಹೊಸ ವರ್ಷ :** "ಟೆಟ್ ಗುಯೆನ್ ದಾನ್" ಎಂದು ಕರೆಯಲ್ಪಡುವ ವಿಯೆಟ್ನಾಮ್ ಹೊಸ ವರ್ಷ ಚೈನೀಸ್ ಹೊಸ ವರ್ಷದಂದೆ ಆಚರಿಸಲ್ಪಡುತ್ತದೆ. ಪ್ರತಿಯೊಬ್ಬರ ಮನೆಯಲ್ಲಿ ದೇವರು ವಾಸಿಸುತ್ತಾನೆ ಎಂದು ನಂಬುವ ವಿಯೆಟ್ನಾಮೀಯರು ಹೊಸ ವರ್ಷದ ದಿನ ಆ ದೇವರು ಸ್ವರ್ಗಕ್ಕೆ ಹೋಗಿ ಕಳೆದ ವರ್ಷ ತನ್ನನ್ನು ಹೇಗೆ ನೋಡಿಕೊಂಡರು ಎಂದು ತಿಳಿಸುತ್ತಾನೆ ಎಂದು ನಂಬುತ್ತಾರೆ. ಕಾರ್ಪ್ ಎನ್ನುವ ಮೀನಿನ ಬೆನ್ನ ಮೇಲೆ ದೇವರು ಸ್ವರ್ಗದತ್ತ ಪ್ರಯಾಣ ಮಾಡುತ್ತಾನೆ ಎಂದು ನಂಬಿಕೆ ಇರುವದರಿಂದ ಜೀವಂತ ಕಾರ್ಪ್ ಮೀನುಗಳನ್ನು ಕೆರೆ ಇಲ್ಲವೆ ನದಿಗೆ ಬಿಡುವ ಪರಿಪಾಠ ಇಟ್ಟುಕೊಂಡಿದ್ದಾರೆ. ಹೊಸ ವರ್ಷದ ದಿನ ಆಗಮಿಸುವ ಮೊದಲ ಅತಿಥಿಯ ಕಾಲ್ಗುಣದಿಂದ ಆ ವರ್ಷದ ತಮ್ಮ ನಸೀಬು ನಿರ್ಧಾರವಾಗುತ್ತದೆ ಎಂದು ಅವರು ಬಲವಾಗಿ ನಂಬುತ್ತಾರೆ.

**ಟಿಬೇಟಿಯನ್ ಹೊಸ ವರ್ಷ** : ಜನೇವರಿಯಿಂದ ಮಾರ್ಚ ನಡುವೆ ಆಚರಿಸುವ ಟಿಬೇಟಿಯನ್ ಹೊಸ ವರ್ಷಕ್ಕೆ "ಲೊಸರ್" ಎನ್ನುತ್ತಾರೆ.

ಥಾಯ್‌ಲ್ಯಾಂಡ್ ಮತ್ತು ಕಾಂಬೊಡಿಯನ್ ಹೊಸ ವರ್ಷದ ಆಚರಣೆ 13 ಏಪ್ರಿಲ್ ದಿಂದ 15 ಏಪ್ರಿಲ್ ವರೆಗೆ ಇರುತ್ತದೆ.

ಸೆಪ್ಟೆಂಬರ್ 11 ರಂದು ಇಥಿಯೋಪಿಯದ ಜನರು ಹೊಸ ವರ್ಷವನ್ನು "ಎಂಕುತತಾಷ್" ಎಂದು ಆಚರಿಸುತ್ತಾರೆ.

**ಪರ್ಶಿಯಾ ಹೊಸ ವರ್ಷ :** ಈಗಿನ ಇರಾನ್ ದೇಶದಲ್ಲಿ ಹೊಸ ವರ್ಷವನ್ನು ಮಾರ್ಚ್ 21 ರಂದು ಆಚರಿಸುತ್ತಾರೆ. ಜಗತ್ತಿನಾದ್ಯಂತ ಪ್ರತಿ ವರ್ಷದ ಮೊಹರ್‍ರಂ ಮೊದಲ ದಿನದಂದು ಸುನ್ನಿ ಮುಸಲ್ಮಾನರು ಹೊಸ ವರ್ಷದ ಆಚರಣೆ ಮಾಡುತ್ತಾರೆ.

13ನೆಯ ಶತಮಾನದವರೆಗೆ ಜರ್ಮನಿ ಮತ್ತು ಇಂಗ್ಲಂಡ್‌ನಲ್ಲಿ ಡಿಸೆಂಬರ್ 25ನ್ನು ಹೊಸ ವರ್ಷದ ಆಚರಣೆಗೆ ಬಳಸುತ್ತಿದ್ದರು. 14 ರಿಂದ 16 ನೆಯ ಶತಮಾನದವರೆಗೆ ಈ ಪದ್ಧತಿ ಸ್ಪೇನ್ ದೇಶದಲ್ಲಿ ಬಳಕೆಯಲ್ಲಿತ್ತು.

ಶುಭ ಶುಕ್ರವಾರ ಅಥವಾ ಈಸ್ಟರ್ ಶನಿವಾರಗಳನ್ನು ಹೊಸ ವರ್ಷದ ಮೊದಲ ದಿನ ಎಂದು ಪರಿಗಣಿಸುವ ಪರಿಪಾಠ ಫ್ರಾನ್ಸಿನಲ್ಲಿ 11 ರಿಂದ 16 ನೆಯ ಶತಮಾನದವರೆಗೆ ಜಾರಿಯಲ್ಲಿತ್ತು ಎಂದು ದಾಖಲೆಗಳು ಹೇಳುತ್ತವೆ.

14ನೆಯ ಶತಮಾನದಿಂದ ಗ್ರಿಗೋರಿಯನ್ ಕ್ಯಾಲೆಂಡರ್ ಅಳವಡಿಸಿಕೊಳ್ಳುವವರೆಗೆ ರಷಿಯದಲ್ಲಿ ಸೆಪ್ಟೆಂಬರ್ 1 ರಂದು ಹೊಸ ವರ್ಷದ ಆಚರಣೆ ಮಾಡುತ್ತಿದ್ದರೆಂದು ತಿಳಿದು ಬಂದಿದೆ.

ಪಶ್ಚಿಮದ ಸ್ವಿಡ್ಜರ್‌ಲ್ಯಾಂಡ್ ಮತ್ತು ಆಸ್ಟ್ರಿಯಾ ದೇಶಗಳಲ್ಲಿ ಸಂತ ಸಿಲ್ವಸ್ಟರ್‌ನ ಸ್ಮರಣಾರ್ಥ ಹೊಸ ವರ್ಷದ ಆಚರಣೆ ನಡೆಯುತ್ತದೆ. ಕ್ರಿ ಶ 314 ರಲ್ಲಿ ಸಿಲ್ವಸ್ಟರ್ ಎನ್ನುವ ಸಂತನು ಸಮುದ್ರದ ದೈತ್ಯ ರಾಕ್ಷಸನನ್ನು ಬಂಧಿಸಿ ಜನರಿಗೊದಗಿದ ಸಂಕಷ್ಟಗಳಿಂದ ಪಾರುಮಾಡಿದ್ದನಂತೆ. ಹೀಗೆ ಬಂಧಿಸಲ್ಪಟ್ಟ ರಾಕ್ಷಸ 1000 ನೆಯ ಇಸವಿಯಲ್ಲಿ ಬಂಧಮುಕ್ತನಾಗಿ ಮತ್ತೆ ಕಂಟಕಪ್ರಾಯನಾಗುತ್ತಾನೆ ಎಂದು ನಂಬಲಾಗಿತ್ತು ಆದರೆ ಹಾಗೆ ಆಗದೆ ಇದ್ದಾಗ ಅಲ್ಲಿನ ಜನ ತಮ್ಮ ಹರ್ಷ ವ್ಯಕ್ತಪಡಿಸಲು ಮತ್ತು ಸಂತ ಸಿಲ್ವಸ್ಟರ್‌ನಿಗೆ ನಮಿಸಲು ಸಾಂಪ್ರದಾಯಿಕ ವೇಷ ಭೂಷಣಗಳಿಂದ ಹೊಸ ವರ್ಷವನ್ನು ಆಚರಿಸುತ್ತಾರೆ.

ಗ್ರೀಕ್ ದೇಶದಲ್ಲಿ ಹೊಸ ವರ್ಷವನ್ನು ಕಾರುಣ್ಯಮೂರ್ತಿ ಸಂತ ಬೆಸಿಲ್‌ನ ಸ್ಮರಣಾರ್ಥ ಆಚರಿಸುತ್ತಾರೆ.

ಸ್ಕಾಟ್‌ಲ್ಯಾಂಡಿನಲ್ಲಿ ಹೊಸ ವರ್ಷವನ್ನು "ಹೊಗ್ಮನೆ" ಎಂದು ಕರೆಯುತ್ತಾರೆ. ಅವತ್ತು ಕಳೆದ ವರ್ಷವನ್ನು ದಹಿಸಿ ಹೊಸ ವರ್ಷಕ್ಕೆ ಸ್ವಾಗತಿಸಲು ಟಾರಿನ ಡ್ರಮ್ಮುಗಳಿಗೆ ಬೆಂಕಿಯಿಟ್ಟು ರಸ್ತೆಗುಂಟ ಉರಳಿಸುತ್ತಾರೆ. ಸ್ಕಾಟಿಷ್ ಜನರು ಹೊಸ ವರ್ಷದ ದಿನ ಆಗಮಿಸುವ ಕಪ್ಪು ಕೂದಲಿನ ಮೊದಲ ಅತಿಥಿಯ ಕಾಲ್ಗುಣದಿಂದ ಆ ವರ್ಷದ ತಮ್ಮ ಅದೃಷ್ಟ ಉಜ್ವಲವಾಗುತ್ತದೆ ಎಂದು ಬಲವಾಗಿ ನಂಬುತ್ತಾರೆ.

ಜಗತ್ತಿನಾದ್ಯಂತ ಹೊಸ ವರ್ಷದ ಆಚರಣೆ ಒಂದೇ ದಿನ ಇರದಿರುವದಕ್ಕೆ ಅವರು ಬಳಸುವ ಸೌರಮಾನ, ಚಂದ್ರಮಾನ ಅಥವ ಎರಡು ಸೇರಿರುವ ವಿಭಿನ್ನ ಕ್ಯಾಲೆಂಡರುಗಳೆ ಕಾರಣವಾಗಿವೆ.

ಹೊಸ ವರ್ಷಾಚರಣೆಯ ಅವಿಭಾಜ್ಯ ಅಂಗವಾಗಿ ಸಂತೋಷ ಕೂಟಗಳಲ್ಲಿ ಭಾಗವಹಿಸುವದು, ಮದ್ಯ ಸೇವಿಸುವದು, ಕುಣಿತ ಮತ್ತು ಪ್ರಮುಖ ನಿರ್ಧಾರ ಕೈಗೊಳ್ಳುವದು ಎಲ್ಲೆಡೆ ಸರ್ವೇ ಸಾಮಾನ್ಯವಾಗುತ್ತಿದೆ.

**ಭರತಖಂಡದಲ್ಲಿ ಹೊಸ ವರ್ಷದ ಆಚರಣೆಗಳು:**

"ವಿವಿಧತೆಯಲ್ಲಿ ಏಕತೆ" ನಮ್ಮ ಮೂಲ ಮಂತ್ರವಾಗಿರುವದರಿಂದ ನಮ್ಮಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ಮತ್ತು ಧರ್ಮಗಳಲ್ಲಿ ಹೊಸ ವರ್ಷದ ಆಚರಣೆಗಳು ವಿಭಿನ್ನವಾಗಿವೆ.

ಉತ್ತರ ಭಾರತದಲ್ಲಿನ ಹಿಂದೂಗಳಿಗೆ ದೀಪಗಳ ಹಬ್ಬ ದೀಪಾವಳಿ ಹೊಸ ವರ್ಷಾಚರಣೆಗೆ ಮೀಸಲು. ಪ್ರತಿವರ್ಷ ಅಕ್ಟೋಬರ್ ಕೊನೆಗೆ ಇಲ್ಲವೆ ನವೆಂಬರ್ ಆರಂಭಕ್ಕೆ ಬರುವ ಈ ಹಬ್ಬದಲ್ಲಿ ಸಂಪತ್ತಿನ ದೇವತೆ ಲಕ್ಷ್ಮಿಯ ಪೂಜೆಗೆ ಅಗ್ರಸ್ಥಾನ. ಕೆಡುಕಿನ ಮೇಲೆ ಒಳಿತಿನ ವಿಜಯದ ಸಂಕೇತವಾಗಿ ದೀಪಾವಳಿ ಹಬ್ಬವನ್ನು ಸಡಗರ ಸಂಭ್ರಮಗಳಿಂದ

ಆಚರಿಸುತ್ತಾರೆ. ರಾಮು ತನ್ನ ಮಡದಿ ಸೀತೆಯೊಡನೆ ದೀಪಾವಳಿ ದಿನದಂದು ತನ್ನ ರಾಜ್ಯಕ್ಕೆ ಪುನರಾಗಮಿಸಿದನೆಂದು ಹೇಳಲಾಗಿದೆ.

ಪಂಚನದಿಗಳ ಬೀಡು ಪಂಜಾಬಿನಲ್ಲಿ ಹೊಸ ವರ್ಷವನ್ನು "ಬೈಸಾಕಿ' ಹೆಸರಿನಿಂದ ಪ್ರತಿ ವರ್ಷ ಏಪ್ರಿಲ್ 13 ರಂದು ಆಚರಿಸುತ್ತಾರೆ. ಇದು ಅಲ್ಲಿನ ಬೆಳೆಗಳ ಕೊಯ್ಲಿಗೆ (ಸುಗ್ಗಿ) ಸರಿ ಹೋಗುತ್ತದೆ. ಸಿಖ್ಖರಿಗೆ ಬೈಸಾಕಿ ಹಬ್ಬ ಸುಗ್ಗಿ ಮಾತ್ರವಾಗಿರದೆ ಸಿಖ್ಖ ಗುರು ಗೋವಿಂದಸಿಂಗರು 1699 ರಲ್ಲಿ ಧರ್ಮ ಸೇನೆ ಖಾಲ್ಸಾವನ್ನು ಸ್ಥಾಪಿಸಿದ್ದರಿಂದ ಅತಿ ಮಹತ್ವ ಪಡೆದಿದೆ.

ಕೇರಳದಲ್ಲಿ ಹೊಸ ವರ್ಷವನ್ನು "ವಿಶು" ಹೆಸರಿನಿಂದ ಮಾರ್ಚ್ ಮತ್ತು ಏಪ್ರಿಲ್ ತಿಂಗಳುಗಳ ಮಧ್ಯೆ ಆಚರಿಸುತ್ತಾರೆ. ಇದು ಮಲಯಾಳಿಗಳ ಮೊದಲ ತಿಂಗಳು "ಮೆದಮ್"ನ ಮೊದಲ ದಿನವೂ ಹೌದು. ಹೊಸ ವರ್ಷದ ಮುನ್ನಾ ದಿನ ಕೇರಳಿಗರು ತಾವು ಬೆಳೆದ ಭತ್ತ, ತೆಂಗಿನಕಾಯಿ, ಹಲಸಿನಹಣ್ಣು, ಅಡಕೆ, ಬಾಳೆ ಮುಂತಾದವನ್ನು ಸುಂದರವಾಗಿ ಅಲಂಕರಿಸುತ್ತಾರೆ. ಹೊಸ ವರ್ಷದ ದಿನ ಸೂರ್ಯೋದಯಕ್ಕೆ ಮೊದಲು ನಿನ್ನೆಯ ಅಲಂಕರಣಗಳನ್ನು ಮೊದಲು ನೋಡಿದರೆ ವರ್ಷ ಪೂರ್ತಿ ಶುಭವಾಗುತ್ತದೆ ಎನ್ನುವದು ಅವರ ನಂಬುಗೆ ಹೀಗಾಗಿ ಕಣ್ಣಿಗೆ ಪಟ್ಟಿ ಕಟ್ಟಿಕೊಂಡು ಪಡಸಾಲೆಗೆ ಬಂದು ಧವಸಧಾನ್ಯಗಳ ಸೊಬಗನ್ನು ಸವಿಯುತ್ತಾರೆ. ಕೇರಳದ ಪ್ರಸಿದ್ಧ ದೇವಾಲಯಗಳಾದ ಗುರುವಾಯೂರು, ಶಬರಿ ಮಲೈ ಮತ್ತು ಪದ್ಮನಾಭ ದೇವಾಲಯಗಳಲ್ಲಿ ಅಂದು ವಿಶೇಷ ಪೂಜೆಗಳಿರುತ್ತವೆ.

"ವರ್ಷಪಿರುಪ್ಪು" ಎಂದು ಹೊಸ ವರ್ಷವನ್ನು ತಮಿಳುನಾಡಿನಲ್ಲಿ ಆಚರಿಸುತ್ತಾರೆ. ಇದು ಏಪ್ರೀಲ್ ಮಧ್ಯಭಾಗದಲ್ಲಿ ಬರುತ್ತದೆ. ಬಾಗಿಲೆದುರು ರಂಗೋಲಿ, ಬಾಗಿಲಿಗೆ ತಳಿರು ತೋರಣ, ಮನೆಯಲ್ಲಿ ವಿಶೇಷ ಅಡುಗೆ, ಮನೆಯವರೆಲ್ಲರಿಗೆ ಹೊಸ ಬಟ್ಟೆ ಹೊಸ ವರ್ಷದ ವಿಶೇಷಗಳು. ನಾವು ಯುಗಾದಿಯಲ್ಲಿ ಬೇವು-ಬೆಲ್ಲದ ವಿನಿಮಯ ಮಾಡಿಕೊಳ್ಳುವಂತೆ ಅವರು "ಮಾಂಗಾಪಚಡಿ"ಯನ್ನು ಬಳಸುತ್ತಾರೆ. ವ್ಯಾಪಾರಿಗಳು ತಮ್ಮ ಹೊಸ ಖಾತಾ ಪುಸ್ತಕಗಳನ್ನು ಅಂದು ಆರಂಭಿಸುತ್ತಾರೆ.

ವೈಶಾಖ ಮಾಸದ ಮೊದಲ ದಿನವನ್ನು ಬೆಂಗಾಲಿಗಳು "ನಬ ಬರ್ಷ" ಎಂದು ಹೊಸ ವರ್ಷವನ್ನು ಆಚರಿಸುತ್ತಾರೆ.ಇದನ್ನೆ "ಪೈಲಾ ಬೈಸಾಖ್" ಎಂದು ಬಾಂಗ್ಲಾದೇಶದಲ್ಲಿ ಆಚರಿಸುತ್ತಾರೆ. ಅಂದು ಸರಕಾರಿ ರಜಾದಿನವಾಗಿರುತ್ತದೆ.ಹಾಡು, ಕುಣಿತ, ಗಾಳಿಪಟ ಸ್ಪರ್ಧೆಗಳು, ಎತ್ತಿನ ಷರತ್ತುಗಳು ಈ ಆಚರಣೆಯ ಪ್ರಮುಖ ಆಕರ್ಷಣೆಗಳು. ಅಕ್ಕಿ ಹಿಟ್ಟಿನಿಂದ ಹಾಕಿದ ರಂಗೋಲಿಯ ಮಧ್ಯದಲ್ಲಿ ಕೆಂಪು ಮತ್ತು ಬಿಳಿ ಬಣ್ಣದ ಸ್ವಸ್ತಿಕದ ಮೇಲೆ ಮಣ್ಣಿನ ಮಡಕೆಯಿಟ್ಟು ಅದರಲ್ಲಿ ಗಂಗಾಜಲ ತುಂಬಿ ಮೇಲೆ ಮಾವಿನ ಎಲೆಗಳನ್ನು ಇಡುತ್ತಾರೆ ಮತ್ತು ಹೊಸ ವರ್ಷ ಶುಭ ತರಲಿ ಎಂದು ಮನಸಾ ಪ್ರಾರ್ಥಿಸುತ್ತಾರೆ. ನದಿಯಲ್ಲಿ ಮಿಂದು ಬೆಂಗಾಲಿ ವಿಶೇಷ ಉಡುಗೆ ತೊಟ್ಟ ಹೆಣ್ಣು ಮತ್ತು ಗಂಡು ಮಕ್ಕಳು ನಡೆಸುವ ಪ್ರಭಾತಫೇರಿ ಆಕರ್ಷಕವಾಗಿರುತ್ತದೆ. ಸಂಪತ್ತಿನ ದೇವತೆ ಲಕ್ಷ್ಮಿ ಮತ್ತು ವಿಘ್ನವಿನಾಶಕ ಗಣೇಶನ ಪೂಜೆಗಳೊಂದಿಗೆ ವ್ಯಾಪಾರಿಗಳು ಹೊಸ ವರ್ಷದ ಖಾತಾ ಕಿರ್ದಿ ಪುಸ್ತಕದಲ್ಲಿ ನೋಂದಣಿ ಆರಂಭಿಸುತ್ತಾರೆ. "ಶುಭೋ ನಬೊ ಬರ್ಷೋ" ಎಂದು ಶುಭಾಶಯ ವಿನಿಮಯ ಮಾಡಿಕೊಳ್ಳುತ್ತಾರೆ.

"ನವ್ರೆಹ್" ಇದು ಕಾಶ್ಮೀರದ ಹೊಸ ವರ್ಷ. ಚೈತ್ರ ಮಾಸದ ಮೊದಲ ದಿನ ಇದು ಬರುತ್ತದೆ. ಈ ದಿನ ಸಪ್ತ ಋಷಿ ಸಂವತ್ಸರದ ಮೊದಲ ದಿನವೂ ಹೌದು. ಮೂಲ ಸಂಸ್ಕೃತದ "ನವ್ ವರ್ಷ"ದಿಂದ ನವ್ರೆಹ್ ಉದ್ಭವವಾಗಿದೆ. ಹೊಸ ವರ್ಷದ ಮುನ್ನಾ ದಿನ ಕಾಶ್ಮೀರಿ ಪಂಡಿತರು ವಿಚಾರ್ ನಾಗ್ ಎನ್ನುವ ಪುಷ್ಕರಣಿಯಲ್ಲಿ ಮಿಂದು ಪಾಪ ವಿಮೋಚನೆಗೆ ಪ್ರಾರ್ಥಿಸುತ್ತಾರೆ. ಅಕ್ಕಿ ಹಿಟ್ಟಿನಲ್ಲಿ ಗಿಡಮೂಲಿಕೆಗಳನ್ನು ಸೇರಿಸಿ ತಯಾರಿಸಿದ ಕೇಕನ್ನು ಪ್ರಸಾದವಾಗಿ ಸ್ವೀಕರಿಸುತ್ತಾರೆ. ಕಾಶ್ಮೀರಿ ಪಂಡಿತರ ಕುಲಗುರುಗಳಿಂದ ಪಂಚಾಂಗ ಪಠಣ ನಡೆಯುತ್ತದೆ. ಈ ಪಂಚಾಂಗವನ್ನು ಅಕ್ಕಿ ತುಂಬಿದ ಪಾತ್ರೆಯಲ್ಲಿ ಸುಗಂಧ ಪುಷ್ಪಗಳಿಂದ ಅಲಂಕರಿಸಿ ಮತ್ತೊಂದು ತಟ್ಟೆ ಮುಚ್ಚಿ ಮರುದಿನ ಮುಂಜಾನೆಯವರೆಗೆ ದೇವರೆದುರು ಇಡುತ್ತಾರೆ. ಸಮೃದ್ಧಿಯ ಸಂಕೇತವಾದ ಅಕ್ಕಿ ತುಂಬಿದ ಪಾತ್ರೆಯನ್ನು ಕಾಶ್ಮೀರಿಗಳು ಹೊಸ ವರ್ಷದ ದಿನ ವೀಕ್ಷಿಸುತ್ತಾರೆ. ಹೀಗೆ ಮಾಡುವದರಿಂದ ಮುಂಬರುವ ವರ್ಷ ಶುಭಪ್ರದವಾಗುತ್ತದೆ ಎಂದು ಅವರು ನಂಬುತ್ತಾರೆ. ಶೇರಿಕಾ ದೇವತೆಯ ಪೂಜೆ ಅವತ್ತಿನ ವಿಶೇಷ. ಹೊಸವರ್ಷದ ಮೊದಲ ದಿನದಿಂದ ಆರಂಭವಾಗುವ ನವರಾತ್ರಿ ಹಬ್ಬ ನಮ್ಮಲ್ಲಿನ ನಾಡಹಬ್ಬ ದಸರಾದಂತೆ ಉಪವಾಸ ವ್ರತಾಚರಣೆಗಳಂತೆ ಆಚರಿಸಲ್ಪಡುತ್ತದೆ. ಹೊಸ ವರ್ಷದ ಸಂದರ್ಭದಲ್ಲಿ ವೈಷ್ಣೋದೇವಿಯ ದರ್ಶನ ಪಡೆಯಲಾಗುತ್ತದೆ.

"ಚೇತಿಚಾಂದ್" ಎನ್ನುವದು ಸಿಂಧಿ ಜನರ ಹೊಸ ವರ್ಷ. ಇದು ನಮ್ಮಲ್ಲಿನ ಯುಗಾದಿ ಹಬ್ಬದಂದೇ ಬರುತ್ತದೆ. ಚೈತ್ರಮಾಸದ ಮೊದಲ ದಿನ ಈ ಹಬ್ಬವನ್ನು ಆಚರಿಸುತ್ತಾರೆ. ಸಿಂಧಿ ಭಾಷೆಯಲ್ಲಿ ಚೇತ್ ಎಂದರೆ ಚೈತ್ರ ಎಂದರ್ಥ. ಸಿಂಧಿಗಳು ತಮ್ಮ ಧರ್ಮಗುರು ಝುಲೆಲಾಲನ ಜನ್ಮದಿನವಾಗಿಯೂ 'ಚೇತಿಚಾಂದ್'ನ್ನು ಆಚರಿಸುತ್ತಾರೆ. ಅವತ್ತು ಎಲ್ಲ ಸಿಂಧಿಗಳು ಜೀವದಾಯಿನಿ ಸಿಂಧು (ನದಿ)ವನ್ನು ಪೂಜಿಸುತ್ತಾರೆ. ಕಂಚಿನ ಪಾತ್ರೆಯಲ್ಲಿ ದೀಪ ಬೆಳಗಿಸಿ ಹೂವಿನೊಡನೆ ನೀರಿನಲ್ಲಿ ತೇಲಿಬಿಡುವ ಪರಿಪಾಠವಿದೆ. ಅಂದು ಸಹಸ್ರಾರು ಸಿಂಧಿಗಳು ತಮ್ಮ ಪರಂಪರೆ ಬಿಂಬಿಸುವ ಸ್ತಬ್ಧಚಿತ್ರಗಳೊಂದಿಗೆ ಮೆರವಣಿಗೆ ನಡೆಸುತ್ತಾರೆ.

ಮಹಾರಾಷ್ಟ್ರೀಯರು "ಗುಡಿಪಾಡವಾ" ಎಂದು ಹೊಸ ವರ್ಷವನ್ನು ಆಚರಿಸುತ್ತಾರೆ. ಇದು ನಮ್ಮ ಯುಗಾದಿ ಹಬ್ಬದ ಅನ್ವರ್ಥ. ಹೋಳಿಗೆ, ಸೂಂಠಪಾಕ ಮತ್ತು ಉಸಳಿ ಅಂದಿನ ವಿಶೇಷ ಭಕ್ಷ್ಯಗಳು. ಬೇವು ಬೆಲ್ಲದ ವಿನಿಮಯ ಅಂದಿನ ವಿಶೇಷ. ಉದ್ದನೆ ಬಡಿಗೆಯ ಕೊನೆಗೆ ತಾಮ್ರದ ಇಲ್ಲವೆ ಬೆಳ್ಳಿಯ ತಂಬಿಗೆಯನ್ನು ಡಬ್ಬಹಾಕಿ ರೇಷ್ಮೆ ಇಲ್ಲವೆ ಖಾದಿ ಬಟ್ಟೆಯಿಂದ ಮತ್ತು ತೋರಣಗಳಿಂದ ಅಲಂಕರಿಸಿ ಪೂಜಿಸುತ್ತಾರೆ. ಹೀಗೆ ನಡೆಯುವ ಗುಡಿ ಪೂಜೆ ಅಂದಿನ ಶುಭಸೂಚಕ ದಿನದ ಪ್ರಮುಖ ಆಚರಣೆ. ಸಾಡೇತೀನ್ ಶುಭ ಮುಹೂರ್ತಗಳಲ್ಲಿ ಒಂದಾಗಿರುವ ಯುಗಾದಿಯ ದಿನ ಅನೇಕ ಶುಭ, ಮಂಗಲ ಕಾರ್ಯಗಳನ್ನು ಆರಂಭಿಸುತ್ತಾರೆ. ಶೆಟ್ಟರು ತಮ್ಮ ಖಾತೆ ಕಿರ್ದಿಯ ಹೊಸ ಲೆಖ್ಖ ಬರೆಯಲು ಅಂದಿನಿಂದ ಆರಂಬಿಸುತ್ತಾರೆ. ಬ್ರಹ್ಮ ಜಗತ್ತನ್ನು ನಿರ್ಮಿಸಿದ್ದು ಇದೇ ದಿನ ಮತ್ತು ಮರ್ಯಾದಾಪುರುಷ ರಾಮನು ವಾಲಿಯನ್ನು ಇದೇ ದಿನ ಸಂಹರಿಸಿದನೆಂದು ಹೇಳಲಾಗಿದೆ.

ಆಸ್ಸಾಮಿನ ಜನರು ಎಪ್ರಿಲ್ ಮತ್ತು ಮೇ ಮಧ್ಯದಲ್ಲಿ ಬರುವ ಹೊಸ ವರ್ಷವನ್ನು "ಗೊರುಬಿಹು" ಎಂಬುದಾಗಿ ಆಚರಿಸುತ್ತಾರೆ. ಅಲಂಕೃತ ದನಗಳ ಜಾತ್ರೆ ಅಂದಿನ ವಿಶೇಷ.

ಭಾರತಕ್ಕೆ ಜೆ.ಆರ್.ಡಿ ಟಾಟಾ, ಹೋಮಿ ಜಹಾಂಗೀರ್ ಭಾಭಾ, ರತನ್ ಟಾಟಾ ಮುಂತಾದ ಮೇಧಾವಿಗಳನ್ನು ನೀಡಿದ ಪಾರ್ಸಿ ಧರ್ಮೀಯರು ಹೊಸ ವರ್ಷವನ್ನು "ನವ್ರೊಜ಼್" ಹೆಸರಿನಿಂದ ಪ್ರತಿವರ್ಷ ಮಾರ್ಚ್ 21 ರಂದು ಆಚರಿಸುತ್ತಾರೆ. ಈ ದಿನ ತಳಿರು ತೋರಣ ಕಟ್ಟುವದು, ರಂಗೋಲಿ ಹಾಕುವದು ಹೀಗೆ ಹಲವಾರು ಹಿಂದೂ ಹೊಸವರ್ಷದ ಆಚರಣೆಗಳನ್ನು ಪಾರ್ಸಿಗಳು ಅಳವಡಿಸಿಕೊಂಡಿದ್ದಾರೆ.

ಕೊನೆಯದಾಗಿ ಕರ್ನಾಟಕ ಮತ್ತು ಅಂಧ್ರಪ್ರದೇಶಗಳಲ್ಲಿ ಯುಗಾದಿಯಂದು ಹೊಸ ವರ್ಷದ ಆಚರಣೆ ನಡೆಯುತ್ತದೆ. ವರಕವಿ ಬೇಂದ್ರೆ ಹೇಳುವಂತೆ "ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ..." ದೇವಾಲಯಗಳಲ್ಲಿ ವಿಶೇಷ ಪೂಜೆಗಳು, ಪಂಚಾಂಗ ಪಠಣ/ಶ್ರವಣ ಅಂದಿನ ಪ್ರಮುಖ ಆಕರ್ಷಣೆಗಳು.

ನಿಮಗೆಲ್ಲ ಮತ್ತೊಮ್ಮೆ ಹೊಸ ವರ್ಷದ ಹಾರ್ದಿಕ ಶುಭಾಶಯಗಳು. ಮುಂದಿನ ಯುಗಾದಿ ವಿಶೇಷಾಂಕದಲ್ಲಿ ಮತ್ತೆ ಭೇಟಿ ಆಗೋಣ.

**ಸಂ** — ಪ್ರಸ್ತುತ ಲೇಖನವು ಈ ವರ್ಷದ ಪ್ರಥಮ ದಿನ ಅಂದರೆ ಜನವರಿ 1, 2006ನೇ ತಾರೀಕಿನ ಕರ್ನಾಟಕದ ಪ್ರಮುಖ ದಿನಪತ್ರಿಕೆಗಳಾದ ವಿಜಯ-ಕರ್ನಾಟಕ, ಸಂಯುಕ್ತ-ಕರ್ನಾಟಕ ಹಾಗೂ ಉದಯವಾಣಿಗಳಲ್ಲಿ ಪ್ರಕಟಗೊಂಡಿದೆ.

# ಆರೋಗ್ಯ ಭಾಗ್ಯದ ಪ್ರಾಧಾನ್ಯತೆ – ಶ್ರೀನಿವಾಸ. ಆರ್. ಗುಡಿ. ಯು.ಎಸ್.ಎ.

**ಆರೋಗ್ಯವೇ ಭಾಗ್ಯ** ಅಂತಾ ಯಾರಿಗೆ ತಾನೇ ಗೊತ್ತಿಲ್ಲ. ಆಂಗ್ಲ ಭಾಷೆಯಲ್ಲೂ ಅಂತಾರಲ್ಲ **"Health is Wealth"** ಅಂತ. ಇಲ್ಲಿ ನಾನು ಪ್ರಸ್ತುತಪಡಿಸುತ್ತಿರುವ ವಿಚಾರಗಳು ಎಲ್ಲರಿಗೂ ತಿಳಿದಂತ ವಿಚಾರಗಳೇ. ಸಾಮಾನ್ಯವಾಗಿ ನಾವು ಈ ರೀತಿಯ ಗಂಭೀರ ವಿಷಯಗಳ ಬಗ್ಗೆ ಚರ್ಚಿಸುವುದಿಲ್ಲ. ಹೀಗಾಗಿ ಯಾರು ಎಷ್ಟರಮಟ್ಟಿಗೆ ಆರೋಗ್ಯ-ಪ್ರಜ್ಞೆ ಹೊಂದಿದ್ದಾರೆ ಎಂಬುದು ತಿಳಿಯದ ವಿಷಯ. ಇರುವ ಅಲ್ಪ-ಸ್ವಲ್ಪ ಸಂಪರ್ಕ-ವಿನಿಮಯವನ್ನು ಅವಲೋಕಿಸಿದರೆ, ನನ್ನನ್ನು ಹಿಡಿದುಕೊಂಡು, ಬಹಳ ಜನರಿಗೆ ಇರತಕ್ಕ ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳು ಬೆಳಕಿಗೆ ಬರುತ್ತವೆ. ಆದರೆ ನನ್ನಂತೆ ಯಾರಿಗೂ ಈ ತರದ ವಿಷಯಗಳತ್ತ ಗಮನಹರಿಸಲು ಸಮಯವೇ ಇಲ್ಲ! ಹೋಗಲಿ ಇಂದು ಗಮನ ಹರಿಸಿಯೇ ಬಿಡೋಣ ಅಂತ ಶುರು-ಹಚ್ಚಿಕೊಂಡ ಒಂದು ಚಿಂತನೆಯೇ ಈ ಲೇಖನ..!

ಇವತ್ತು ಆರೋಗ್ಯವೇ ಭಾಗ್ಯ ಅಂತ ಗೊತ್ತಿದ್ದರೂ ಕೂಡ ನಾವು ಅದನ್ನ ಸ್ವಲ್ಪ "ಲೈಟ್" ಆಗಿ ತೊಗೊತೆವಿ. ಎಲ್ಲವೂ ಸರಿ ನಡೆದಾಗ, ನಮ್ಮ ಆರೋಗ್ಯಕ್ಕೇನು ಆಗುತ್ತದೆ ಎಂಬ ಒಂದು ಹುಂಬ ಅಹಂಭಾವ ಮತ್ತು ಅಲಕ್ಷ್ಯದ ಧೋರಣೆ. ನಮಗೆ ಈ 'ಕೊನೆಯ ಆದ್ಯತೆ' ಆರೋಗ್ಯದ ಕಡೆ ಕಾಳಜಿ ಉಕ್ಕುವದು ಅನಾರೋಗ್ಯದಿಂದ ತೀರ ತೊಂದರೆಯಾಗಿ ಇನ್ನೇನು ಆಫೀಸಿಗೆ ಹೋಗಲಿಕ್ಕೆ ಆಗದು ಅಂದಾಗ ಮಾತ್ರ. ಕೆಟ್ಟಾಗ ಮಾತ್ರ ನೆನಪಾಗುವ ಆರೋಗ್ಯ, ಅದು ಕೆಡದಂತೆ ಕಾಪಾಡುವ ಯೋಚನೆಗಳು, ಯೋಜನೆಗಳು ನಮ್ಮ ತಲೆಯೊಳಗೆ ಬರುವದೇ ಇಲ್ಲ. ನಮ್ಮಲ್ಲಿ ಎಷ್ಟೋ ಜನರಿಗೆ ಆರೋಗ್ಯದ ಕಡೆ ತಲೆ ಕೆಡಸಿಕೊಳ್ಳದಿರುವದು, ವೈದ್ಯರು/ಆಸ್ಪತ್ರೆಗಳಿಗೆ ಭೇಟಿ ಕೊಡದೆ ಇರುವದು ಒಂದು ಹೆಮ್ಮೆಯ ವಿಷಯ! ಈ 'ಆರೋಗ್ಯ-ಭಾಗ್ಯ' ವನ್ನು ನಾವು ಲೈಟ್ ಆಗಿ ತೆಗೆದುಕೊಂಡು ಅಲಕ್ಷ್ಯ ಮಾಡಿರುವದಾದರೂ ಏಕೆ? ಈ ಪ್ರಶ್ನೆಗೆ ಉತ್ತರ ಹುಡುಕಲು ನಮ್ಮ ಗಡಿಬಿಡಿಯ ಬದುಕಿನತ್ತ ಒಂದು ಇಣುಕು-ನೋಟ ಹಾಕಿ ಮತ್ತು ಇದಕ್ಕೆ ಏನಾದರೂ ಪರಿಹಾರ ಉಂಟೇ ಅಂತ ಹುಡುಕುವ ಒಂದು ಪ್ರಯತ್ನವನ್ನ ಮಾಡೋಣವೆ?

ಧನ್ಯವಾದಗಳು ಇಂದಿನ ಸ್ಪರ್ಧಾತ್ಮಕ ಮಾಹಿತಿ ತಂತ್ರಜ್ಞಾನ ಉದ್ದಿಮೆ ವಿಕಾಸಕ್ಕೆ, ಇವತ್ತು ನಮ್ಮ ಜೀವನಶೈಲಿ ಹೆಚ್ಚು-ಕಡಿಮೆ ನಮ್ಮ ಉದ್ಯೋಗ-ಶೈಲಿಯಿಂದ ನಿರ್ದೇಶಿಸಲ್ಪಡುತ್ತದೆ. ಈಗ ನಮ್ಮ ಪೀಳಿಗೆ ಮಾಡುವಷ್ಟು ಕೆಲಸ ಭಾರತದ ಇತಿಹಾಸದಲ್ಲಿ ಯಾವ ಪೀಳಿಗೆಯವರೂ ಮಾಡಿರಲಿಕ್ಕಿಲ್ಲ. ಬ್ರಿಟಿಷರು ನಮ್ಮನ್ನು ಆಳಿದಾಗ ಕೂಡ, ಇಷ್ಟು ದುಡಿದಿರಲಿಕ್ಕಿಲ್ಲ ಜನ! ಕೆಲಸದ ಅತಿ-ಹಾವಳಿಯಿಂದ ಜನರಿಗೆ ಸಾಮಾನ್ಯ ಕಾರ್ಯ-ಕೆಲಸಗಳಿಗೆ ಸಮಯ-ಸಂಯಮ ಇಲ್ಲವಾಗಿವೆ. ಎಷ್ಟು ಹೊತ್ತಿಗೆ ತಿನ್ನಬೇಕು, ಎಷ್ಟು ಗಂಟೆಗೆ ಮಲಗಬೇಕು/ಮಲಗಬಾರದು, ಸಿನಿಮಾ/ನಾಟಕಕ್ಕೆ ಹೊಗಬೇಕ/ಬೇಡವಾ, ವೈದ್ಯರ ಹತ್ತಿರ ಚೆಕ್-ಅಪ್‌ಗೆ ಹೊಗಬೇಕಾ/ಬೇಡವಾ , ಇನ್ನು ಅನೇಕ ಸಣ್ಣ-ಪುಟ್ಟ ವಿಷಯಗಳು ನಮ್ಮ ಉದ್ಯೋಗದಲ್ಲಿನ ಗಡಿಬಿಡಿ/ಪುರುಸೊತ್ತು, ಕಾರ್ಯದ ಒತ್ತಡಗಳನ್ನು ಅವಲಂಬಿಸಿರತಕ್ಕ ಅಂಶಗಳು. 'ಅಲೆಮಾರಿ-ಕನ್ಸಲ್ಟಂಟ್'ಗಳಾದರಂತು ಕೇಳುವದೇ ಬೇಡ, ತುರಿಸಿಕೊಳ್ಳುವದಕ್ಕು ಪುರುಸೊತ್ತು ಇರುವದಿಲ್ಲ! ಊರಿನಿಂದ-ಊರಿಗೆ, ಬೇರೆ ದೇಶ/ರಾಜ್ಯಗಳಿಗೆ ಪ್ರಯಾಣಿಸುತ್ತ ಉದ್ಯೋಗ, ವೈಯಕ್ತಿಕ, ಸಂಸಾರಿಕ ಮತ್ತು ಸಾಮಾಜಿಕ ಜೀವನ ಸಂಭಾಳಿಸುವ ಅವರ ಕಲಾತ್ಮಕ ಬದುಕಿನಲ್ಲಿ ಯಾವುದಕ್ಕೆ ಸಮಯ ಸಿಗುವದು/ಸಿಗದಿರುವದು ಎಂಬುದು ಬಹಳ ಸಂಕೀರ್ಣ ವಿಷಯ.

ಇಲ್ಲಿ ನಾನು ಕೊಡುತ್ತಿರುವ ವಿವರಣೆ ಸಾಮಾನ್ಯವಾಗಿ ಇಂದು ನಮ್ಮ **I.T.** ಉದ್ಯೋಗಗಳಲ್ಲಿ ಕಂಡುಬರತಕ್ಕ ಸನ್ನಿವೇಶ. ಕೆಲವು ಸುಖಿ-ಪುರುಷರಿಗೆ/ಮಹಿಳೆಯರಿಗೆ ಇದು ಉತ್ಪ್ರೇಕ್ಷೆ ಅನಿಸಬಹುದು, ಅವರಿಗೆ ಎಲ್ಲ ಅಂಶಗಳು ಅನ್ವಯವಾಗಲಿಕ್ಕಿಲ್ಲ. ಬೆಳಿಗ್ಗೆ ಬೇಗನೆ ಎದ್ದು ತಯಾರಾಗಿ, ಟ್ರಿಮ್ಮಾಗಿ ಹೊರಟರೂ, ರಸ್ತೆಯ ಮೇಲಿನ ವಿಶೇಷ ಮಮತೆಯಿಂದ, ದಿನದ ಒಂದಂಶ ರಸ್ತೆಯಲ್ಲೆ ಕಳೆದು, ಟ್ರಾಫ್ಫಿಕ್ಕಿನ ಚಕ್ರವ್ಯೂಹವ ಭೇದಿಸಿ, ಆಫೀಸಿಗೆ ಆಗಮಿಸುವದರಲ್ಲಿ ಸುಸ್ತೋ-ಸುಸ್ತು! ಈ 'ಕಮ್ಯೂಟ್'ನಲ್ಲಿ ಎಷ್ಟೋ ಜನ ತಮ್ಮ ಆಯುಷ್ಯದ ಮುಖ್ಯ ಭಾಗ ಸವೆಸುತ್ತಾರೆ ಅಂದರೆ ಅತಿಶಯೋಕ್ತಿ ಏನಲ್ಲ! ಈ 'ಕಮ್ಯೂಟ್' ನಲ್ಲಿ, ಕೆಲವೊಂದು ವಾಹನ-ಭರಿತ ನಗರಗಳಲ್ಲಿ, ಮೂಗು/ಗಂಟಲು/ಶ್ವಾಸಕೋಶ/ಹೃದಯಗಳಿಗೆ ವಾಹನಗಳು ಥೂಕರಿಸುವ ಇಂಗಾಲದ ಡೈಯಾಕ್ಸೈಡ್ ಮತ್ತಿತರ ವಿಷಾನಿಲಗಳ ಯಥೇಚ್ಚ ಪೂರೈಕೆ! ಅಷ್ಟು ವಿಷವುಂಡ "ನಂಜುಂಡ" ಗಂಟಲನ್ನು ಕೆರಸುತ್ತ/ಕೆಮ್ಮುತ್ತ, ಸಾಯಂಕಾಲ/ರಾತ್ರಿಯವರೆಗೆ ಆಫೀಸಿನಲಿ ಗಣಕ-ಯಂತ್ರದ ಮುಂದೆ ತಪಸ್ಸು ಮಾಡಿದ್ದೇ ಮಾಡಿದ್ದು!

ಸಾಲದೆ ಮನೆಗೆ ಬಂದು ಅದೇ ಗಣಕ-ಯಂತ್ರದ ಆರಾಧನೆ! ಇದೂ ಸಾಲದ್ದಕ್ಕೆ ನೂರೆಂಟು ಮೀಟಿಂಗ್‌ಗಳು, ಕಾನ್ಫರನ್ಸ್ ಕಾಲ್‌ಗಳು, ಕಾಡುವ ಪ್ರೊಡಕ್ಷನ್ ಸಮಸ್ಯೆಗಳು, ಮಜಾ ಮಾಡಬೇಕಾದ ರಜೆ ದಿನವು ಕೆಲಸದ ಸಜೆ! ಹೀಗೆ ಯಂತ್ರದ ಜೊತೆ ಕೆಲಸ ಮಾಡುತ್ತ ನಾವು ಯಂತ್ರಗಳಾಗುತ್ತಿರುವದನ್ನ ನಮ್ಮ ಪರಿವಾರದವರು ಆಕ್ಷೇಪಣೆ ಮಾಡಿದರೆ, ನಮಗೆ ಎಲ್ಲಿಲ್ಲದ ಕೋಪ!

ಅತ್ತ ಆಫೀಸಿನಲ್ಲಿ ಮೇಲಧಿಕಾರಿ ಅರ್ಥ ಮಾಡಿಕೊಳ್ಳಲಾರ, ಇತ್ತ ಮನೆಯವರು ಅಂಡರ್‌ಸ್ಟ್ಯಾಂಡಿಂಗ್ ಮಾಡಿಕೊಳ್ಳೊದಿಲ್ಲ ಎಂದು ದುಮುಗುಡುವಿಕೆ. ಅದೇ ತಾಪದ-ಲೂಪಿನಲಿ ಶಾಪ ಹಾಕುತ್ತ, ಮತ್ತದೇ ಕೀ-ಬೋರ್ಡ್ ಒತ್ತಿದ್ದೇ ಬಂತು, ಮತ್ತದೆ ಮಾನಿಟರನ್ನ ಕಣ್ಣು ಕೆಕ್ಕರಿಸಿ ದುರುಗುಟ್ಟಿ ನೋಡಿದ್ದೇ ಬಂತು. ಆ ಯಂತ್ರ ಕ್ಯಾಕರಿಸಿ ಉಗಳುವ ವಿಷಕಾರಿ ಎಲೆಕ್ಟ್ರೊ-ಮ್ಯಾಗ್ನೆಟಿಕ್ ತರಂಗಗಳೇ ನಮಗೆ ಪ್ರೀತಿಯ ಪ್ರಸಾದ! ಈ ಮಧ್ಯ ಕೆಲಸದದಲ್ಲಿ ಮೈಮರೆತು, ಕೈ-ಕಾಲು ಮತ್ತಿತರ ಎಲ್ಲ ಅಂಗಾಂಗಗಳಿಗೂ ವಿಪರೀತ ರೆಸ್ಟ್ ಕೊಟ್ಟು, ಏಸಿ ರೂಮ್ನಲ್ಲಿ ಬೆವರು ಬರದಂತೆ, ಬಂದ ಬೆವರೂ ಇಂಗಿ ಹೋಗುವಂತೆ ಕುರ್ಚಿಯಲ್ಲಿ ಕುಕ್ಕರಿಸಿ ಬಿಡುತ್ತೇವೆ.

ನಮ್ಮ 'ಕುರ್ಚಿ-ಪ್ರೀತಿ' ರಾಜಕಾರಣಿಗಿಂತ ಮಿಗಿಲಾದದ್ದು! ಸುಮ್ಮನೆ ಏಕೆ ದೇಹಕ್ಕೆ ತೊಂದರೆ ಅಂತ ಕಾಳಜಿಯಿಂದನೊ ಅಥವಾ ನಮ್ಮ 'ತಾಂತ್ರಿಕ' ಬುದ್ಧಿಯ 'ತಾಂತ್ರಿಕ ದೋಷ'ವೊ, ಒಟ್ಟಿನಲ್ಲಿ ನಾವು ಕುರ್ಚಿ ಬಿಟ್ಟು ಏಳುವದಿಲ್ಲ! ಇಷ್ಟೊಂದು ಐಷಾರಾಮಿ ಆದರೆ ಕೇಳಬೇಕೆ, 'ಬೊಜ್ಜು' ಎಂಬ 'ಕರೆಯದ ಅತಿಥಿ' ಬಂದು ಠಿಕಾಣಿ ಹೂಡುತ್ತಾರೆ! ಶ್ರೀಮಾನ್ 'ಬೊಜ್ಜು' ಒಬ್ಬರೇ ಬರದೆ ಇನ್ನು ಬೇಡದ ಅತಿಥಿಗಳಾದ 'ಜಡ', 'ಆಲಸ್ಯ', 'ರೋಗ-ರುಜಿನ' ಗಳನ್ನೂ ಸಹ ಗುಪ್ತವಾಗಿ ಕರೆತರುತ್ತಾರೆ.

ಇನ್ನು ಸ್ವಲ್ಪ ಔದ್ಯೋಗಿಕ-ಜೀವನ ಮರೆತು ನಮ್ಮ ವೈಯಕ್ತಿಕ-ಜೀವನದತ್ತ ನೋಡಿದರೆ, ಅತಿ-ಪ್ರಿಯವಾದ "ಹರೆಯವು" ನಮಗೆ ಹೇಳದೆ-ಕೇಳದೆ ಮರೆಯಾಗುತ್ತಿದೆ! ಶರವೇಗದಿಂದ ಮಧ್ಯಮ ವಯಸ್ಸು ಧಾವಿಸುತ್ತಿದ್ದರೂ, ಇನ್ನು ನಾವು ಚಿರ-ಯುವಕ "ದೇವಾನಂದ್" ತರ ಡೌಲು ಬಡೀತೇವೆ! ದಶಕಗಳ ಹಿಂದೆ ದೇಹಕ್ಕೆ ಕೊಟ್ಟ "ಕಾಟ/ಪೀಡೆ"ಗಳನ್ನು ಇಂದು ಕೊಡುವದರಲ್ಲಿ ಹಿಂದೆ-ಮುಂದೆ ನೋಡುವದಿಲ್ಲ. ಅತಿಯಾಗಿ ತಿನ್ನುವಿಕೆ, ಏನನ್ನು ತಿನ್ನದೆ ಇರುವಿಕೆ, ನಿದ್ದೆ-ಗೆಡುವದು, ಗಾಣದ ಎತ್ತಿನಂತೆ ಅತಿಯಾಗಿ ದುಡಿಯುವಿಕೆ,
ಮಾನಸಿಕ ಒತ್ತಡಗಳನ್ನು ತಲೆಯ ಮೇಲೆ ಒಟ್ಟಿಕೊಳ್ಳುವಿಕೆ, "ಸ್ವಯಂ ವೈದ್ಯ" ರಾಗಿ ಬೇಕು-ಬೇಕಾದ ಮಾತ್ರೆ-ಔಷಧಿ ಸೇವನೆ, "ಹೆಂಡ್ಕುಡುಕ-ರತ್ನ" ರ ಅತಿ ಕುಡಿತ/ಸೇದುವಿಕೆ ಇತ್ಯಾದಿ, ಇತ್ಯಾದಿಗಳನ್ನು ಪ್ರಾಯಶಃ ಇನ್ನು ದೇಹ ತಡೆದುಕೊಳ್ಳಲಾರದು. ಇಷ್ಟಕ್ಕು ಮಿಕ್ಕಿ ನಾವು ನಮ್ಮ ದೇಹದ ಮೇಲೆ ಅತ್ಯಾಚಾರ ಮುಂದುವರಿಸಿದರೆ ವಿಧ-ವಿಧ ರೋಗಗಳಿಗೆ ನಮ್ಮ ದೇಹ ಒಡೆಯನಾಗುದರಲ್ಲಿ ಸಂದೇಹವೇ ಇಲ್ಲ. ಆಮೇಲೆ ವೈದ್ಯರು, ಆಸ್ಪತ್ರೆಗಳಿಗೆ ಅಲೆದಾಡುವದು ತಪ್ಪಿದ್ದಲ್ಲ. ಈ ವೈದ್ಯರು, ಆಸ್ಪತ್ರೆಗಳು ಅಂದರೆ ಯಾರಿಗೆ ತಾನೆ ಖುಶಿ?

ಒಂದು ಹೇಳಿಕೆ ಇದೆ ವೈದ್ಯರ ಬಗ್ಗೆ,

"ನಮೊ ಎಂಬೆ ಎಲೆ ವೈದ್ಯರಾಜನೆ,
ಯಮರಾಜನ ಹಿರಿ-ಸೋದರನೆ,
ಯಮ ಹೀರಿದರೆ ಪ್ರಾಣ ಮಾತ್ರವನು,
ನೀ ಸೆಳೆಯುವೆ ಕಾಂಚಾಣವನು"!

ವೈದ್ಯ ಮಹಾಶಯರು ಪ್ರಾಣ ಹಿಂಡುವರಲ್ಲದೆ, ಕಾಂಚಾಣವನ್ನು ಕಸಿದುಕೊಳ್ಳುವರೆಂಬ (ಕು)ಪ್ರಸಿದ್ಧಿ ಪಡೆದವರು !

ಕೆಲವು ಜನರ ರೋಗ-ಉಪಚಾರಕ್ಕೆ, ಆರೋಗ್ಯ-ವಿಮೆ ಸಹಾಯಕ್ಕೆ ಬರಬಹುದು, ಇನ್ನು ಕೆಲವರಿಗೆ ಕಂಪನಿಯವರು ವೆಚ್ಚದ ಹೊಣೆಹೊರಬಹುದು.. ಯಾರು ಕವರ್ ಮಾಡಿದರೂ, ಮಾಡದೆ ಇದ್ದರೂ ಅನುಭವಿಸುವವರು ನಾವೇ ತಾನೆ?

ಏನೊ ಗುಣಪಡಿಸುವ ರೋಗವಾದರೆ ಪರವಾಗಿಲ್ಲ, ಜೀವನ ಪೂರ್ತಿ ಔಷಧಿಯೊಂದಿಗೆ ಜೀವನ ಮಾಡುವ ರೋಗಗಳು ಗಂಟು ಬಿದ್ದರೆ ?? ತೀರ ಸಾಮಾನ್ಯವಾಗಿರುವ, ಹೃದಯ-ರೋಗ, ರಕ್ತದ-ಒತ್ತಡ, ಮಧು-ಮೇಹ, ಮೂತ್ರ-ಪಿಂಡದ ಕಾಹಿಲೆ etc. etc. ರೋಗಗಳ ಕಾಕ-ದೃಷ್ಟಿ ಬಿದ್ದರೆ!
ಈ ರೋಗಗಳಿಗೆ ಮುಖ್ಯ ಕಾರಣ ಎಲ್ಲರಿಗೂ ತಿಳಿದೇ ಇದೆ, ಟೆನ್ಶನ್ ಭರಿತ ಜೀವನ ಮತ್ತು ಕೊಲೆಸ್ಟರಾಲ್, ಇವತ್ತು ನಮ್ಮ ಜೀವನದಲ್ಲಿ ಹೇರಳವಾಗಿ ದೊರೆಯುವ ವಸ್ತುಗಳು! ನಾವು ಎಷ್ಟು ಹಣಗಳಿಸಿ ಏನು ಪ್ರಯೋಜನ, ವೃತ್ತಿ-ಜೀವನದಲ್ಲಿ ಎಷ್ಟು ಅಭ್ಯುದಯ ಸಾಧಿಸಿದರೆ ಏನು ಬಂತು, ನಮಗೆ ಆರೋಗ್ಯ ಎಂಬ ಭಾಗ್ಯವಿಲ್ಲದೆ ಹೋದರೆ!

ಒಂದು ಗಾದೆಯಿದೆ ಕನ್ನಡದಲ್ಲಿ "ಹಲ್ಲು ಇದ್ದಾಗ ಕಡಲೆ ಇಲ್ಲ, ಕಡಲೆ ಇದ್ದಾಗ ಹಲ್ಲು ಇಲ್ಲ" ಅಂತ.. ಜೀವನದಲ್ಲಿ ಅತಿಯಾಗಿ ಕಷ್ಟಪಟ್ಟು ಗಳಿಸಿ, ಇನ್ನೇನು ಗಳಿಸಿದ್ದನ್ನ ಅನುಭವಿಸೋಣ ಅನ್ನುವಷ್ಟರಲ್ಲಿ, ಆರೋಗ್ಯ ಕೈ ಕೊಟ್ಟರೆ ನಾವು ಕಷ್ಟಪಟ್ಟಿದ್ದು ಏನು ಪ್ರಯೋಜನ?

ಹೇಗೆ ನಾವು ಹಣಗಳಿಸಲು ಅಥವ ಕರಿಯರ್‌ನಲ್ಲಿ ಮುನ್ನುಗ್ಗಲು ಪ್ರಯತ್ನ ಪಡುತ್ತೇವೊ ಹಾಗೆಯೇ ಆರೋಗ್ಯದ ಭಾಗ್ಯ ಗಳಿಸಲು ಪ್ರಯತ್ನ ಪಡಲೇಬೇಕು. ಹಿತ-ಮಿತವಾದ ಆಹಾರ, ನಿದ್ರೆ, ವ್ಯಾಯಾಮ/ಯೋಗ ದೇಹ/ಮನಕ್ಕೆ ಬೇಕಾದ ಅವಶ್ಯಕತೆಗಳು.

ಒಂದು ಸಣ್ಣ ವಾಕಿಂಗಿನಿಂದ ನಮ್ಮ ದಿನಚರಿ ಆರಂಭಿಸಿದರೆ ಬೆಳಗಿನ ಝಾವದ ತಾಜಾ ಆಮ್ಲಜನಕ ನಮ್ಮ ದೇಹದ ನರ-ನಾಡಿಗಳಿಗೆ ಯಾವ ರೋಗ ಬರದಂತೆ ನಿರೋಧಕ ಶಕ್ತಿ ಕೊಟ್ಟೀತು! ಬೆಳಗಿನ ಝಾವ ಅಂದರೆ ಒಂದು ಘಟನೆ ನೆನಪಿಗೆ ಬಂತು. ಮೊನ್ನೆ ಗುರು ಆಮೆರಿಕಕ್ಕೆ ಬಂದಾಗ, ಇಲ್ಲಿ ಜನರು ಬೆಳಿಗ್ಗೆ, ಮಧ್ಯಾಹ್ನ, ಸಾಯಂಕಾಲಗಳ ಲೆಕ್ಕಿಸದೆ, ಸುಡುವ ಬಿಸಿಲು/ಕೊರೆವ ಛಳಿಯಲ್ಲು, ಓಡುವದನ್ನ ಕಂಡು, "ಹೊತ್ತು ಗೊತ್ತು ಇಲ್ಲ ಮುಂಡೆವಕ್ಕೆ, ಬ್ಯಾರೆ ಕೆಲಸ ಇಲ್ಲೇನು ಇವಕ್ಕ, ಶೀನಣ್ಣಾ" !? ಅಂತ ಉದ್ಗಾರಿಸಿದ!

ನನಗೂಇಲ್ಲಿ ಮೊದಲಿಗೆ ಬಂದಾಗ ಅದೆ ರೀತಿ ಅನಿಸುತಿತ್ತು. ಯಾಕಂದರೆ ನಮ್ಮ ಪ್ರಕಾರ ಈ ವಾಕಿಂಗ,ಜಾಗಿಂಗ್ ಎಲ್ಲ ಬೆಳಗಿನ ಸಮಯಕ್ಕೇ ಸೀಮಿತವಾದದ್ದು! ಬೆಳಿಗ್ಗೆ ಸಮಯ ಸಿಗದಿದ್ದರೆ, ಮುಂದೆ ಅದೇ ನೆಪದಿಂದ ಏನನ್ನು ಮಾಡದಿರುವದು, ಇದು ನಮ್ಮ ಅಂತರಾಳದ ಉದ್ದೇಶವಿರಬಹುದು! ಬೆಳಗಿನ ಸಮಯ ಶ್ರೇಯಸ್ಸರವಾದರೂ, ನಮಗೆ ಯಾವಾಗ ಸಮಯ ಸಿಕ್ಕುತ್ತೊ, ಆವಾಗ ಮಾಡುವದು ಒಳ್ಳೆಯದು.

ವ್ಯಾಯಾಮ ಶಾಲೆ/ಜಿಮ್‌ಗಳಿಗೆ ಸೇರಿಕೊಂಡು ಒಂದು ಅರ್ಧ ಗಂಟೆ ಕಸರತ್ತು ಮಾಡಿ, ಸ್ವಲ್ಪ ಕ್ಯಾಲರೀಸ್‌ನ ಸುಟ್ಟರೆ, ನಮ್ಮ ದೇಹದಲ್ಲಿ ಸಂಚಿತ ಆಗಿರುವ "ಬೊಜ್ಜು" ಸ್ವಲ್ಪ ಮಟ್ಟಿಗಾದರೂ ಕರಗುವ ಅವಕಾಶ ಸಿಕ್ಕೀತು! ಅಲ್ಲದೇ ನಮ್ಮ ದೇಹದ ಅಂಗಾಂಗಳು ಸ್ವಲ್ಪವಾದರೂ ಚೇತನ ಪಡೆದುಕೊಂಡಾವು!

ಸ್ವಲ್ಪ ನಮ್ಮ 'ಕುರ್ಚಿ ಪ್ರೀತಿ' ಕಡಿಮೆ ಮಾಡಿ, ಗಂಟೆಗೊಮ್ಮೆ, ನೀರಿಗೊ, ಚಹಾ/ಕಾಫ್ಹೀಯ ನೆವದಿಂದ ಎದ್ದು, ಅಕ್ಕ-ಪಕ್ಕದ ಸಹೋದ್ಯೋಗಿಗಳ ಜೊತೆ ಸ್ವಲ್ಪ ಹರಟೆ ಹೊಡದು (?), ಕಣ್ಣಿಗೆ ವಿಶ್ರಾಂತಿ ಕೊಟ್ಟರೆ, ವರ್ಷದಿಂದ ವರ್ಷಕ್ಕೆ ಕನ್ನಡಕದ ನಂಬರ್ ಹೆಚ್ಚಾಗಲಿಕ್ಕಿಲ್ಲ!

ಬಿಟ್ಟು ಬಿಡದೆ ವರ್ಷಕ್ಕೆ ಒಮ್ಮೆ ಸಂಪೂರ್ಣ ದೇಹ ಚೆಕ್-ಅಪ್ ಮಾಡಿಸುವದು ಒಳ್ಳೆಯ ವಿಚಾರ. ಈ ತರದ ಚೆಕ್-ಅಪ್, ನಮ್ಮ ಸ್ವಾಸ್ಥ್ಯದಲ್ಲಿ ಏನಾದರು ಏರು-ಪೇರಿನ ಲಕ್ಷಣಗಳಿದ್ದರೆ ಒಂದು ಮುನ್ಸೂಚನೆ ಕೊಟ್ಟು, ಬರಲಿರುವ ಅಪಾಯ ಎದುರಿಸಲು ನಮ್ಮನ್ನು ಸಜ್ಜುಗೊಳಿಸಬಹುದು ಅನ್ನುವ ಯೋಚನೆ.

ಇದೆಲ್ಲ ಮಾಡಲು ಟೈಮ್ ಎಲ್ಲಿದೆ ಅಂತೀರ? ಟೈಮ್ ಮಡಿಕೊಳ್ಳಲೆಬೇಕು.. "ವಕ್ಥ್ ಹೋತಾ ನಹಿ, ನಿಕಾಲನಾ ಪಡತಾ ಹೈ" ಅನ್ನೊ ತರ.. ನಮಗಾಗಿ ಅಲ್ಲದಿದ್ದರೂ ನಮ್ಮನ್ನೇ ನಂಬಿದ ಮಕ್ಕಳು/ಪರಿವಾರಕ್ಕೋಸ್ಕರವಾಗಿಯಾದರೂ ನಾವು

ಸ್ವಲ್ಪ ಟೈಮ್ ಫ್ರೀ ಮಾಡಿಕೊಳ್ಳಲೇಬೇಕು. ಈ ಐ.ಟಿ.ಯಲ್ಲಿ ಕೆಲವೊಂದು ಉದ್ಯೋಗಗಳು ಇಷ್ಟು ದುಡಿಸಿ ಬಿಡುತ್ತವೆ ಅಂದರೆ ಮತ್ತೆ ವ್ಯಾಯಾಮ ಮಾಡುವದಾಗಲಿ ಆರೋಗ್ಯದ ಕಡೆಗೆ ಲಕ್ಷ ಹರಿಸುವದಾಗಲೀ ಪ್ರ್ಯಾಕ್ಟಿಕಲಿ ಸಾಧ್ಯವೆ ಆಗುವದಿಲ್ಲ. ನಮಗೋ ಈ ಸಂಕೀರ್ಣಮಯ ಜಗತ್ತಿನಲ್ಲಿ ದೊಡ್ಡ ಗೊಂದಲ, ಜೀವನ ಮಾಡುವದಕ್ಕಾಗಿ ಹೊರಾಡಬೇಕೊ ಅಥವ ಹೊರಾಟ ಮಾಡುವದಕ್ಕಾಗಿ ಜೀವನ ಮಾಡಬೇಕೊ?

"ಕಾಯಕವೇ ಕೈಲಾಸ" ಎಂದು ಶರಣರು ಸಾರಿದ್ದರೂ ಈ ಬಂಡವಾಳ-ಶಾಹಿ ಸಂಸ್ಥೆಗಳಿಗೆ ಶರಣಾಗಿ 'ಮೈ-ಕೈ-ಲಾಸ್' ಮಾಡಿಕೊಂಡು ದುಡಿಯವದರಲ್ಲಿ ಅರ್ಥವಿದೆಯೆ? "ಕೈ ಕೆಸರಾದರೆ ಬಾಯಿ ಮೊಸರು" ಎಂಬ ಗಾದೆ ನಿಜವಾದರೂ "ಕೆಸರಿನಲ್ಲಿಯೇ ಜೀವನ ಮಾಡು" ಅಂತ ಈ ಗಾದೆ ಬರೆದವರು ಹರಸಲಿಲ್ಲ. ಮೊಸರಿಗಾಗಿ ಕೆಸರು, ಜೀವನ ಮಾಡುವದಕ್ಕಾಗಿ ಹೋರಾಟ, ಇದನ್ನ ನಾವು ಸ್ಪಷ್ಟವಾಗಿ ತಿಳಕೊಬೇಕು.


ಈ ಬಂಡವಾಳಶಾಹಿ ಉದ್ಯೋಗಗಳು ಸ್ವಲ್ಪ ಜಾಸ್ತಿ ದುಡಿಸಿಕೊಂಡರು ಎಲ್ಲ ಕೆಲಸಗಳು ಅದೇ ರೀತಿ ಇರುವದಿಲ್ಲ. ಬಂಡವಾಳಶಾಹಿ ಸಂಸ್ಕೃತಿಯ ಒಂದು ಮೆಚ್ಚಬೇಕಾದ ಅಂಶ ಅಂದರೆ ಇವತ್ತು ನಮಗೆ ಉದ್ಯೋಗದಲ್ಲಿ ಇರುವ ಅವಕಾಶಗಳು. ಸ್ವಲ್ಪ ಕಣ್ಣು ತೆರೆದು ನೋಡಿದರೆ ಬೇಕಾದಷ್ಟು ಕೆಲಸಗಳು ಗೋಚರಿಸುತ್ತವೆ. ನಮ್ಮ ಹಳೆಯ ತಲೆಮಾರಿನಂತೆ ನಾವು ಹಿಡಿದ ಕೆಲಸದಲ್ಲಿಯೇ ನಿವೃತ್ತಿ ಆಗಬೇಕೆನ್ನುವ ಕಡ್ಡಾಯ ನಿಯಮವೇನೂ ಇಲ್ಲ. ಸ್ವಲ್ಪ ಸಂಶೋಧನೆ ಮಾಡಿ, ಕಡಿಮೆ ಕೆಲಸ ಇರುವ ಕೆಲಸ ಆಯ್ಕೆ ಮಾಡಿಕೊಳ್ಳಬಹುದು. "ಜೀತ ಪದ್ಧತಿ" ಶತಮಾನದಿಂದಲು ನಡೆದು ಬಂದಿದೆ. ಕೆಲವೊಮ್ಮೆ ನೀಲಿ ಕಾಲರ್, ಕೆಲವೊಮ್ಮೆ ಬಿಳಿ ಕಾಲರ್!

ನಾವು ನಮಗೆ ಹಾಕಿಕೊಳ್ಳಬೇಕಾದ ಪ್ರಶ್ನೆ "ನಾವು ಜೀತ ಮಾಡಲೇಬೇಕ"? ಅಥವ ಬೇರೆ ಏನಾದರೂ ಮಾರ್ಗ ಉಂಟಾ?

ಇರಲಿ ನಾನು ವಿಷಯಾಂತರ ಮಾಡುತ್ತಿದ್ದೇನೆ.. ವಿಷಯ ಇಷ್ಟೆ, ಉದ್ಯೋಗ ಹೋದರೆ ಮತ್ತೆ ಪಡಕೊಬಹುದು, ಆರೋಗ್ಯ ಹೋದರೆ ಬರದು. ಒಂದು ದಶಕದ ಹಿಂದೆ ನಮಗೆ ಒಂದಿಷ್ಟು ಆರೋಗ್ಯ-ಪ್ರಜ್ಞೆ ಜಾಗೃತವಾಗಿದ್ದರೆ ಎಷ್ಟೊ ಚೆನ್ನಾಗಿರುತಿತ್ತು! ಕಾಲ ಇನ್ನು ಮಿಂಚಿಲ್ಲ, ಆರೋಗ್ಯಕರ ಪ್ರಕೃತಿ ಹೊಂದಲು, ಸದೃಢ-ಕಾಯ ಬೆಳೆಸಿಕೊಳ್ಳಲು ಇನ್ನು ಅವಕಾಶವಿದೆ.
ಈಗ ಸ್ವಲ್ಪ ಕಷ್ಟಪಟ್ಟು ಪ್ರಯತ್ನಿಸಿದರೆ ಮುಂದೆ ಈ ವಿಷಯದ ಬಗ್ಗೆ ನಾವು ಹಳಹಳಿಸಬೇಕಾಗಿಲ್ಲ.
ಈ ಒಂದು ಅಂಶವನ್ನು ಗಮನದಲ್ಲಿ ಇಟ್ಟುಕೊಂಡು ಹೊಸ ವರುಷದಾ ಆರಂಭದಲಿ ನಮ್ಮ ಆರೋಗ್ಯ-ವರ್ಧನೆಗೆ ಒಂದು ಧೃಢ ಸಂಕಲ್ಪ ಮಾಡೋಣವೆ? ನಮ್ಮ ದೇಹ/ಮನಸ್ಸಿಗೆ ಆರೊಗ್ಯಕರ ಪ್ರವೃತ್ತಿಗಳನ್ನ ಬೆಳೆಸಿಕೊಳ್ಳುವತ್ತ, ಆರೋಗ್ಯ ಅಭಿವೃದ್ಧಿಯ ಕಡೆ ಮೊದಲ ಆದ್ಯತೆ ನೀಡೋಣವೆ?
ಆರೋಗ್ಯ-ಅಭಿವೃದ್ಧಿಯ ಚಿಂತನೆ ಮತ್ತು ಪ್ರಯತ್ನಗಳು, ಒಮ್ಮೆ ಹುರುಪು ಬಂದು ಮಾಡಿ ಮರೆಯುವ ಆರಂಭ-ಶೂರತನವಾಗದೆ, ಈ ಪತ್ರಿಕೆಯ ಹೆಸರಿನಂತೆ, ಇದೊಂದು "ನಿರಂತರ " ಪ್ರಕ್ರಿಯೆಯಾಗಬೇಕು , ನಮ್ಮ ಬದಲಾದ ಜೀವನ-ಶೈಲಿ ಆಗಬೇಕು. ಆಗಲೇ ಬದುಕಿಗೊಂದು ಅರ್ಥ.. !

ಸಕಲರಿಗೂ ಈ ಹೊಸ-ವರುಷ, 2006, ಆರೋಗ್ಯ-ಪೂರ್ಣ ವರುಷವಾಗಲಿ ಮತ್ತು ಆ ಆರೋಗ್ಯ-ಭಾಗ್ಯದ ಬೆಳಕಿನ ಹರುಷ ನಿಮ್ಮ ಬದುಕಿನ ಎಲ್ಲ ರಂಗಗಳಲ್ಲಿ ಪ್ರತಿಫಲಿಸಲಿ.

## ಟಿಪಿಬಳಗ ಪದಬಂಧ – ಗಿರೀಶ ಎಸ್. ಬೆಳಂದೂರ(ಸದ್ದಾಮ್). ಯು.ಎಸ್.ಎ




**<u>ಅ) ಎಡದಿಂದ ಬಲಕ್ಕೆ</u>**

1. ಟೀಪಿ ಬಳಗಕ್ಕೆ ಇವನ "ರುಣ" ತೀರಿಸಲು "ನಸುಕಿ" ನಿಂದಲೇ ದುಡಿಯಬೇಕು (3)
4. "ಪೂರ್ಣ ನಿಂತ" ಈ ಬಳಗದ ಮೌನ ಸದಸ್ಯನ ತಮ್ಮ (2)
5. ಟೀಪಿ ಬಳಗ ಕುವೆಂಪು (2)
6. "।??%?*(≤!?" ಇವನ ಊರು (4)
7. ವಿದೇಶೀ ಕ್ಲೈಂಟ್‌ಗೆ ಆಟೋ ಸವಾರಿ ಮಾಡಿಸಿದ ತಾರೆ (5)
8. ಕೃಷ್ಣನ ಗೆಳೆಯ ಹೆಸರು ತಿರುಚಿ ಬಳಗ ಸೇರಿದ (3)
10. ನಮ್ಮ ಟಿಟಿ ತಾರೆ ತಾಹಿರನಿಗೆ.. ಇಲ್ಲಿ ಟಿಟಿ ಆಡೋದು ಅಂದ್ರ ಭಾಳ ಖುಶಿ. (2)
12. ನಮ್ಮ ಹಿರೇಮಠ ಮತ್ತು ಮೆಟಗುಡಮಠ ಇಬ್ಬರೂ ಕೂಡಿ ಒಂದು ಕಂಪನಿ ತೆಗದರೆ ಹೀಗೆ ಹೆಸರಿಡುವರೇನೋ (6)
14. "ಝಾಡಿಸಿ" ಅಂದಕೂಡಲೇ ನೆನಪಾಗುವರೇ ಈ ತಾರೆ (2)
17. ಮಾಜಿ ಎಣ್ಣೆ ದೊರೆಯ ಹೆಂಡತಿ(2)
18. "ಈ ಮಿತ್ರನಿಗೂ" ವರ್ಲ್ಡ್ ದಿಸ್ ವೀಕ್ ಗೂ ಏನು ಸಂಬಂಧ (4)

**ಬ) ಮೇಲಿನಿಂದ ಕೆಳಕ್ಕೆ**

1. ಬಳಗದ ಡಾ॥ ರಾಜ್‌ಕುಮಾರ್ ಮತ್ತು ಮಾಸ್ತರ್ (4)
2. ಬೆಳಕಿನ ಮುಂದೆ ರಾಜ, ರಾಜನ ಮುಂದೆ ಕೊಂಬು ಎಳೆದಾಡಿದ ಎತ್ತು, ಇವನೇ ನಮ್ಮ ಬಳಗದ ಚುರುಕಾದ ಸದಸ್ಯ (7)
3. ಈ ಸ್ವಾಮಿ, ಗುಡಿ ಬರೆಯುವ ಪುಟಗಟ್ಲೆ ಇರುವ ಈ-ಮ್ಯೆಲ್ ನೋಡಿದರೆ, ಇದು ನೆನಪಾಗುವುದು (4)
9. ಹೆಸರಿಗೆ ಮಾತ್ರ ಸ್ನೇಹ ಉಳಿಸಿಕೊಳ್ಳುವ "ಮಿತ್ರ" ರಿಗೆ ಕಟ್ಟಿ ಕರೆದದ್ದು ಹೀಗೆ! (4)
11. ಟೆಣ ಟೆಣವ್ .. ಡಿಶ್ಕೆವ್.. ಡಿಶ್ಕೆವ್ _007 (2)
13. ಬಳಗದ "ಹೊಳೆ"ಯುವ ತಾರೆ (2)
14. ಬಳಗದ ಏಕಮಾತ್ರ ಡೈರೆಕ್ಟರ್ (3)
15. ಎಲ್ಲರ ಮನೆಯಲ್ಲಿ ಹೊಸ ವರುಷಕ್ಕೆ ಒಂದೇ ಸೆಲೆಬ್ರೇಶನ್, ಇವರ ಮನೆಯಲ್ಲಿ ಎರಡು ಸೆಲೆಬ್ರೇಶನ್(2)
16. ಮೂರ್ತಿ ಚಿಕ್ಕ ದಾದರೂ ಕೀರ್ತಿ ದೊಡ್ಡದು ಈ ನಮ್ಮ ರಾಮ ಭಕ್ತನಿಗೆ (2)

**ಉತ್ತರಗಳು :** ಮಾರ್ಚ್‌ನಲ್ಲಿ ಹೊರಬರಲಿರುವ ನಿರಂತರದ ಯುಗಾದಿ ಸಂಚಿಕೆಯಲ್ಲಿ.

## ಕವನ – ಶ್ರೀಮತಿ ಶುಭಶ್ರೀ. ಜಿ. ಬೆಳಂದೂರ. ಡೆನ್‌ವೇರ್, ಕೊಲೆರಾಡೊ, ಯು.ಎಸ್.ಎ.

ವಿಷಯವೇಕೆ ಕವನಕೆ
ಮನದ ಭಾವ ರೂಪಕೆ

ಹೆಪ್ಪುಗಟ್ಟಿ ಕೂತ ನೆನಪು
ಚೆಲುವಿಗಿರುವ ಆ ಒನಪು
ಪ್ರಕೃತಿಯ ಈ ಸೊಬಗು
ನಾಳೆಗಳ ಹೊಸ ಬೆಳಗು

ಕಾಣುತಿರುವ ಹಗಲುಗನಸು
ಕಂಡ ಕನಸು ಆದ ನನಸು
ಆಗದಿರಲು ಬಂದ ಮುನಿಸು
ಜೀವನದ ಈ ಸೊಗಸು

ಎಲ್ಲ ಕುಳಿತು ಎದೆಯಲಿ
ಇಟ್ಟರೊಮ್ಮೆ ಕಚಗುಳಿ
ಕೊಟ್ಟಂತೆಯೆ ಆಹ್ವಾನ
ಬರೆಯಲೊಂದು ಕವನ!

## ಅಂಬಿಗನ ಹಾಡು – ಸಂಗ್ರಹ : ಶ್ರೀಮತಿ. ಶಾಂತಾ ಸಿ ರಾಜಗೋಳಿ, ಧಾರವಾಡ

**ಹಿಂದಿನ ಕಾಲದಲ್ಲಿ ಹಳ್ಳ, ಹೊಳೆ, ನದಿಗಳನ್ನು ದಾಟಲು ಹರಿಗೋಲು, ನಾವು, ತೆಪ್ಪ ಮುಂತಾದವನ್ನು ಬಳಸುತ್ತಿದ್ದರು. ಈ ಹಾಡಿನಲ್ಲಿ ಅಂಬಿಗನ ಕಾಮುಕ ದೃಷ್ಟಿಗೆ ಬಲಿಯಾದ ಮಾನವಂತ ಹೆಣ್ಣೊಬ್ಬಳು ಯಾವ ರೀತಿ ಅವನನ್ನು ಮಾನ ಕಾಪಾಡಿಕೊಳ್ಳಲು ಬೇಡಿಕೊಳ್ಳುತ್ತಾಳೆ ಮತ್ತು ಕೊನೆಗೆ "ಪ್ರಾಣಕ್ಕಿಂತ ಮಾನ ಮುಖ್ಯ" ಎಂದು ಯಾವ ರೀತಿ ದಾರುಣ ಅಂತ್ಯ ಕಾಣುತ್ತಾಳೆ ಎನ್ನುವದನ್ನು ಮಾರ್ಮಿಕವಾಗಿ ಚಿತ್ರಿಸಲಾಗಿದೆ.**

ಒಡೆವ ತೆಂಗಿನಕಾಯಿ ಮೇಲೆ ಹೂವಿನ ಹಾರ
ಅದನೆಲ್ಲಾ ನಿನಗೆ ಕೊಡುವೆನೊ
ಅಂಬಿಗರಣ್ಣಾ ತುಂಬಿ ಸಾಗಲಿ ಹರಿಗೋಲ...

ಮಸರ ಕಲಸಿದ ಬುತ್ತಿ ಎಸೆಳ ಲಿಂಬಿ ಹೊಳಾ
ಅದನೆಲ್ಲಾ ನಿನಗೆ ಕೊಡುವೆನೊ
ಅಂಬಿಗರಣ್ಣಾ ತುಂಬಿ ಸಾಗಲಿ ಹರಿಗೋಲ...

ಎಳ್ಳ ಹಚ್ಚಿದ ರೊಟ್ಟಿ ಎಣ್ಣೆ ಬದನಿಕಾಯಿ
ಅದನೆಲ್ಲಾ ನಿನಗೆ ಕೊಡುವೆನೊ
ಅಂಬಿಗರಣ್ಣಾ ತುಂಬಿ ಸಾಗಲಿ ಹರಿಗೋಲ...

ಅಕ್ಕ ತಂಗೆರು ಆರು ಮಂದಿ ನನ್ನ ಕೂಡಿ ಏಳು ಮಂದಿ
ಅವರೆಲ್ಲ ಹೊಳೆಯ ದಾಟಿದರೊ
ಅಂಬಿಗರಣ್ಣಾ ತುಂಬಿ ಸಾಗಲಿ ಹರಿಗೋಲ...

ಜರದ ರುಮಾಲಿನವರು ಅವರೆಲ್ಲ ನಮ್ಮ ಅಣ್ಣಗೊಳು
ಅವರೆಲ್ಲ ಹೊಳೆಯ ದಾಟಿದರೊ
ಅಂಬಿಗರಣ್ಣಾ ತುಂಬಿ ಸಾಗಲಿ ಹರಿಗೋಲ...

ಅತ್ತಿ ಮಾವರು ಹಾಕಿದಂತಾ ಆರುಸೇರು ಬಂಗಾರ
ಅದನೆಲ್ಲ ನಿನಗೆ ಕೊಡುವೆನು
ಅಂಬಿಗರಣ್ಣಾ ತುಂಬಿ ಸಾಗಲಿ ಹರಿಗೋಲ...

ಅಷ್ಟು ದಾಗಿನ ಉಚ್ಚಿಕೊಂಡು ಸೀರಿ ಸೆರಗಿಗೆ ಕಟ್ಟಿಕೊಂಡು
ಅಂತರಲಿ ನಾವ ಜಿಗಿದಾಳೊ
ಅಂಬಿಗರಣ್ಣಾ ತುಂಬಿ ಸಾಗಲಿ ಹರಿಗೋಲ...

ನಾರಿ ಮುಳುಗಿದಲ್ಲಿ ನಲವತ್ತು ಬಾರಿ ಮುಳುಗಿ
ನಾರಿ ನಿನ ಸೆರಗ ಸಿಗಲಿಲ್ಲಾ

ಅಂಬಿಗರಣ್ಣಾ ತುಂಬಿ ಸಾಗಲಿ ಹರಿಗೋಲ...

## ಸರಸ್ವತಿ ಪ್ರಾರ್ಥನೆ – ಪ್ರಶಾಂತ ಶಿವಶಂಕರ, ಬೆಂಗಳೂರು

ನಿನ್ನ ನಾದ ಎನ್ನ ಅಂತಃಕರಣ ಆಲಿಸಲಿ ತಾಯಿ
ಅಧೋಮುಖದಿಂದ ಊರ್ಧ್ವಮುಖದೆಡೆಗೆ ಚಲಿಸಲಿ

ನಿನ್ನ ರೂಪ ಬೆಳಗಲಿ ಎನ್ನ ಅಂತರ್ವರ್ಣನದಲಿ
ಅನಂತ ಭಾವಾನುಭವದಿ ನಲಿಯಲಿ

ಭಕ್ತಿ ದಿವ್ಯಾನುಭವದಿ ಮುಳುಗಲಿ
ಜ್ಞಾನಾಮೃತವನ್ನು ಸವಿಯಲಿ

ಎನ್ನ ಮನ ಮಂದಿರದಲಿ ನೆಲೆಸು ನೀ ಮಹಿಮ ದೀಪ್ತಿ
ಸ್ವೀಕರಿಸು ಎನ್ನೀ ಪ್ರಾರ್ಥನ ಸ್ತುತಿ



ಬೆಂಗಳೂರಿನ ಹೆಸರಾಂತ ಬಹುರಾಷ್ಟ್ರೀಯ ಸಾಫ್ಟ್‌ವೇರ್ ಕಂಪನಿಯಲ್ಲಿಯೊಂದರಲ್ಲಿ ಮಾನವ ಸಂಪನ್ಮೂಲ ವಿಭಾಗದಲ್ಲಿ ಉದ್ಯೋಗಿಯಾಗಿರುವ ಪ್ರಶಾಂತ್, ಹುಟ್ಟಿ ಬೆಳೆದಿದ್ದೆಲ್ಲ ಬೆಂಗಳೂರಿನಲ್ಲಿ. ಸಾಕಷ್ಟು ಕನ್ನಡ ಪುಸ್ತಕಗಳನ್ನು ಓದಿರುವ ಇವರು ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಗಳಿಗೆ ಸಂಬಂಧಿಸಿದ ಚಟುವಟಿಗೆಳಲ್ಲಿ ಸದಾ ನಿರತರು. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ನಿರರ್ಗಳವಾಗಿ ಮಾತನಾಡಬಲ್ಲರು. ಇಂಥಾ ಒಂದು ಸಂವಾದದಲ್ಲೇ ಇವರು ನಮ್ಮ ಮಿತ್ರ ಅರುಣ ಅವರಿಗೆ ಪರಿಚಯವಾದದ್ದು. ಟಿಪಿಬಳಗ ನಡೆಸುತ್ತಿರುವ ಚಟುವಟಿಕೆಗಳನ್ನು ಮೆಚ್ಚಿರುವ ಪ್ರಶಾಂತ್, ಅದಕ್ಕಾಗಿಯೇ ಇಲ್ಲಿ ಒಂದೆರಡು ಕವನಗಳನ್ನು ಬರೆದು ಕಳಿಸಿದ್ದಾರೆ. ಓದಿ ನಿಮ್ಮ ಅಭಿಪ್ರಾಯ ತಿಳಿಸಿ.

## ಅವರ್ಣನೀಯ ಸೌಂದರ್ಯ – ಪ್ರಶಾಂತ ಶಿವಶಂಕರ , ಬೆಂಗಳೂರು

ಬಲುದೂರ ನಿನ್ನ ಸೌಂದರ್ಯದಾಳ
ಮನದಾಳಕ್ಕಿಳಿದರು ಭೇದಿಸಲ್ ಅಸಾಧ್ಯ ಅವರ್ಣನೀಯ ಜಾಲ

ಜಾಲಾಡಿದರೂ ಸಕಲ ಸೃಷ್ಟೀಯ ಮೂಲ
ನಿನ್ನ ಚೆಲುವಿಗೆಲ್ಲೂ ಉತ್ತರವಿಲ್ಲ

ಸೃಷ್ಟೀಯೇ ಮಂಕಾಗಿ ನಿನ್ನ ಚೆಲುವ ನೋಡುತಿಹುದಲ್ಲ
ನಿನ್ನ ಸೌಂದರ್ಯದ ಪ್ರತಿಬಿಂಬ ಕನ್ನಡಿಯೂ ನಂಬುತಿಲ್ಲ

ಕಲ್ಪನಾ ಕೊಟೇಯೇ ಈ ಚೆಲುವು ಮೀರುತಿಹುದಲ್ಲ
ಹೇಳಿ ಮಾಡಿಸಿದರೂ ಬ್ರಹ್ಮನಿಂದ ಈ ರೂಪ ಸಾಧ್ಯವಿಲ್ಲ

ಸರ್ವಾನಂದ ನಾಧಗಳಿಗೊಳಿಸಿದರೂ ಮನತೃಪ್ತಿಇಲ್ಲ
ಮನಮೆಚ್ಚಿದ ಚೆಲುವೆಯ ವರ್ಣಿಸುವಷ್ಟು ಭೂತ ಭವಿಷ್ಯದಲ್ಲೂ ಭಾಷೆಯಿಲ್ಲ.

# ಕನ್ನಡ ಕವಿಗೆ ಟಿಪಿಬಳಗ ಹಾಗೂ ಮಿತ್ರರ ಅಳಿಲು ಸೇವೆ

ಇತ್ತೀಚೆಗೆ ಶ್ರೀಯುತ ವಿ. ಸಿ. ಐರಸಂಗ ಧಾರವಾಡ ಅವರನ್ನು ಕುರಿತು ಕನ್ನಡಪ್ರಭ ಪತ್ರಿಕೆಯಲ್ಲಿ ಪ್ರಕಟಗೊಂಡ ಲೇಖನವನ್ನಾಧರಿಸಿ ಪ್ರಕಾಶ್ ರಾಜಗೋಳಿ ಅವರು ತಮ್ಮ ಎಲ್ಲಾ ಮಿತ್ರ ಬಳಗಕ್ಕೆ ಸಹಾಯಕ್ಕಾಗಿ ಯಾಚಿಸಿದಾಗ ಉತ್ತಮ ಪ್ರತಿಕ್ರಿಯೆ ದೊರೆಯಿತು.

ಈ ದಿಸೆಯಲ್ಲಿ ಪ್ರಕಾಶ ಅವರು ಹಣವನ್ನು ಕೂಡಿಸಿ, ಪ್ರತ್ಯಕ್ಷವಾಗಿ ಶ್ರೀ ಐರಸಂಗ ಅವರನ್ನು ಭೆಟ್ಟಿ ಆಗಿ ಅದನ್ನು ಅವರಿಗೆ ಮುಟ್ಟಿಸುವ ಜವಾಬ್ದಾರಿ ಹೊತ್ತುಕೊಂಡರು. ಈ ಹಣವನ್ನು ಐರಸಂಗ ಅವರು ಕನ್ನಡ ಸಾಹಿತ್ಯ ಸೇವೆಗೆ ಬಳಸಿ ತಮ್ಮ ಕೃತಿ ರಚನೆ ಮತ್ತು ಪ್ರಕಟಣೆಯ ಕೆಲಸ ಮುಂದುವರೆಸುತ್ತೇವೆ ಎಂದು ತಿಳಿಸಿದ್ದಾರೆ.

ಸಹಾಯದ ವಿವರಣೆ ಈ ಕೆಳಗಿನಂತಿದೆ.

| | |
|---|---|
| ಶ್ರೀ. ಆರ್.ಕೆ.ಪಾಟೀಲ, ಬೆಂಗಳೂರು | ರೂ. 3000 |
| ಶ್ರೀ. ಶ್ರೀಕಾಂತ ಮತ್ತು ಶ್ರೀಮತಿ. ಶ್ರೀದೇವಿ ವನಕಿ, ಅಮೇರಿಕಾ | ರೂ. 2537 |
| ಶ್ರೀ. ಸತ್ಯನಾರಾಯಣ ಜೋಶಿ, ಆಸ್ಟ್ರೇಲಿಯಾ | ರೂ. 2500 |
| ಶ್ರೀ. ಪುಂಡಲಿಕ್ ಸತ್ಯನಾಯಕ , ಸೈಪ್ರಸ್ | ರೂ. 2000 |
| ಶ್ರೀ. ಶ್ರೀನಿವಾಸ ಗುಡಿ, ಅಮೇರಿಕಾ | ರೂ. 2000 |
| ಶ್ರೀ. ಜಗನ್ನಾಥ ಬಿಳಗಿ(ಯು.ಎ.ಇ) | ರೂ. 2000 |
| ಶ್ರೀ. ಅಶೋಕ ಗಿರಿ(ಬೆಂಗಳೂರು) | ರೂ. 1000 |
| ಹೆಸರು ಹೇಳಲಿಚ್ಚಿಸದ ಕನ್ನಡ ಸಾಹಿತ್ಯಾಭಿಮಾನಿ(ಪುಣೆ) | ರೂ. 1000 |
| ಶ್ರೀಮತಿ. ಆಶಾ ಪಾಟೀಲ (ಬೆಂಗಳೂರು) | ರೂ. 500 |
| ಶ್ರೀ. ಬಸವರಾಜ ಹಾಗೂ ಶ್ರೀಮತಿ ನಯನಾ ಯಾದವಾಡ ಮತ್ತು ವಿಠ್ಠಲ ಜ್ಝಳಕಿ , ಬೆಂಗಳೂರು | ರೂ. 500 |
| ಶ್ರೀ. ಗಿರೀಶ ಮೆಠಗುಡ್ಡಮಠ , ಬೆಂಗಳೂರು | ರೂ. 500 |
| ಶ್ರೀ. ಬಸವರಾಜ ಜವಳಗಿ, ಬೆಂಗಳೂರು | ರೂ. 500 |
| ಶ್ರೀ. ಆನಂದ ಹಿರೇಮಠ, ಅಮೇರಿಕಾ | ರೂ. 500 |
| ಶ್ರೀ. ಅರುಣ ಯಾದವಾಡ, ಬೆಂಗಳೂರು | ರೂ. 250 |
| ಶ್ರೀ. ಪ್ರಮೋದ ಎಸ್.ಆರ್, ಬೆಂಗಳೂರು | ರೂ. 250 |
| ಶ್ರೀ. ಪ್ರಕಾಶ ಮತ್ತು ಶ್ರೀಮತಿ ದೀಪಾ ರಾಜಗೋಳಿ, ಬೆಂಗಳೂರು | ರೂ. 463 |
| ಶ್ರೀ. ಎನ್. ಹರೀಶ, ಬೆಂಗಳೂರು | ರೂ. 250 |
| ಶ್ರೀ. ಅನಿಲ್ ಮತ್ತು ಶ್ರೀಮತಿ. ಮೀನಾಕ್ಷಿ ಅಂಗಡಿ ,ಬೆಂಗಳೂರು | ರೂ. 251 |

**ಸಂಗ್ರಹವಾದ ಒಟ್ಟು ಹಣ** **ರೂ. 20,001**

(ಇಪ್ಪತ್ತು ಸಾವಿರದಾ ಒಂದು ರೂಪಾಯಿಗಳು ಮಾತ್ರ)

## ಕನ್ನಡದ ಖ್ಯಾತ ಕವಿ ವಿ ಸಿ ಐರಸಂಗ ಅವರ "ಬರೆದವನು ನಾನಲ್ಲ" ಕವನ ಸಂಕಲನದಿಂದ ಆಯ್ದ ಎರಡು ಸಾಂದರ್ಭಿಕ ಕವನಗಳು.

**ಹೊಸ ವರುಷ:**

ಹೊಸ ವರುಷವು ತರಲೆಮಗತಿ ಹರುಷವ
ಸುರಿಯಲಿ ಸಿರಿ ಸಂಪದ ಸಹಿತ
ನೆಲೆಸಲಿ ಶಾಂತಿಯು ಫಲಿಸಲಿ ತರುಮರ
ನ್ಯಾಯಕೆ ಗೆಲುವಾಗಲಿ ಸತತ

ಭ್ರಷ್ಟಾಚಾರ ಭಯೋತ್ಪಾದನೆಗಳ
ಬೇರುಗಳನೆ ಕಿತ್ತೆಸೆಯೋಣ
ಪ್ರಾಮಾಣಿಕತೆಯ ಬಿಡದಲೆ ದುಡಿಯುವ
ದೃಢ ನಿಶ್ಚಯವನು ಮಾಡೋಣ.

ವಿವಿಧೋದ್ಯಮಗಳ ಕ್ಷೇತ್ರದಿ ದಿನ ದಿನ
ಪ್ರಗತಿಯ ಸಾಧಿಸಿ ತೋರಿಸುವಾ
ದೇಶದ ಉನ್ನತಿಗಾಗಿಯೆ ಶ್ರಮಿಸುವ
ವಿಜಯದ ದುಂದುಭಿ ಬಾರಿಸುವಾ.

ಸಂಸ್ಕೃತಿ ಧರ್ಮಗಳೆನಿತೊ ಇದ್ದರು
ನಮ್ಮಯ ರಾಷ್ಟ್ರೀಯತೆ ಒಂದೆ
ಮಾತೃಭೂಮಿ ಭಾರತದ ಭವಿಷ್ಯವ
ಸುಂದರವಾಗಿಸುವಾ ಇಂದೆ.

**ಸಂಕ್ರಮಣದ ದಿನ**

ಮಕರವೃತ್ತವ ಮುಟ್ಟಿ ಮರಳುವ
ಸೂರ್ಯ ಸಂಕ್ರಮಣದ ದಿನ
ಸ್ವಾಗತಿಸಿ ಹೊಸ ಆಯನವನು ಸಂ–
ತೋಷಗೊಂಡಿವೆ ಜನಮನ

ನದಿಯ ಸ್ನಾನಕೆ ಹೋಗಿ ಬಂದರೆ
ಪಾವನವು ಈ ಜೀವನ
ದುರಿತಗಳು ದೂರಾಗುವವು ನೀ
ನೆನೆಯೆ ದೇವನ ಈದಿನ

ಸಡಗರದ ಉಡುಗೆಯಲಿ ಕಿರಿಯರು
ಮುದದಿ ನಮಿಸುತೆ ಹಿರಿಯರ
ಕೊಡುವರೆಳ್ಳೂ ಸಕ್ಕರೆಯ ಪಡೆ–
ಯುವರು ಹರಕೆಯ ಶುಭಕರ

ಮಕ್ಕಳನು ಎರೆಯುವರು ಕರಿ ಕು–
ಳ್ಳಿರಿಸಿ ಈ ದಿನ ಶುಭ ತಿಥಿ
ಹೆಂಗಳೆಯರಾನಂದದಲಿ ಬೆಳ–
ಗುವರು ಮಂಗಳದಾರತಿ

ಎಳ್ಳು ಬೆಲ್ಲವ ಕೊಡುವ ಕೊಳ್ಳುವ
ಮಾಡಿ ಸಮ ಸಿಹಿ ಕಹಿಗಳ
ಬಾಳ ಪಥದಲಿ ಮುಂದೆ ಸಾಗುವ
ಬಯಸುತಲಿ ಶುಭ ಮಂಗಳ.

# ಉಡಿ ತುಂಬುವ ಮತ್ತು ನಾಮಕರಣ ಸಂದರ್ಭದಲ್ಲಿನ ಜಾನಪದ ಗೀತೆಗಳು.

– ಶ್ರೀಮತಿ. ಶಾಂತಾ ಚಂದ್ರಶೇಖರ ರಾಜಗೋಳಿ, ಧಾರವಾಡ.

ಹೆಣ್ಣಿಗೆ ತಾಯ್ತನ ಒಂದು ಮಹದಾನಂದ ನೀಡುವ ಜೀವನದ ಘಟ್ಟ. ಯಾವದೇ ಸ್ತ್ರೀಯು ತಾನು ತಾಯಾಗಲಿರುವ ಸುದ್ದಿ ತಿಳಿದಾಗ ಮೊತ್ತ ಮೊದಲನೆಯದಾಗಿ ಈ ವಿಷಯವನ್ನು ತನ್ನ ಪತಿಯೊಂದಿಗೆ ಹಂಚಿಕೊಳ್ಳುತ್ತಾಳೆ. ದಂಪತಿಗಳಿಬ್ಬರಿಗೆ ತಾವು ತಂದೆ–ತಾಯಿಗಳಾಗುವ ವಿಷಯ ತಿಳಿದಾಗ ಅವರ ಆನಂದಕ್ಕೆ ಪಾರವೇ ಇರುವದಿಲ್ಲ.

ವಿಷಯ ತಿಳಿದ ಅವಳ ತಾಯಿ, ಮನೆ ಮಟ್ಟಕ್ಕೆ ಸೀಮಿತವಿರುವ ಕಳ್ಳ ಕುಬುಸ ಅಥವಾ ಸಂಕ್ಷಿಪ್ತ ಸೀಮಂತವನ್ನು ಮಾಡಿ ಸುಖಕರ ಹೆರಿಗೆಗೆ ಆಶೀರ್ವದಿಸುತ್ತಾಳೆ. ಆಮೇಲೆ ಈ ವಿಷಯವನ್ನು ಅಧಿಕೃತವಾಗಿ ಬೇರೆಯವರಿಗೆ ತಿಳಿಸಲಾಗುತ್ತದೆ. ಬಂಧುವರ್ಗದವರು, ಸ್ನೇಹಿತರು, ಆಪ್ತರು, ಹಿತೈಷಿಗಳು ದಂಪತಿಗಳಿಬ್ಬರಿಗೆ ಶುಭ ಹಾರೈಸುತ್ತಾರೆ. ನಮ್ಮ ಸಂಸ್ಕೃತಿಯಲ್ಲಿ ನಮ್ಮ ಮನೆಗಳಲ್ಲಾಗುವ ಶುಭ ಸಮಾರಂಭಗಳಿಗೆ ಬಂಧುಮಿತ್ರರನ್ನು ಕರೆಸಿ ಊಟ ಹಾಕಿಸಿ ಸುಖ ಹಂಚಿಕೊಳ್ಳುತ್ತಾರೆ. ಅಂಥ ಸಂದರ್ಭಗಳಲ್ಲಿ ನಮ್ಮ ಉತ್ತರ ಕರ್ನಾಟಕದಲ್ಲಿ ಬಳಕೆಯಲ್ಲಿರುವ ಜಾನಪದ ಗೀತೆಗಳ ಕೆಲವು ಸ್ಯಾಂಪಲ್ಲುಗಳನ್ನು ನಿಮ್ಮ ಮುಂದಿಡಲು ಬಯಸುತ್ತೇನೆ.

## ಉಡಿ ತುಂಬುವ ಹಾಡು – 1

ಒಂದೆಂಬು ತಿಂಗಳಿಗೆ ಒಂದೇನ ಬಯಸ್ಯಾಳ
ಒಂದೆಲೆ ವರದ ಎಳೆಹುಂಚಿ
ತಿಂದೆನೆಂಬುವಳ ಬಾಲಾನ ಬಯಕಿಗೆ ಆಕಿ ಬಯಸೆನೆಂಬುವಳ ।1।

ಎರಡೆಂಬು ತಿಂಗಳಿಗೆ ಎರಡೇನ ಬಯಸ್ಯಾಳ
ಎರಡೆಲೆ ವರದ ಎಳೆಹುಣಸೆ
ತಿಂದೆನೆಂಬುವಳ ಬಾಲಾನ ಬಯಕಿಗೆ ಆಕಿ ಬಯಸೆನೆಂಬುವಳ ।2।

ಮೂರೆಂಬು ತಿಂಗಳಿಗೆ ಮೂರೇನ ಬಯಸ್ಯಾಳ
ಮೂಡಲ ದಿಕ್ಕಿನ ಮಗಿಮಾವ
ತಿಂದೆನೆಂಬುವಳ ಬಾಲಾನ ಬಯಕಿಗೆ ಆಕಿ ಬಯಸೆನೆಂಬುವಳ ।3।

ನಾಕೆಂಬು ತಿಂಗಳಿಗೆ ನಾಕೇನ ಬಯಸ್ಯಾಳ
ಕಾಕಿಯ ಹಣ್ಣು ಕೈತುಂಬ
ತಿಂದೆನೆಂಬುವಳ ಬಾಲಾನ ಬಯಕಿಗೆ ಆಕಿ ಬಯಸೆನೆಂಬುವಳ ।4।

ಐದೆಂಬು ತಿಂಗಳಿಗೆ ಐದೇನ ಬಯಸ್ಯಾಳ
ಕೊಯ್ದು ಮಲ್ಲಿಗೆ ನೆನೆದಂಡೆ
ಕಟ್ಟೆನೆಂಬುವಳ ಬಾಲಾನ ಬಯಕಿಗೆ ಆಕಿ ಬಯಸೆನೆಂಬುವಳ ।5।

ಆರೆಂಬು ತಿಂಗಳಿಗೆ ಆರೇನ ಬಯಸ್ಯಾಳ
ಆರಾಕಿದ ಬಾನ ಕೆನಿಮುಸರ
ಉಂಡೆನೆಂಬುವಳ ಬಾಲಾನ ಬಯಕಿಗೆ ಆಕಿ ಬಯಸೆನೆಂಬುವಳ ।6।

ಏಳೆಂಬು ತಿಂಗಳಿಗೆ ಏಳೇನ ಬಯಸ್ಯಾಳ
ಹಲಸಿನ ಹೋಳಿಗಿ ಗೆಣಸಿನ ಹೋಳಿಗಿ ಹೂರಣದ ಹೋಳಿಗಿ ಸಜ್ಜಕದ
ಹೋಳಿಗಿ
ಇಷ್ಟು ದೀನಸ ಮಾಡಿ ತಿಂದೆನೆಂಬುವಳ ಬಾಲಾನ ಬಯಕಿಗೆ ಆಕಿ
ಬಯಸೆನೆಂಬುವಳ ।7।

ಎಂಟೆಂಬು ತಿಂಗಳಿಗೆ ಎಂಟೇನ ಬಯಸ್ಯಾಳ
ಕಂಟೆಲೆ ಎತ್ತ ಕರೆಬರಲಿ ಅಣ್ಣಯ್ಯ
ಹತ್ತೇನೆಂಬುವಳ ಬಾಲಾನ ಬಯಕಿಗೆ ಆಕಿ ಬಯಸೆನೆಂಬುವಳ ।8।

ಒಂಬತ್ತು ತಿಂಗಳಿಗೆ ತುಂಬ್ಯಾವ ದಿನಗೋಳ
ಸಂದಸಂದೆಲ್ಲಾ ಕಿರಿಬ್ಯಾನಿ
ಬಯಸೆನೆಂಬುವಳ ಗಂಡ ಮಗನ ಹಡದೆನೆಂಬುವಳ ।9।

– ೞ –

## ಉಡಿ ತುಂಬುವ ಹಾಡು – 2

ಬಾಳಿಕಾಯಿ ಬಾಳಫಲವ
ಜೋಡ ಗೊಣಿಗೊಳ ಜ್ಯೋತಿ ಎತ್ತಿರೆ
ಸಣ್ಣ ಮಳಲ ಸೀತಾದೇವಿಗೆ ಉಡಿಯತುಂಬಿರೆ ।1।

ಲಿಂಬಿ ಹಣ್ಣು ರಂಭೆ ಫಲವ
ಜೋಡಿ ಗೊಣಿಗೊಳ ಜ್ಯೋತಿ ಎತ್ತಿರೆ
ಸಣ್ಣ ಮಳಲ ಸೀತಾದೇವಿಗೆ ಉಡಿಯತುಂಬಿರೆ ।2।

ತೆಂಗಿನಕಾಯಿ ತೆಂಗ ಫಲವ
ಜೋಡಿ ಗೊಣಿಗೊಳ ಜ್ಯೋತಿ ಎತ್ತಿರೆ
ಸಣ್ಣ ಮಳಲ ಸೀತಾದೇವಿಗೆ ಉಡಿಯತುಂಬಿರೆ ।3।

ಉತ್ತತ್ತಿ ಹಣ್ಣು ಮೈತ್ರಿ ಫಲವ
ಜೋಡಿ ಗೊಣಿಗೊಳ ಜ್ಯೋತಿ ಎತ್ತಿರೆ
ಸಣ್ಣ ಮಳಲ ಸೀತಾದೇವಿಗೆ ಉಡಿಯತುಂಬಿರೆ ।4।

ಅತ್ತಿ ಹಣ್ಣು ಅತ್ತ ಫಲವ
ಜೋಡಿ ಗೊಣಿಗೊಳ ಜ್ಯೋತಿ ಎತ್ತಿರೆ
ಸಣ್ಣ ಮಳಲ ಸೀತಾದೇವಿಗೆ ಉಡಿಯತುಂಬಿರೆ ।5।

– ೞ –

## ಉಡಿ ತುಂಬುವ ಹಾಡು – 3

ಬಾಳಿಕಾಯ್ಗಳ ತಂದು ಬಾಲ್ಯಾರ ಉಡಿಗಳ ತುಂಬಿ
ಬಾಲಿ ಸೀತಕ್ಕ ನಿನ್ನ ಬಸರಾದ ಸಂಭ್ರಮವೇನ
ಕರಸಲಿಲ್ಲ್ಯಾಕ ನಮ್ಮನ್ನ ಮಂಗಳಾರುತಿಗೆ ಕರಸಲಿಲ್ಲ್ಯಾಕ ನಮ್ಮನ್ನ ।1।

ಲಿಂಬಿಕಾಯ್ಗಳ ತಂದು ರಂಬ್ಯಾರ ಉಡಿಗಳ ತುಂಬಿ
ರಂಬಿ ಸೀತಕ್ಕ ನಿನ್ನ ಬಸರಾದ ಸಂಭ್ರಮವೇನ
ಕರಸಲಿಲ್ಲ್ಯಾಕ ನಮ್ಮನ್ನ ಮಂಗಳಾರುತಿಗೆ ಕರಸಲಿಲ್ಲ್ಯಾಕ ನಮ್ಮನ್ನ ।2।

ಉತ್ತತ್ತಿಕಾಯ್ಗಳ ತಂದು ಉತ್ತ್ಯಾರ ಉಡಿಗಳ ತುಂಬಿ
ಉತ್ತಿ ಸೀತಕ್ಕ ನಿನ್ನ ಬಸರಾದ ಸಂಭ್ರಮವೇನ
ಕರಸಲಿಲ್ಲ್ಯಾಕ ನಮ್ಮನ್ನ ಮಂಗಳಾರುತಿಗೆ ಕರಸಲಿಲ್ಲ್ಯಾಕ ನಮ್ಮನ್ನ ।3।

ತೆಂಗಿನಕಾಯ್ಗಳ ತಂದು ತಂಗ್ಯಾರ ಉಡಿಗಳ ತುಂಬಿ
ತಂಗಿ ಸೀತಕ್ಕ ನಿನ್ನ ಬಸರಾದ ಸಂಭ್ರಮವೇನ
ಕರಸಲಿಲ್ಲ್ಯಾಕ ನಮ್ಮನ್ನ ಮಂಗಳಾರುತಿಗೆ ಕರಸಲಿಲ್ಲ್ಯಾಕ ನಮ್ಮನ್ನ ।4।

ಅತ್ತಿಕಾಯ್ಗಳ ತಂದು ಅತ್ತ್ಯಾರ ಉಡಿಗಳ ತುಂಬಿ
ಅತ್ತಿ ಸೀತಕ್ಕ ನಿನ್ನ ಬಸರಾದ ಸಂಭ್ರಮವೇನ
ಕರಸಲಿಲ್ಲ್ಯಾಕ ನಮ್ಮನ್ನ ಮಂಗಳಾರುತಿಗೆ ಕರಸಲಿಲ್ಲ್ಯಾಕ ನಮ್ಮನ್ನ ।5।

ಆಲ ಸಮುದರ ದಾಟಿ ಕೀಲ ಸಮುದರ ದಾಟಿ ಎಲ್ಲಾ ಸಮುದರ
ದಾಟಿ ನಿನ್ನ ತಂದೇವ ಸೀತಾ
ಕರಸಲಿಲ್ಲ್ಯಾಕ ನಮ್ಮನ್ನ ಮಂಗಳಾರುತಿಗೆ ಕರಸಲಿಲ್ಲ್ಯಾಕ ನಮ್ಮನ್ನ ।5।

ಆನೀಲೆ ಹೊನ್ನ ತರುವೆ ಒಂಟೀಲೆ ಜವಳಿ ತರುವೆ
ಬಂದ ಬೀಗರನೆಲ್ಲಾ ಸಿಂಗರಿಸಿ ನಾ ಕಳುವೆ
ಕರಸಲಿಲ್ಲ್ಯಾಕ ನಮ್ಮನ್ನ ಮಂಗಳಾರುತಿಗೆ ಕರಸಲಿಲ್ಲ್ಯಾಕ ನಮ್ಮನ್ನ ।6।

– ೦ –

ಹೀಗೆ ಸೀಮಂತದ ಸಂಭ್ರಮ ಆಚರಿಸಿಕೊಂಡ ಮುತ್ತೈದೆ ಮುಂದೊಂದು ದಿನ ಮುದ್ದಾದ ಮಗುವಿಗೆ ಜನ್ಮ ನೀಡುತ್ತಾಳೆ. ಮನೆಗೆ ಆಗಮಿಸಿದ ಹೊಸ ಅತಿಥಿಗೆ ಅಧಿಕೃತವಾಗಿ ಬರಮಾಡಿಕೊಳ್ಳುವದು ಆ ಮಗುವಿಗೆ ನಾಮಕರಣ ಮಾಡುವದರಿಂದ. ಇಂಥ ಸಂದರ್ಭದಲ್ಲೂ ನಮ್ಮಲ್ಲಿ ಅನೇಕ ಜಾನಪದ ಗೀತೆಗಳು ಬಳಕೆಯಲ್ಲಿವೆ.

**ನಾಮಕರಣ ಸಂದರ್ಭದ ಹಾಡು**

ಅಟ್ಟದ ಮ್ಯಾಲಿನ ತೊಟ್ಟಿಲ ತಗೊಂಡು
ಸೀರೆ ಸೆರಗಿಲೆ ಧೂಳಾ ಝಾಡಿಸಿ ಜೋ ಜೋ

ಅದಕ ಬೆಚ್ಚನ್ನ ಬಿಸಿನೀರ ಹೊಯ್ದಾಡಿ ತೊಳದ ಜೋ ಜೋ
ಗುಲಾಬಿ ಸಂಪಿಗಿ ಮಲ್ಲಿಗಿ ಜಾಜಿ ಹೂವ ತಂದ ಜೋ ಜೋ
ತೊಟ್ಟಿಲಾ ಶೃಂಗಾರ ಮಾಡಿರೆ ಜೋ ಜೋ
ಬಂಗಾರದ ತೊಟ್ಟಿಲ ಬೆಳ್ಳಿ ಸರಪಳಿಲೆ ತೂಗಿರೆ ಜೋ ಜೋ

ಹಾರೂರಗೇರ್ಯಾಗ ಹಾದ ಬಂದೆನವ್ವ
ಕರದ ಬಂದೆನ ಮಂದಿ ನೆರೆದು ಬಂದಿತ ಬಳಗ ಜೋ ಜೋ

ಒಕ್ಕಲುಗೇರ್ಯಾಗ ಹೊಕ್ಕಬಂದೆನವ್ವ
ಕರದ ಬಂದೆನ ಮಂದಿ ನೆರೆದು ಬಂದಿತ ಬಳಗ ಜೋ ಜೋ

ಅವರ ದೊಡ್ಡಪ್ಪನ ಕರೀರೆ ದೊರಕಿನ ಚೆಲುವರನ ಜೋ ಜೋ
ಅವರ ಹಡದಪ್ಪನ ಕರೀರೆ ಹಾರೂರಂತವನ ಜೋ ಜೋ

ಅವರ ಸೊದರತ್ತಿನ ಕರೀರೆ ಸೊಬಗಿನಗಿತ್ತಿಯನ ಜೋ ಜೋ
ಆಕಿ ಇನ್ನ ಕೂಗ್ಯಾಡಿ ಹೆಸರ ಇಡತಾಳ ಜೊ ಜೋ

ಬಟ್ಟಲ ಶ್ರೀಗಂಧ
ತೇಯ್ದು ಬಟ್ಟಲ ತುಂಬಿ
ಬೇಕ ಬೇಕ ಅಂತ ಹಚ್ಚಿದರ ಬ್ಯಾಡ ಬ್ಯಾಡ ಅಂತ ಅಳತಾನ ಜೋ ಜೋ

ಕೊಂಚಿಗಿ ಕುಲಾವಿ
ಗೊಂಚಲ ಬಿಳಿಮುತ್ತ
ಬೇಕ ಬೇಕ ಅಂತ ಕಟ್ಟಿದರ ಬ್ಯಾಡ ಬ್ಯಾಡ ಅಂತ ಅಳತಾನ ಜೋ ಜೋ

ಹಸರಂಗಿ ಹಾಲ್ಗಡಗ
ಕುಶಲದ ನಾಗಮುರಗಿ
ಬೇಕ ಬೇಕ ಅಂತ ಇಡಿಸಿದರ ಬ್ಯಾಡ ಬ್ಯಾಡ ಅಂತ ಅಳತಾನ ಜೋ ಜೋ

ಪರಡಿ ಪಾಯಸ ಮಾಡಿ
ಬಳದ ಬಟ್ಟಲ ತುಂಬಿ
ಬೇಕ ಬೇಕ ಅಂತ ಉಣಿಸಿದರ ಬ್ಯಾಡ ಬ್ಯಾಡ ಅಂತ ಅಳತಾನ ಜೋ ಜೋ

ನೀರಾಗ ನೆರಳಾಗಿ
ಸೂರ್ಯ ಚಂದ್ರಮ ನೋಡಿ
ಅದ ನೋಡಿ ಅದ ಬೇಕಂತ ಬಿಕ್ಕಿ ಬಿಕ್ಕಿ ಅಳತಾನ ಜೋ ಜೋ
ಶ್ರೀಕೃಷ್ಣ ಅದ ನೋಡಿ ಅದ ಬೇಕಂತ ಬಿಕ್ಕಿ ಬಿಕ್ಕಿ ಅಳತಾನ ಜೋ ಜೋ

ಈ ರೀತಿಯಾಗಿ ನಮ್ಮಲ್ಲಿ ಪ್ರತಿಯೊಂದು ಸಂದರ್ಭಕ್ಕೂ ಹೊಂದುವಂತಿರುವ ಜಾನಪದ ಗೀತೆಗಳನ್ನು ಬಳಸಿ ಬೆಳೆಸಿ ಉಳಿಸಬೇಕಾಗಿರುವದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಟಿ ಪಿ ಬಳಗದ ಎಲ್ಲ ಸದಸ್ಯರಿಗೆ ಮತ್ತು ಅವರ ಮನೆಯವರೆಲ್ಲರಿಗೂ ನನ್ನ ಶುಭಾಶಯಗಳು.

## ವರುಷದ ಕಂದ – ಶ್ರೀಮತಿ ಶುಭಶ್ರೀ. ಜಿ. ಬೆಳಂದೂರ. ಡೆಲ್‌ವೇರ್, ಕೊಲೆರಾಡೊ, ಯು.ಎಸ್.ಎ.

(ನಮ್ಮ ಮಗಳು ಸೌದಾಮಿನಿಗೆ ಕಳೆದ ಏಪ್ರಿಲ್‌ನಲ್ಲಿ ಒಂದು ವರುಷ ತುಂಬಿದ ಸಂದರ್ಭದಲ್ಲಿ ಬರೆದ ಕವನ)



ಮನೆಯ ಬೆಳಗಿದ ದೀಪಕೆ
ಮನವ ತಣಿಸುವ ಮೂರ್ತಿಗೆ
ನಮ್ಮ ಮನೆಯ ಪುಟ್ಟ ರತಿಗೆ
ವರುಷವಾಯಿತು ಇಂದಿಗೆ

ತನುವ ಕುಣಿಸಿ ಅತ್ತು ಕಾಡಿಸಿ
ನಮ್ಮ ಮಣಿಸಿ ಮುತ್ತು ಪೋಣಿಸಿ
ಸರವ ಧರಿಸಿದ ಮುಗುಧೆಗೆ
ವರುಷವಾಯಿತು ಇಂದಿಗೆ

ಮಿಂಚಿನಂತೆ ಹೊಳೆಯುತಿರುವ
ಸಂಚಿನಲ್ಲೇ ನಮ್ಮ ಸೆಳೆವ
ನಮ್ಮ ಮನೆಯ ಮಿಂಚುಳ್ಳಿಗೆ
ವರುಷವಾಯಿತು ಇಂದಿಗೆ

ಹರುಷ ಸುರಿಸುವ ಕಂದಗೆ
ಹೊಣೆಯ ಕಲಿಸಿದ ಬಾಲೆಗೆ
ನಮ್ಮ ಮನೆಯ ಚಾರುಲತೆಗೆ
ವರುಷವಾಯಿತು ಇಂದಿಗೆ

ನಮ್ಮ ಬಾಳಿನ ಗ್ರಂಥವ
ತನ್ನ ಹೆಸರಲಿ ಬರೆಯುತಿರುವ
ಈ ಪುಟ್ಟ ಕೃತಿಕರ್ತೃವಿಗೆ
ವರುಷವಾಯಿತು ಇಂದಿಗೆ

## ರೋಮಾಂಚಕಾರಿ ಪಯಣ – ಪ್ರಕಾಶ ಸಿ. ರಾಜಗೋಳಿ. ಬೆಂಗಳೂರು.

ನಾನು 9.7.2001 ರಂದು ರಿಮೋಟ್ ಪ್ಲೇಸ್ ಆದಂತ ಝಾರ್ಖಂಡ ರಾಜ್ಯದ ಜಮಶೇಡ್ಪುರದಿಂದ ಉದ್ಯಾನ ನಗರಿ ಬೆಂಗಳೂರು ತಲುಪಿದ ರೋಚಕ ಅನುಭವದ ವರ್ಣನೆ ಈ ಕೆಳಗಿನಂತಿದೆ.

ಸಮಯ ಬೆಳಿಗ್ಗೆ 11 :
ಸ್ಥಳ: ಹೋಟೆಲ್ ರೂಮ್.
ಕಸ್ಟಮರ್ ಮೀಟ್ ಮಾಡಲು ತರಾತುರಿಯ ತಯಾರಿಯಲ್ಲಿದ್ದಾಗ... ಬೆಂಗಳೂರಿನಿಂದ ನನ್ನ ಹೋಟೆಲ್ ರೂಮಿಗೆ ನಮ್ಮ ಜಿ.ಎಮ್ ಫೋನ್ ಮಾಡಿ "ತಕ್ಷಣ ಹೊರಟು ಬಾ. ಇಂಪಾರ್ಟಂಟ್ ಟ್ರೈನಿಂಗ್ ಅಟೆಂಡ್ ಮಾಡಬೇಕು. ಎಮ್.ಡಿ ಇಸ್ ಲೂಕಿಂಗ್ ಫಾರ್ ಯು" ಅಂದುಬಿಟ್ಟ.

ಸಮಯ ಬೆಳಿಗ್ಗೆ 11.30 :
ಸ್ಥಳ: ಟ್ರಾವೆಲ್ ಏಜೆಂಟರ ಆಫೀಸು–ಜಮಶೇಡ್ಪುರ.

ನಾನು ಬೆಂಗಳೂರು ತಲುಪಬೇಕಾದ ಅನಿವಾರ್ಯತೆ ವಿವರಿಸಿ ಕಲ್ಕತ್ತಾದಿಂದ ಬೆಂಗಳೂರಿಗೆ ಏರ್ ಟಿಕೆಟ್ ಕೇಳಿದೆ. ಆಗ ಅವರು ನಾವೇನೊ ಏರ್ ಟಿಕೆಟ್ ಇಶ್ಯು ಮಾಡಬಹುದು ಆದ್ರ ನೀವು ಸಾಯಂಕಾಲ 6.05 ಕ್ಕಿಂತ ಮೊದಲೆ ಕಲ್ಕತ್ತಾ ಏರ್ಪೋರ್ಟ್ ತಲುಪದಿದ್ದರೆ ರಾತ್ರಿ 7.10 ಕ್ಕೆ ಬೆಂಗಳೂರಿಗೆ ಇರೊ ವಿಮಾನ ತಪ್ಪಿಸಿಗೊತೇರಿ ಅಲ್ಲದ 8,000 ರೂಪಾಯಿ ಕಳಕೋತೀರಿ ಅಂತ ತಾಕೀತು ಮಾಡಿದ್ರು. ಮೇಲಾಗಿ ಅದ್ಯಾವ ಕಾನ್ಫಿಡೆನ್ಸಿನಿಂದ ಹೇಳಿದ್ರೋ ಗೊತ್ತಿಲ್ಲ ನೀವು ಕಲ್ಕತ್ತಾಕ್ಕ ಹೋಗಿ ಮುಟ್ಟೋದು ಹ್ಯಾಂಗ ಅಂತ ಮೊದಲು ವಿಚಾರ ಮಾಡ್ರಿ ಅಲ್ಲಿ ನಿಮಗೆ ಏರ್ ಟಿಕೆಟ್ ಸಿಕ್ಕೆ ಸಿಕ್ತಾವ ಅಂತ!!!!

ಸರಿ ಹ್ಯಾಂಗ ಮುಟ್ಟೋದು ಕಲ್ಕತ್ತಾ? ಅರಗಾಡದಾಗ ಇರೋ ಜಮಶೇಡ್ಪುರದಿಂದ ಕಲ್ಕತ್ತಾಗೆ ಹೋಗುವ ರೈಲು ಹೋಗಿಯಾಗಿದೆ! ನಮ್ಮಲ್ಲಿರುವಂತ ಕೆಂಪು ಮಾರಿ ಬಸ್ ಸರ್ವೀಸು ಅಲ್ಲಿ ಇಲ್ಲ!! ಮುಂದೇನು ಮಾಡುವದು? ವಿಚಾರ ಮಾಡ್ತಾ ಮೆಟ್ಟಿಲು ಇಳೀತಾ ಇದ್ದೆ. ಫ್ಲಾಶ್ ಆತು ಮನಸ್ಸಿಗೆ ಕಾರ್ ಗಾಡಿ ಮಾಡಿಕೊಂಡು ಹ್ವಾದ್ರ ಹ್ಯಾಂಗ? ಸರಿ ನಾನು ಟೆಲ್ಕೊಗೆ ಹೋಗಲು ಪಿಕ್ ಅಪ್ಪಿಗೆ ಬಂದಿದ್ದ ಕಾರಿನ ಡ್ರೈವರನನ್ನು ವಿಚಾರಿಸಿದೆ. ಆತ ಅರ್ಧ ಮನಸ್ಸಿನಿಂದ ಮಧ್ಯಾಹ್ನ 12 ಕ್ಕ ಇಲ್ಲಿಂದ ಬಿಟ್ರ ಸಂಜಿ 6ಕ್ಕ ಕಲ್ಕತ್ತಾ ಮುಟ್ಟಬಹುದು ಯಾಕಂದ್ರ ಮಳಿಗಾಲ ದಿವಸ ಅಂದ. ಅನ್ಯಥಾ ಶರಣಂ ನಾಸ್ತಿ... ಕಾರ್ ತುಗೊಂಡು ಬಾ ಅಂದೆ. ಅವ ಇದೆ ಸಿಕ್ತು ಚಾನ್ಸು ಅಂತೇಳಿ ರೂ.5 ಪರ್ ಕಿಲೊಮೀಟರ್ ಚಾರ್ಜ್ ಮಾಡ್ತೇನಿ ಹೊಗಾ ಬರೊ ದೂರ ಸೆರಿಸಿ(300+300 ಕಿ.ಮೀ) ರೂ 3000 ಕೊಡಬೇಕು ಅಂದ. ವಿಧಿ ಇಲ್ಲ. ಆಗ್ಲಿ ನಾನು ಹೋಟೆಲ್ಲಿಗೆ ಹೋಗಿ ಚಕ್ ಔಟ್ ಮಾಡಕೊಂಡು ಬರ್ತೀನಿ ನೀ ಪೆಟ್ರೋಲ್ ಹಾಕಿಸಿಕೊಂಡು ಬಾ ಅಂತ ರೂ. 2000 ಕೊಟ್ಟು ಬಿಟ್ಟೆ. ಸರಿ ಅಂವ ತನ್ನ ಕಟ್ಟರಾ ಅಂಬಸಡಾರ್ ಗಾಡಿ ಬಿಟ್ಟು ಇದ್ದಿದ್ದರಾಗ ಅಡ್ಡಿ ಇಲ್ಲ ಅನ್ನುವಂಥ ಮಾರುತಿ ಓಮ್ನಿ ತುಗೊಂಡು ಬಂದ.

ಸಮಯ ಮಧ್ಯಾಹ್ನ 12.10:
ಹೊಟೆಲ್ನಿಂದ ಚೆಕ್ ಔಟ್ ಮಾಡಿ ಗಡಿಬಿಡಿಯಿಂದ ಒಂಚೂರು ಹೊಟ್ಟೆಗೆ ಹಾಕಿ ಕಾರ್ ಏರಿದೆ. ಶುರುವಾಯ್ತು ನೋಡಿ ನನ್ನ ಪ್ರಯಾಣ.
ಅಬ್ಬ ಅಲ್ಲಿನ ರೋಡ್ಸೆ!!! ನ್ಯಾಶಿನಲ್ ಹೈವೇ 33 ನಲ್ಲಿ(100 ಕಿ ಮೀ ದೂರ )ರೋಡ್ ತುಂಬ ತಗ್ಗು ದಿನ್ನಿ. ಕಾರ್ 80 ಕಿ ಮೀ/ಗಂಟೆ ಒಡ್ತಾ ಇದೆ. ನಾನು ಸೀಟಿನಲ್ಲಿ ಪುಟಿದೇಳ್ತಾ ಇದ್ದೇನೆ, ಶರ್ಟ್ ಕಿಸೆಯೊಳಗಿನ ವಸ್ತುಗಳು ಕೆಳಗೆ ಬೀಳ್ತಾ ಇವೆ. ನಾನು ಸರಿಪಡಿಸಿಕೊಳ್ಳೊವಷ್ಟರಲ್ಲಿ ಮತ್ತೆ ಪುಟಿತ!!!

ಸಮಯ ಮಧ್ಯಾಹ್ನ 2.00 :
ನಮ್ಮ ಕಾರ್ ಎನ್.ಎಚ್ 6 ಗೆ ಸೇರಿಕೊಂಡ್ತು ರೋಡ್ ಚೆನ್ನಾಗಿದೆ ಆದ್ರ ಟ್ರಾಫ಼ಿಕ್ ಜಾಸ್ತಿ ಮತ್ತು ವಿಪರೀತ ಮಳೆ!!!!

ಇಲ್ಲೂ ಕೂಡ ಕಾರಿನ ವೇಗ 80ರ ಕೆಳಗಿಲ್ಲ!!!

ಸಮಯ ಸಾಯಂಕಾಲ 5.15:
ಕಲ್ಕತ್ತಾದ ಹೊರವಲಯದಲ್ಲಿ ಇದ್ದೇವೆ. ಅಲ್ಲಿಂದ ಏರಪೋರ್ಟ್ ತಲುಪೊ ದಾರಿ ನಮ್ಮ ಡ್ರೈವರ್ಗೆ ಗೊತ್ತಿಲ್ಲ!!!! ಅವರಿಗಿವರಿಗೆ ಕೇಳ್ತಾ ಇದ್ದಾನೆ. ಈತ ಹಿಂದಿಯಲ್ಲಿ ಕೇಳಿದ್ರೆ ಅವರು ಬೆಂಗಾಲಿನಲ್ಲಿ ಉತ್ತರ ಕೊಡ್ತಾ ಇದ್ದಾರೆ!!!! ಎಲ್ಲ ಯದ್ವಾತದ್ವಾ ಆಗ್ತಾ ಇದೆ. ನನಗೆ ಟೆನ್ಶನ್ ಜಾಸ್ತಿ ಆಗ್ತ ಇದೆ.

ಸಮಯ ಸಾಯಂಕಾಲ 5.35 :
ಟ್ರಾಫ್ಫಿಕ್ ಜಾಮಿನಲ್ಲಿ ಸಿಕ್ಕಿ ಹಾಕಿಕೊಂಡಿದ್ದೇವೆ. ಮುಂದಿನ ದಾರಿ ಗೊತ್ತಿಲ್ಲ. ಬುದ್ಧಿ ಓಡಿಸಿದೆ. ಲೋಕಲ್ ಟ್ಯಾಕ್ಸಿಗೆ ಬುಕ್ ಮಾಡಿ ಅಲ್ಲಿ ಸಾಮಾನು ಸಮೇತ ವರ್ಗಾವಣೆಯಾಗಿ ನನ್ನ ಬೆಂಗಳೂರು ವಿಮಾನ ಹಿಡಿಯೊ ವಿಚಾರ ಹೇಳಿ ಬೇಗ ತಲುಪಿಸಲು ರಿಕ್ವೆಸ್ಟ್ ಮಾಡ್ಕೊಂಡೆ. ಥ್ಯಾಂಕ್ಸ್ ಟು ದ್ಯಾಟ್ ಡ್ರೈವರ್ ಅಂವ ನೊ ಎಂಟ್ರಿ ನೋಡ್ಲಿಲ್ಲ, ಸಿಗ್ನಲ್ ನೋಡ್ಲಿಲ್ಲ, ಸಂದಿ ಗೊಂದಿ ಒಳಗಿಂದ ಹಾಸಿ ಹಾದ್ಯಾಗ ಅಡ್ಡ ಬರೋರ್ಗೆ ಟಿಪಿಕಲ್ ಬಂಗಾಳಿ ಬೈಯ್ಗಳ ಬಯ್ಕೊಂತ ಗಾಡಿ ಒಡಿಸ್ತಾ ಇದ್ದಾನೆ. ನಾನು ಜೀವ ಕಯ್ಯಾಗ ಹಿಡಕೊಂಡು ಕುಂತೇನಿ. ದೇವರಿಗೆ ನೆನಸ್ತಾ ಇದ್ದೇನೆ. ಇವತ್ತು ವಿಮಾನ ಮಿಸ್ ಆದ್ರ ಕಲ್ಕತ್ತಾದೊಳಗ ವಸ್ತಿ ಇರಬೇಕು ಮತ್ತು ಮರುದಿವಸ ಸಂಜೀಕ ಬೆಂಗಳೂರು ಮುಟ್ಟಬೇಕು ಯಾಕಂದ್ರ ಬೆಂಗಳೂರಿಗೆ ನೆಕ್ಸ್ಟ ವಿಮಾನ ಇರೋದು ಮಂಗಳವಾರ ಮಧ್ಯಾಹ್ನ 1.40ಕ್ಕೆ!!! ಅಂದ್ರ ಟ್ರೈನಿಂಗಿನ ಎರಡನೇ ದಿನಾನು ನಾನು ಗೈರ್ ಹಾಜರ್ ಆಗ್ತೇನಿ ಎಮ್.ಡಿ ಹಿಡಕೊಂಡು ಎಲ್ಲಾರ್ ಹತ್ರಾನು ಬೈಸ್ಕೊತೀನಿ. ಮುಂದೇನಾಗುವದೊ....

ಸಮಯ ಸಾಯಂಕಾಲ 7.00 :
ಸ್ಥಳ : ಕಲ್ಕತ್ತಾ ಏರ್ ಪೋರ್ಟ್

ಇಂಡಿಯನ್ ಏರ್ಲೈನ್ಸ್ ಕೌಂಟರಿನಲ್ಲಿ ಟಿಕೆಟ್ ಕೇಳ್ತಾ ಇದ್ದೇನೆ!!! ವಿಮಾನ ಇರೋದು 7.20 ಕ್ಕೆ ಮತ್ತು ಪುಣ್ಯವಶಾತ್ ವಿಮಾನದಾಗ ಸೀಟ್ ಅದಾವ!!!!!! ಬೇಗ ಟಿಕೆಟ್ ಇಸ್ಯು ಮಾಡ್ರೆಪ ಅಂದ್ರ ಕ್ಯಾಶ್ ಕೊಡು ಅಂತಾರ ನನ್ನ ಕಡೆ ಅಷ್ಟು ಕ್ಯಾಶ್ ಇಲ್ಲ!! ಸರಿ ಕ್ರೆಡಿಟ್ ಕಾರ್ಡ್ ಉಜ್ಜಿ ಟಿಕೆಟ್ ತುಗೊಂಡು ಟ್ರಾಲಿಗಾಗಿ ಕಾಯದೆ ಕಯ್ಯಾಗ ಒಂದು ಬಗಲಾಗ ಒಂದು ಲಗ್ಗೇಜ್ ಹಿಡಕೊಂಡು ಹುಚ್ಚುನಾಯಿ ಬೆನ್ನು ಹತ್ತಿದಾಗ ಓಡುವವರಂತೆ ಓಡಿ ಏರ್ಪೋರ್ಟ್ ಎಂಟರ್ ಆದೆ. ಲಗ್ಗೇಜ್ ಸೆಕ್ಯುರಿಟಿ ಚೆಕ್-ಇನ್ ಮಾಡಿಸಿ ಸೀಟ್ ನಂಬರ್ ತುಗೊಂಡು ನನ್ನ ಸೆಕ್ಯುರಿಟಿ ಚೆಕ್-ಇನ್ ದತ್ತ ಓಡಿದೆ. ಅದೂ ಆಯ್ತು. ವಿಮಾನದತ್ತ ಓಡಬೇಕು ಆವಾಗ ಅಲ್ಲಿನ ಆಫೀಸರ್ ನನ್ನ ತಡೆದು ನಿಲ್ಲಿಸಿ ವಿಮಾನಕ್ಕೆ ಹೇರಲು ತಯಾರಾಗಿದ್ದ "ನಿಮ್ಮ ಲಗ್ಗೇಜ್ ಐಡೆಂಟಿಫ್ಹಾಯ್ ಮಾಡ್ರಿ" ಅಂದ!!! ಯಾಕಂದ್ರ ಅದು ಇಂಡಿಯನ್ ಏರ್ಲೈನ್ಸ್!! ಸರಿ ಅದೂ ಆಯ್ತು. ಮೆಟ್ಟಲೇರಿ ವೇಟಿಂಗ್ ರೂಮ್ ಕಡೆ ಹೊಗ್ತಾ ಇದ್ದೇನೆ...

ಸಮಯ ಸಾಯಂಕಾಲ 7.15 :
ಇಂಡಿಯನ್ ಏರ್ಲೈನ್ಸನ ಐ ಸಿ 771 ಬೆಂಗಳೂರಿಗೆ ಹೋಗೋ ವಿಮಾನದ ಪಾರ್ಶ್ವ ಬಾಗಿಲು ಲಾಕ್ ಆಗಿದೆ!!! ಅಯ್ಯೋ ಶಿವನೆ ಇದೇನಾತು ಎಷ್ಟೆಲ್ಲ ಕಷ್ಟ ಪಟ್ಟು ಬಂದ್ರೂ ಹಿಂಗಾಯ್ತಲ್ಲ.... ಆದ್ರ ಒಂದು ಧೈರ್ಯ ಲಗ್ಗೇಜ್ ವಿಮಾನದಾಗ ಹೊಗೇತಿ ಅಂದ್ರ ನನ್ನ ಅವರು ಕರಕೊಂಡೆ ಹೊಗ್ಬೇಕು.
ನನ್ನ ತೊಂದರೆ ಅರಿತವನಂತೆ ಅಲ್ಲಿದ್ದ ಇನ್ನೊಬ್ಬ ಏನು
ಎಂಬಂತೆ ಹುಬ್ಬೇರಿಸಿದ. ಎಲ್ಲ ವಿವರಿಸಿದೆ. "ಐ ಆಮ್ ಆಲ್ಸೊ ಫ಼್ಲಾಯಿಂಗ್ ಇನ್ ದ ಸೇಮ್ ಫ಼್ಲಾಯಿಟ್.." ಒಹೋ ಮರುಭೂಮಿಯಲ್ಲಿ ಓಯಸಿಸ್ ಸಿಕ್ತು. ಸಾವರಿಸಿಕೊಂಡು ಆಜೂ ಬಾಜೂ ನೋಡಿದ್ರೆ ಅಲ್ಲಿ ಇರೋ ಎಲ್ಲರೂ ಅದೇ ವಿಮಾನದಾಗ ಪ್ರಯಾಣ ಮಾಡಾವ್ರೆ!!!!! ವಿಮಾನ ಡಿಲೇ ಆಗಿದೆ!!!!! ನಾನು ಸಾವರಿಸಿಕೊಂಡೆ. ಮುಂದೆ ಅಂತೂ ಇಂತೂ ಇಂಡಿಯನ್ ಸಂಜೆ 7.45 ಕ್ಕೆ ಹೊರಟ ನಮ್ಮ ವಿಮಾನ ರಾತ್ರಿ 10.15ಕ್ಕೆ ಸುರಕ್ಷಿತವಾಗಿ ಬೆಂಗಳೂರು ತಲುಪಿತು. ನಾನು ಕಡೀ ಸೀಟಿನಲ್ಲಿ ಕುಂತು ಬಂದೆ ಧಡಕಿ ಭಾಳ ಆತು!!!

## ಟಿಪಿಬಳಗ ಪದಬಂಧಕ್ಕೆ ಸರಿಯುತ್ತರಗಳು :



ಪದಬಂಧಕ್ಕೆ ಸರಿಯುತ್ತರಗಳು ನಿರಂತರದ ಯುಗಾದಿ ಸಂಚಿಕೆಯಲ್ಲಿ ..!

# ನಿಮ್ಮ ಓಲೆಗಳು:

ನಮ್ಮ ಪ್ರಪ್ರಥಮ ಪ್ರಯತ್ನ ನಿರಂತರಕ್ಕೆ ಮೂಡಿ ಬಂದ ಪ್ರತಿಕ್ರಿಯೆಗಳು.

ಈ ಸಂಚಿಕೆ ಅದ್ಭುತವಾಗಿ ಮೂಡಿ ಬಂದಿದೆ. ಇಂಥಾ ಒಂದು ಸುಂದರ ಸಂಚಿಕೆಯನ್ನು ಹೊರ ತರಲು ನೆರವಾದ ನಮ್ಮ ಸ್ನೇಹಿತರಿಗೆ ಧನ್ಯವಾದಗಳು.

**– ತಾಹೀರ. ಸನದಿ.**

ಭಾರೀ ಚಲೊ ಬಂದದರಿ.

Great job..!

**– ಮೃಣಾಲಿನಿ ಗುಡಿ.**

Hi Arun,
Hats off to your efforts.
The complete credit should go to YOU only.
ನಿರಂತರ ಅದ್ಭುತವಾಗಿ ಮೂಡಿ ಬಂದಿದೆ.

**– ಪ್ರಕಾಶ ರಾಜಗೋಳಿ.**

ಈ ಸಂಚಿಕೆ ಸಿಂಪ್ಲಿ ಸುಪರ್ಬ್..! ಈ ಸಂಚಿಕೆಯನ್ನು ನಿಗದಿತ ಸಮಯಕ್ಕೆ ಹೊರ ತರುವಲ್ಲಿ ಶ್ರಮಿಸಿದ ಅರುಣ. ಯಾದವಾಡ ಮತ್ತು ಉಳಿದೆಲ್ಲಾ ಮಿತ್ರರಿಗೆ ಧನ್ಯವಾದಗಳು. ಹಾಗೂ ನಾವಂದುಕೊಂಡಂತೆ ಇದು ನಿಯಮಿತವಾಗಿ ತ್ರೈಮಾಸಿಕವಾಗಿ ಮೂಡಿ ಬರಲಿ. ಹಾಗೆಯೇ ಮುಂದಿನ ಸಂಚಿಕೆಗಳಿಗೆ ಸಾಕಷ್ಟು ಸಂಖ್ಯೆಯಲ್ಲಿ ಲೇಖನಗಳು ಹರಿದು ಬರಲಿ.

**– ಶ್ರೀಕಾಂತ. ಎಸ್. ಕೆ.**

ಬಹಳೇ ಚೆನ್ನಾಗಿದೆ..ಒಳ್ಳೆ ಕೆಲಸ ಮಾಡಿದ್ದೀರಾ.
ಗಿರೀಶ, ಬಿಳಗಿ, ನಾಯಕ ಹಾಗೂ ವಾಲಿ ನಮ್ಮೊಂದಿಗೆ ಒಟ್ಟಿಗೆ ಕೆಲಸ ಮಾಡಿದ ದಿನಗಳನ್ನು ಎಂದಿಗೂ ಮರೆಯಲಾಗದು.

**– ಗಾಯತ್ರಿ ಮೇಡಮ್, IISc.**

ದೀಪಾವಳಿ ವಿಶೇಷಾಂಕ ಸುಂದರ ಹೆಸರಿನೊಂದಿಗೆ ತುಂಬಾ ಚೆನ್ನಾಗಿ ಮೂಡಿ ಬಂದಿದೆ. ಬೆಂಗಳೂರು ದೂರದರ್ಶನ ಹಾಗೂ ಮಧುರೈ ಬಗೆಗಿನ ಲೇಖನಗಳು ಚೆನ್ನಾಗಿವೆ. ಇಂಥಾ ಒಂದು ಸುಂದರ ಸಂಚಿಕೆಯನ್ನು ಹೊರ ತರಲು ನೆರವಾದ ನಮ್ಮ ಸ್ನೇಹಿತರಿಗೆ ಧನ್ಯವಾದಗಳು.

ನಿಮ್ಮ ಈ 'ನಿರಂತರ'ದ ಉತ್ಸಾಹ 'ಚಿರಂತನ'ವಾಗಿರಲಿ ಎಂದು ಆಶಿಸುತ್ತ,
ಧನ್ಯವಾದಗಳೊಂದಿಗೆ,

**– ಶುಭಶ್ರೀ ಬೆಳಂದೂರ.**

ಅಣ್ಣಪ್ಪಾ,
ನಿರಂತರ ವಿಶೇಷಾಂಕ ಭರ್ಜರಿಯಾಗಿ ಮೂಡಿ ಬಂದಿದೆ. ಯಶಸ್ಸಿನ ಸಿಂಹ ಪಾಲು ನಿನಗೇ ಸಲ್ಲಬೇಕು. ಒಟ್ಟಿನಲ್ಲಿ ಇದೊಂದು ಅಸಾಮಾನ್ಯ ಪ್ರಯತ್ನ. ಅದೇ ಕಾರಣಕ್ಕೆ ಎಲ್ಲರ ಪ್ರಶಂಸೆಗೆ ಒಳಗಾಗಿದೆ.

**– ಗಿರೀಶ. ಮೆಟಗುಡಮಠ (ಸ್ವಾಮಿ)**

ಕಳೆದ ಎರಡು ವಾರಗಳಿಂದ ಹಲವಾರು ಕಾರಣಗಳಿಂದ 'ನಿರಂತರ'ವನ್ನು ಓದುವದೇ ಆಗಿರಲಿಲ್ಲ. ಇವತ್ತು ಆಫ್ಹೀಸಿನ್ಯಾಗ ಗಟ್ಟಿ ಮನಸ್ಸು ಮಾಡಿ ಡೌನ್‌ಲೋಡ್ ಮಾಡಿ ಪೂರ್ತಿ ಓದಿ ಬಿಟ್ಟೆ. ಈ ವಿಶೇಷಾಂಕ ಭಾಳ ಅಂದರ ಭಾಳ ಚಲೋ ಬಂದೈತಿ. ನಾನು ಇಷ್ಟು ಚಲೋ ಬರತೈತಿ ಅಂತಾ ಅಂದುಕೊಂಡಿರಲಿಲ್ಲಾ. ಇದನ್ನ ಓದಿದ ಮ್ಯಾಲ ನನಗ ಮತ್ತ ಒಂದು ನೂರು ಹೊಸಾ ಬರಾಕ ಹತ್ತ್ಯಾವು. ಅದರ ಬಗ್ಗೆ ಆಮ್ಯಾಗ ಬರೀತೆನಿ.

ಈ ಸಲದ ವಿಶೇಷಾಂಕಕ್ಕ ನಾನು ಎಷ್ಟೇ ತ್ರಾಸ ಆದರೂ ಒಂದೆರಡು ಪ್ರಾಸಬದ್ಧವಾದ ಚುಟುಕುಗಳನ್ನು ಬರೆದು ಕಳಿಸುವೆ. ಭಾಳ ದಿವಸದಿಂದ ತೆಲ್ಯಾಗ ಅದಾವು.. ಆದರ ಪೇಪರ ಮ್ಯಾಲ ಬರವಲ್ಲವು..!

ನಾ ಅಂತೂ ಈ ವಿಶೇಷಾಂಕದ ಒಂದು ಕಲರ್ ಪ್ರಿಂಟ್ ಹಾಕಿಸಿ ಬೈಂಡ್ ಮಾಡಿಸಿಡಬೇಕಂತ ಮಾಡೆನಿ. ಅಷ್ಟ ಚಲೋ ಮೂಡಿ ಬಂದದ ನಿರಂತರ. ಇಂಥಾ ಒಂದು ಸುಂದರ ಸಂಚಿಕೆಯನ್ನು ಹೊರ ತರುವಲ್ಲಿ ಶ್ರಮಿಸಿದ ನಮ್ಮ ಸ್ನೇಹಿತರಿಗೆ ಧನ್ಯವಾದಗಳು.

ನಿರಂತರ ಹೀಗೆ ನಿರಂತರವಾಗಿ ಮೂಡಿ ಬರಲಿ.
ಹೊಸ ವರ್ಷಕ್ಕೆ ಹೊಸ ಹರುಷವ ತರಲಿ.
**– ಬಸು. ಯಾದವಾಡ**

ಟಿ ಪಿ ಬಳಗದ ಸದಸ್ಯರೆ ನನ್ನ ಪರಿಚಯ ನಿಮ್ಮಲ್ಲಿ ಕೆಲವರಿಗಷ್ಟೆ ಇದೆ ಎನಿಸುತ್ತದೆ. ನಿಮ್ಮ ಈ ನಿರಂತರ ಎಂಬ ದೀಪಾವಳಿ ವಿಶೇಷಾಂಕದ ಬಗ್ಗೆ ನಮ್ಮ ಅಣ್ಣ ಸ್ಯಾಪ್ ರಾಜ್ ಹೇಳಿದಾಗ ಅವುಗಳನ್ನು ಓದಿ ಕೆಲವು ನನ್ನ ಅನಿಸಿಕೆಗಳನ್ನು ಬರೆಯುತ್ತಿದ್ದೇನೆ.
ಎಲ್ಲಾ ಲೇಖನಗಳೂ, ಕವನಗಳೂ ಮತ್ತು ಪ್ರವಾಸ ಕಥನಗಳು ತುಂಬಾ ಚೆನ್ನಾಗಿ ಮೂಡಿ ಬಂದಿವೆ. ಸ್ಯಾಪ್ ರಾಜ್ ಬರೆದ ವಾಷಿಂಗ್ಟನ್ ಭೇಟಿಯ ಲೇಖನದಲ್ಲಿ ಲ್ಯುರೆಕ್ಯಾವರ್ನ್ಸದ ಫೊಟೊಗಳಿದ್ದರೆ ಇನ್ನೂ ಚೆನ್ನಾಗಿರತಿತ್ತು.
**– ಮೀನಾಕ್ಷಿ ಅನಿಲ್ ಅಂಗಡಿ**

– o –

ಅಂತರ್ಜಾಲದಲ್ಲಿ ನಮ್ಮ ವಿಳಾಸ:

**http://groups.yahoo.com/group/tpbalaga/**

ನಿಮ್ಮ ಅಭಿಪ್ರಾಯ, ಅನಿಸಿಕೆ, ಟೀಕೆ, ಟಿಪ್ಪಣಿಗಳನ್ನು ದಯವಿಟ್ಟು ಈ ಕೆಳಕಂಡ ಈ-ಮೇಲ್ ವಿಳಾಸಕ್ಕೆ ಕಳುಹಿಸಿ.

**tpbalaga@yahoo.com**

## ಕೃತಜ್ಞತೆಗಳು:

- ಈ ಸಂಚಿಕೆಯನ್ನು ಹೊರತರುವಲ್ಲಿ ಎಲ್ಲಾ ರೀತಿ ಸಲಹೆ ಸೂಚನೆಗಳನ್ನು ನೀಡಿದ, ಪ್ರೋತ್ಸಾಹಿಸಿದ ನಮ್ಮ ಟಿಪಿಬಳಗದ ಎಲ್ಲ ಸ್ನೇಹಿತರಿಗೆ
- ಈ ಸಂಚಿಕೆಗೆ ವಿಶೇಷವಾಗಿ ತಮ್ಮ ರಚನೆಗಳನ್ನು ಕಳಿಸಿದ ಶ್ರೀಮತಿ ಶಾಂತಾ ಸಿ. ರಾಜಗೋಳಿ, ಶ್ರೀಮತಿ ಎಮ್.ಬಿ. ರಾಜಗೋಳಿ, ಶ್ರೀಮತಿ ಮೀನಾಕ್ಷಿ. ಏ. ಅಂಗಡಿ ಹಾಗೂ ಶ್ರೀ ಪ್ರಶಾಂತ್ ಶಿವಶಂಕರ್ ಅವರಿಗೆ,
- ಈ ಸಂಚಿಕೆಯನ್ನು ಓದಿ , ಆನಂದಿಸಿ ತಮ್ಮ ಮುಕ್ತ ಅಭಿಪ್ರಾಯ ತಿಳಿಸಲಿರುವ ನಮ್ಮ ಎಲ್ಲ ಸ್ನೇಹಿತ ವೃಂದಕ್ಕೆ

## ನಮ್ಮ ನಮ್ಮ ಹಾಸ್ಟೆಲ್‌ಗಳು... !

**2ನೇ ಹಾಸ್ಟೆಲ್, ಬಿ.ವಿ.ಬಿ. ಇಂಜಿನಿಯರಿಂಗ್ ಹಾಗೂ ತಾಂತ್ರಿಕ ಮಹಾವಿದ್ಯಾಲಯ, ಹುಬ್ಬಳ್ಳಿ.**



**3ನೇ ಹಾಸ್ಟೆಲ್ ಬಿ.ವಿ.ಬಿ. ಇಂಜಿನಿಯರಿಂಗ್ ಹಾಗೂ ತಾಂತ್ರಿಕ ಮಹಾವಿದ್ಯಾಲಯ, ಹುಬ್ಬಳ್ಳಿ.**



## ಬೇಲೂರು ಶಿಲ್ಪ ಕಲಾ ವೈಭವ

ಛಾಯಾಗ್ರಹಣ : ಅರುಣ ಆರ್. ಯಾದವಾಡ, ಬೆಂಗಳೂರು.

